ಕರ್ನಾಟಕ ಸರ್ಕಾರ

# ಸಂಸದೀಯ ವ್ಯವಹಾರಗಳ ಇಲಾಖೆ
# ಹಾಗೂ
# ಪದವಿ ಪೂರ್ವ ಶಿಕ್ಷಣ ಇಲಾಖೆ ವತಿಯಿಂದ

# ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ನಡೆಸಲಾಗುತ್ತಿರುವ ಜಿಲ್ಲಾ
# ಹಾಗೂ
# ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ 2017–2018

## ಮಾಹಿತಿ ಕೈಪಿಡಿ 2017–18

**ಸಂವ್ಯಶಾಇ 05 ಯು.ಸಂ.ಸ್ಪ 2017**

# ಸಂಸದೀಯ ವ್ಯವಹಾರಗಳ ಇಲಾಖೆ
# ಹಾಗೂ
# ಪದವಿ ಪೂರ್ವ ಕಾಲೇಜು ಶಿಕ್ಷಣ ಇಲಾಖೆ

## ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ನಡೆಸಲಾಗುತ್ತಿರುವ ಜಿಲ್ಲಾ
## ಹಾಗೂ
## ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ 2017–2018

## ಮಾಹಿತಿ ಕೈಪಿಡಿ 2017–18

**ಸಂವ್ಯಶಾಇ 05 ಯು.ಸಂ.ಸ್ಪ 2017**

# ವಿಷಯಸೂಚಿ


| ಕ್ರಮ ಸಂಖ್ಯೆ | ವಿಷಯಗಳು | ಪುಟ ಸಂಖ್ಯೆ |
|---|---|---|
| 1 | 2017–18ನೇ ಸಾಲಿನಲ್ಲಿ ಪದವಿಪೂರ್ವ ಶಿಕ್ಷಣ ವಿದ್ಯಾರ್ಥಿಗಳಿಗೆ ಜಿಲ್ಲಾ ಹಾಗೂ ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ ಕಾರ್ಯಕ್ರಮಗಳನ್ನು ನಡೆಸುವ ಬಗ್ಗೆ ಸಂಸದೀಯ ವ್ಯವಹಾರಗಳ ಇಲಾಖೆ ನೀಡಿರುವ ಮಾರ್ಗಸೂಚಿಗಳು | 1 |
| 2 | ಜಿಲ್ಲಾ ಮಟ್ಟದ ಹಾಗೂ ರಾಜ್ಯಮಟ್ಟದ ಯುವ ಸಂಸತ್ ಸ್ಪರ್ಧೆಯ ಮಾರ್ಗಸೂಚಿಗಳು | 2–3 |
| 3. | ಯುವ ಸಂಸತ್ ಮಾದರಿ ಪ್ರಶ್ನೆಗಳ ಪಟ್ಟಿ (ಅನುಬಂಧ–I) | 4–7 |
| 4. | ಯುವ ಸಂಸತ್ ಕಾರ್ಯಕಲಾಪಗಳ ಮಾದರಿ ಪಟ್ಟಿ (ಅನುಬಂಧ–II) | 8–12 |
| 5. | ಯುವ ಸಂಸತ್ ಸ್ಪರ್ಧೆ ನಡೆಸುವ ಪದ್ಧತಿ ಮತ್ತು ಕಾರ್ಯವಿಧಾನ ಬಗ್ಗೆ ಟಿಪ್ಪಣಿ (ಅನುಬಂಧ–III) | 13–31 |
| 6. | ಮಾದರಿ ಕಾರ್ಯಕ್ರಮಗಳು (ಅನುಬಂಧ–ಎ ಮತ್ತು ಬಿ) | 32–33 |
| 7. | ಜಿಲ್ಲಾ ಮಟ್ಟದ ಮತ್ತು ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆಗಳಲ್ಲಿ ಭಾಗವಹಿಸಿದ ಕಾಲೇಜುಗಳಿಗೆ ಹಾಗೂ ಬಹುಮಾನಿತರಿಗೆ ನೀಡುವ ಪ್ರಮಾಣ ಪತ್ರಗಳು | 37 |
| 8. | ಮಾದರಿ ಸಂತಾಪ ಸೂಚನೆ ಪ್ರಸ್ತಾವ | 38 |
| 9. | ಶಾಸನ ರಚನೆ – ಮಾದರಿ ವಿಧೇಯಕ | 39–47 |
| 10. | ತೀರ್ಪುಗಾರರ ಮಾದರಿ ಅಂಕಪಟ್ಟಿ | 48 |
| 11. | ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿದ ಸ್ಪರ್ಧೆಗಳ ಪಟ್ಟಿ – (ಕಾಲೇಜಿನ ಹೆಸರು, ಸ್ಪರ್ಧಾರ್ಥಿಗಳ ಹೆಸರು) | 49 |


**ವೆಬ್ ವಿಳಾಸ. www.dpal.kar.nic.in.**

**ಅ.ಸ.ಪತ್ರ ಸಂಖ್ಯೆ: ಸಂವ್ಯಶಾಇ 04 ಯುಸಂಸ್ಪ 2017** **ದಿನಾಂಕ: 17.08.2017.**

**ಮಾನ್ಯರೆ,**

**ವಿಷಯ:** 2017–18ನೇ ಸಾಲಿನಲ್ಲಿ ಪದವಿಪೂರ್ವ ಶಿಕ್ಷಣ ವಿದ್ಯಾರ್ಥಿಗಳಿಗೆ ಜಿಲ್ಲಾ ಹಾಗೂ ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ ಕಾರ್ಯಕ್ರಮಗಳನ್ನು ನಡೆಸುವ ಬಗ್ಗೆ

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2017–18ನೇ ಸಾಲಿನಲ್ಲಿ, ಪದವಿಪೂರ್ವ ಶಿಕ್ಷಣ ವಿದ್ಯಾರ್ಥಿಗಳಿಗೆ ಯುವ ಸಂಸತ್ ಸ್ಪರ್ಧೆ ಕಾರ್ಯಕ್ರಮಗಳನ್ನು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ನಡೆಸುವ ಬಗ್ಗೆ ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ಅನುಸರಿಸಿ, ಅವಶ್ಯಕ ಪೂರ್ವತಯಾರಿ ಕ್ರಮಗಳನ್ನು ಕೂಡಲೇ ಕೈಗೊಂಡು ವರದಿಯನ್ನು ಇಲಾಖೆಗೆ ತುರ್ತಾಗಿ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ.

1. 2017–18ನೇ ಸಾಲಿನ ಯುವ ಸಂಸತ್ ಸ್ಪರ್ಧೆಗಳನ್ನು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಕಳೆದ ಸಾಲಿನಂತೆ ಆಯೋಜಿಸುವ ಸಲುವಾಗಿ ಈ ಕೆಳಕಂಡ ಷರತ್ತುಗಳನ್ನು ಒಳಗೊಂಡ ಸುತ್ತೋಲೆಯನ್ನು ಹೊರಡಿಸುವಂತೆ ತಿಳಿಸಿದೆ.
   (1) ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನು ಆಯೋಜಿಸಲು ಪ್ರತಿ ಜಿಲ್ಲೆಯ Deputy Director ಅಧ್ಯಕ್ಷತೆಯಲ್ಲಿ ರಾಜ್ಯಶಾಸ್ತ್ರದ ಉಪನ್ಯಾಸಕರನ್ನು ಒಳಗೊಂಡ ಒಂದು ಸಮಿತಿಯನ್ನು ರಚಿಸಿ, ಈ ಇಲಾಖೆಯಿಂದ ನಿಯೋಜಿತಗೊಂಡ ಅಧಿಕಾರಿಗಳ ಹಾಗೂ ಆಹ್ವಾನಿತ ವಿಧಾನಸಭೆ ಸದಸ್ಯರ ಸಮಕ್ಷಮದಲ್ಲಿ ಸ್ಪರ್ಧೆಗಳನ್ನು ಆಯೋಜಿಸತಕ್ಕದ್ದು.
   (2) ಪ್ರತಿ ಜಿಲ್ಲೆಯಿಂದ ಕನಿಷ್ಠ 60 ಸ್ಪರ್ಧಾಳುಗಳ ಹೆಸರು, ತರಗತಿ ಹಾಗೂ ಕಾಲೇಜಿನ ವಿವರ ಮತ್ತು 1 ಮತ್ತು 2ನೇ ಸ್ಥಾನವನ್ನು ಪಡೆದ ವಿಜೇತರ ಹೆಸರು, ತರಗತಿ ಹಾಗೂ ಕಾಲೇಜಿನ ವಿವರ ಹಾಗೂ ಕಾರ್ಯಕ್ರಮದ ಕನಿಷ್ಠ 3 ಭಾವಚಿತ್ರಗಳನ್ನು ನಿರ್ದೇಶಕರಿಗೆ ಹಾಗೂ ಈ ಇಲಾಖೆಗೆ ಕಳುಹಿತಕ್ಕದ್ದು.
   (3) ರಾಜ್ಯ ಮಟ್ಟದ ಸ್ಪರ್ಧೆಗಳನ್ನು ಡಿಸೆಂಬರ್–2017ರ ಕೊನೆಯ ವಾರದೊಳಗೆ ಆಯೋಜಿಸಲು ಉದ್ದೇಶಿಸಿರುವುದರಿಂದ, ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನು ನವೆಂಬರ್–2017ರ ಕೊನೆಯ ವಾರದೊಳಗೆ ಆಯೋಜಿಸಲು ತುರ್ತು ಕ್ರಮ ತೆಗೆದುಕೊಳ್ಳುವುದು;
   (4) ಸದರಿ ಕಾರ್ಯಕ್ರಮಗಳ ಆಯೋಜನೆ ಬಗ್ಗೆ ಈ ಇಲಾಖೆಯ ಗಮನಕ್ಕೆ ತರದೆ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ;
   (5) ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದ Deputy Director ಗಳಿಗೆ ನಿರ್ದೇಶಕರು ಅನುದಾನ ಮೊತ್ತವನ್ನು ಬಿಡುಗಡೆ ಮಾಡತಕ್ಕದ್ದಲ್ಲ ಮತ್ತು ಯಾವುದೇ ವ್ಯತ್ಯಯಗಳು ಉಂಟಾದಲ್ಲಿ ಸಂಬಂಧಪಟ್ಟ Deputy Director ರನ್ನು ಜವಾಬ್ದಾರರನ್ನಾಗಿ ಮಾಡಲಾಗುವುದು.
2. ಜಿಲ್ಲಾ ಮಟ್ಟದ ಸ್ಪರ್ಧೆಯನ್ನು ಆಯೋಜಿಸಲು ಇಲಾಖಾ ವತಿಯಿಂದ ನೇಮಕ ಮಾಡಿರುವ ನೋಡಲ್ ಅಧಿಕಾರಿಗಳ ಹೆಸರು, ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನೊಳಗೊಂಡ ವಿವರಣಾ ಪಟ್ಟಿಯನ್ನು ತ್ವರಿತವಾಗಿ ಈ ಇಲಾಖೆಗೆ ಒದಗಿಸುವಂತೆ ಕೋರಿದೆ.

ಆದರಗಳೊಂದಿಗೆ,

**ತಮ್ಮ ನಂಬುಗೆಯ,**

**ಇವರಿಗೆ,**

ಶ್ರೀಮತಿ ಶಿಖಾ,

ನಿರ್ದೇಶಕರು,

ಪದವಿ ಪೂರ್ವ ಶಿಕ್ಷಣ ಇಲಾಖೆ,

18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು.

**ಜಿಲ್ಲಾಮಟ್ಟದ ಹಾಗೂ ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆಯ ಮಾರ್ಗಸೂಚಿಗಳು:– ಇದು ಲೋಕಸಭೆಯ ಮಾದರಿ/ಅಣಕು ಪ್ರದರ್ಶನವಾಗಿರತಕ್ಕದ್ದು**

**1. ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯ ವ್ಯವಸ್ಥೆ:–** ಸಂಬಂಧಪಟ್ಟ ಶೈಕ್ಷಣಿಕ ಜಿಲ್ಲೆಗಳ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ತಮ್ಮ ಜಿಲ್ಲೆಯ ನೋಡಲ್ ಅಧಿಕಾರಿ ಹಾಗೂ ರಾಜಕೀಯ ಶಾಸ್ತ್ರದ ಉಪನ್ಯಾಸಕರೊಬ್ಬರು ಸಿಬ್ಬಂದಿಯ ಸಮನ್ವಯದೊಂದಿಗೆ ಯುವ ಸಂಸತ್ ಸ್ಪರ್ಧೆಯನ್ನು ಸರ್ಕಾರ ನಿಗದಿಪಡಿಸಿದ ಕಾಲಮಿತಿಯೊಳಗೆ ವ್ಯವಸ್ಥಿತವಾಗಿ ನಡೆಸತಕ್ಕದ್ದು. ಸ್ಪರ್ಧೆಗಾಗಿ ಉತ್ತಮ ವೇದಿಕೆ, ಧ್ವನಿವರ್ಧಕ, ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಉಪಹಾರ, ಸ್ಪರ್ಧಾವಿಜೇತರಿಗೆ ಬಹುಮಾನ, ಮುಂತಾದವನ್ನು ಪ್ರತಿ ಜಿಲ್ಲೆಗೆ ನೀಡಲಾಗುವ ಅನುದಾನದಿಂದ ಏರ್ಪಾಡು ಮಾಡತಕ್ಕದ್ದು.

**2. ಯುವ ಸಂಸತ್ ಸ್ಪರ್ಧೆಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ವಿಧಾನ.–** ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಗಳಿಗೆ ಕರ್ನಾಟಕ ರಾಜ್ಯದ ಮಾನ್ಯತೆ ಪಡೆದ ಜಿಲ್ಲೆಯ ಎಲ್ಲಾ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳ ಪ್ರತಿನಿಧಿಗಳು ಸ್ಪರ್ಧೆಯಲ್ಲಿ ಭಾಗವಹಿಸುವ ಅರ್ಹತೆ ಹೊಂದಿರುವುದರಿಂದ ಸುಮಾರು 60 ರಿಂದ 90 ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಅವಕಾಶ ನೀಡಬೇಕು. ಇದಕ್ಕಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ಈ ಮುಂದೆ ಹೇಳಿದ ಅರ್ಹತೆಗಳನ್ನು ಸಾಮಾನ್ಯವಾಗಿ ಪರಿಗಣಿಸಬೇಕು.

(1) ಚರ್ಚಿಸುವ ಸಾಮರ್ಥ್ಯವಿರುವ ವಿದ್ಯಾರ್ಥಿಗಳು.

(2) ನಮ್ಮ ದೇಶದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳ ಬಗ್ಗೆ ಸಾಕಷ್ಟು ಚೆನ್ನಾಗಿ ತಿಳಿದುಕೊಂಡ ವಿದ್ಯಾರ್ಥಿಗಳು.

(3) ತಮ್ಮ ತಮ್ಮ ತರಗತಿಗಳಲ್ಲಿ ಉತ್ತಮ ಮೆರಿಟ್ ಪಡೆದಿರುವ ವಿದ್ಯಾರ್ಥಿಗಳು.

(4) ಮುಖಂಡತ್ವದ ಗುಣಗಳಿರುವ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳು.

(5) ಪ್ರಥಮ ವರ್ಷದ ಹಾಗೂ ದ್ವಿತೀಯ ವರ್ಷದ ಪದವಿ ಪೂರ್ವ ಶಿಕ್ಷಣದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು.

ಪ್ರತಿ ವರ್ಷವೂ ಹೊಸ ವಿದ್ಯಾರ್ಥಿಗಳ ಗುಂಪುಗಳಿಗೆ ಆದ್ಯತೆ ನೀಡಿ, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತೆ ನೋಡಿಕೊಳ್ಳಬೇಕೆಂದು ಮತ್ತು ಪ್ರಶ್ನೋತ್ತರ ಅವಧಿಯಲ್ಲಿ ಮತ್ತು ಇತರ ಶಾಸನ–ಕಲಾಪಗಳ ಅವಧಿಯಲ್ಲಿ ಆಯ್ಕೆ ಮಾಡಿದ ವಿಷಯಗಳಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಸಂಗ್ರಹಿಸುವಂತೆ ಅವರಿಗೆ ಸೂಚಿಸಬೇಕು. ವಿದ್ಯಾರ್ಥಿನಿಯರಿಗೂ ಯುವ ಸಂಸತ್ತಿನಲ್ಲಿ ಭಾಗವಹಿಸಲು ಸಮಾನ ಅವಕಾಶ ನೀಡತಕ್ಕದ್ದು.

**3. ಸ್ಪರ್ಧೆ ನಡೆಸುವ ವಿಧಾನ.–** ಕೇಂದ್ರ ಸರ್ಕಾರವು ಒದಗಿಸಿರುವ ಮಾದರಿ ಪ್ರಶ್ನೆಗಳ ಪಟ್ಟಿ ಇದನ್ನು ಅನುಬಂಧ–2, ಕಾರ್ಯಕಲಾಪಗಳ ಒಂದು ಮಾದರಿ ಪಟ್ಟಿ ಅನುಬಂಧ–3, 1998ರ ಕೇಂದ್ರ ಸರ್ಕಾರದ ಯುವ ಸಂಸತ್ ಸ್ಪರ್ಧೆಯ ಒಂದು ಟಿಪ್ಪಣಿ ಅನುಬಂಧ–4ರಲ್ಲಿ ಒದಗಿಸಲಾಗಿದೆ. ಇದರೊಂದಿಗೆ ಲೋಕ ಸಭೆ ಹಾಗೂ ರಾಜ್ಯ ಸಭೆಗಳ ವೆಬ್‌ಸೈಟ್ http://loksabha.gov.inಹಾಗೂ http://rajyasabha.gov.in http://dpal.kar.nic.in ಇವುಗಳಲ್ಲಿ ಲಭ್ಯವಿರುವ ಮಾಹಿತಿಗಳನ್ನು ಪಡೆದು ಸ್ಪರ್ಧೆಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸಬಹುದು.

4. ***ಪ್ರಾದೇಶಿಕ ಮಟ್ಟದ ಸ್ಪರ್ಧೆಗಳು.–*** ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನು ಉಪ ನಿರ್ದೇಶಕರ ನೇತೃತ್ವದಲ್ಲಿ ವಿಷಯ ತಜ್ಞರು ಹಾಗೂ ವಿಧಾನ ಸಭೆ/ವಿಧಾನ ಪರಿಷತ್ತು/ಜಿಲ್ಲಾ ಪಂಚಾಯತ್ ಅಧ್ಯಕ್ಷ/ಸದಸ್ಯರ ಮಾರ್ಗದರ್ಶನದಲ್ಲಿ ನಡೆಸತಕ್ಕದ್ದು. ಪ್ರತಿಯೊಂದು ಜಿಲ್ಲೆಯಿಂದ ಅಂಕಗಳ ಆಧಾರದ ಮೇಲೆ ಆಯ್ಕೆಯಾದ ಪ್ರಥಮ ಐದು ವಿದ್ಯಾರ್ಥಿಗಳನ್ನು ಪ್ರಾದೇಶಿಕ ಮಟ್ಟದ ಸ್ಪರ್ಧೆಗೆ ಅರ್ಹ ಅಭ್ಯರ್ಥಿಗಳೆಂದು ಪರಿಗಣಿಸಲಾಗುವುದು.

ಪ್ರಾದೇಶಿಕ ಮಟ್ಟದ ಸ್ಪರ್ಧೆಗಳಲ್ಲಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಜಂಟಿ ಕಾರ್ಯದರ್ಶಿ ಹುದ್ದೆಗೆ ಕಡಿಮೆ ಇಲ್ಲದ ಅಧಿಕಾರಿಗಳು ತೀರ್ಪುಗಾರರಾಗಿ ಭಾಗವಹಿಸುವರು ಕಾಲೇಜು ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ದರ್ಜೆಗೆ ಕಡಿಮೆ ಇಲ್ಲದ ಅಧಿಕಾರಿಗಳು ಹಾಗೂ ಇಲಾಖೆಯ ಉನ್ನತ ಅಧಿಕಾರಿಗಳು ತೀರ್ಪುಗಾರರಾಗಿರುವರು. ಪ್ರಾದೇಶಿಕ ಮಟ್ಟದಲ್ಲಿ ಆಯ್ಕೆಯಾದ ಒಟ್ಟು 60 ವಿದ್ಯಾರ್ಥಿಗಳನ್ನು (ಅಂಕಗಳ ಆಧಾರದ ಮೇಲೆ) ರಾಜ್ಯ ಮಟ್ಟದ ಸ್ಪರ್ಧೆಗೆ ಆಹ್ವಾನಿಸಲಾಗುವುದು.

***5. ರಾಜ್ಯ ಮಟ್ಟದ ಸ್ಪರ್ಧೆಗಳು.–*** ರಾಜ್ಯ ಮಟ್ಟದ ಸ್ಪರ್ಧೆಗಳನ್ನು ಡಿಸೆಂಬರ್ ಅಥವಾ ಜನವರಿ ತಿಂಗಳ ಮೊದಲ ವಾರದಲ್ಲಿ ಅಥವಾ ಎರಡನೇ ವಾರದಲ್ಲಿ ಬೆಂಗಳೂರಿನಲ್ಲಿ ನಡೆಸಲಾಗುವುದು. ಸದರಿ ಸ್ಪರ್ಧೆಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಮಾಹಿತಿ ಮತ್ತು ಮಾರ್ಗದರ್ಶನಗಳನ್ನು ಸೂಕ್ತ ಸಮಯದಲ್ಲಿ ನೀಡಲಾಗುವುದು.

*ಅನುಬಂಧ* – **I**

*ಯುವ ಸಂಸತ್ ಮಾದರಿ ಪ್ರಶ್ನೆಗಳ ಪಟ್ಟಿ*

**ಮೌಖಿಕ ಉತ್ತರಗಳಿಗಾಗಿ ಪ್ರಶ್ನೆಗಳ ಪಟ್ಟಿ**

ಡೈರಿಗಳನ್ನು ಸ್ಥಾಪಿಸುವುದಕ್ಕಾಗಿ ನೆರವು

**223.** ಶ್ರೀ .......................................

ಮಾನ್ಯ ಕೃಷಿ ಮತ್ತು ರೈತರ ಕಲ್ಯಾಣಮಂತ್ರಿಗಳು ದಯವಿಟ್ಟು ಉತ್ತರಿಸುವರೆ:

(ಎ) ದೇಶದಲ್ಲಿ ಡೈರಿಗಳನ್ನು ಸ್ಥಾಪಿಸುವುದಕ್ಕಾಗಿ ವಿವಿಧ ರಾಜ್ಯಗಳಿಗೆ ಸರ್ಕಾರವು ಹಣಕಾಸಿನ ನೆರವು ನೀಡುತ್ತಿದೆಯೇ;

(ಬಿ) ಹಾಗಿದ್ದಲ್ಲಿ, ಹಿಂದಿನ ಮೂರು ವರ್ಷಗಳು ಮತ್ತು ಪ್ರಸ್ತುತ ವರ್ಷದ ಅವಧಿಯಲ್ಲಿ, ರಾಜ್ಯವಾರು, ವಿವಿಧ ರಾಜ್ಯಗಳಿಗೆ ಸರ್ಕಾರವು ನೀಡಿರುವ ನೆರವಿನ ಮೊತ್ತದೊಂದಿಗೆ ಉದ್ದೇಶಕ್ಕಾಗಿನ ಯೋಜನೆಗಳ ಪ್ರಮುಖ ಲಕ್ಷಣಗಳನ್ನು ಒಳಗೊಂಡಂತೆ ಅದರ ವಿವರಗಳನ್ನು;

(ಸಿ) ಉನ್ನತ ಶ್ರೇಣೀಕರಣಗೊಂಡ ತಾಂತ್ರಿಕತೆಯೊಂದಿಗೆ ಡೈರಿ ಉತ್ಪಾದನಾ ವಲಯವನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಹೊಸ ಕೌಶಲಗಳನ್ನು ಬಳಸುವಲ್ಲಿ ಹಾಲು ಉತ್ಪಾದಕರ ತರಬೇತಿಗಾಗಿ ಸರ್ಕಾರವು ಯಾವುದೇ ಯೋಜನೆಯನ್ನು ಹೊಂದಿದೆಯೆ ಮತ್ತು

(ಡಿ) ಹಾಗಿದ್ದಲ್ಲಿ, ಅದರ ವಿವರಗಳು?

ಕಾನೂನುಬಾಹಿರ ವಲಸೆಗಾರರು

**225.** ಶ್ರೀ ................................................

ಮಾನ್ಯ ಗೃಹ ವ್ಯವಹಾರಗಳ ಮಂತ್ರಿಗಳು ದಯಪಟ್ಟು ಉತ್ತರಿಸುವರೆ;

(ಎ) ದೇಶದಲ್ಲಿನ ಕಾನೂನು ಬಾಹಿರ ವಲಸೆಗಾರರ ಸಂಖ್ಯೆ;

(ಬಿ) ಈ ಕನೂನುಬಾಹಿರ ವಲಸೆಗಾರರನ್ನು ಹುಡುಕಿ ತಾಯ್ನಾಡಿಗೆ ವಾಪಸ್ಸು ಕಳುಹಿಸಲು ಕೈಗೊಂಡ ಕ್ರಮಗಳು ಮತ್ತು ಅಂಥ ಕ್ರಮಗಳ ಫಲಿತಾಂಶಗಳನ್ನು;

(ಸಿ) ವಿಷಯದ ಕುರಿತಾಗಿ ಸರ್ಕಾರವು ಯಾವುದೇ ನಿರ್ದಿಷ್ಟ ಮತ್ತು ಪರಿಣಾಮಕಾರಿ ಯೋಜನೆಗಳನ್ನು ರೂಪಿಸಿದೆಯೇ; ಮತ್ತು

(ಡಿ) ಹಾಗಿದ್ದಲ್ಲಿ, ಅದರ ವಿವರಗಳು ಮತ್ತು ಮಾಡಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳು?

## ಹಕ್ಕಿ ಜ್ವರದ ಉಲ್ಬಣ

**226.** ಶ್ರೀ.............................................

ಮಾನ್ಯ ಕೃಷಿ ಮತ್ತು ರೈತರ ಕಲ್ಯಾಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ:

(ಎ) ದೇಶದ ವಿವಿಧ ಅಧಿಕೇಂದ್ರೀಯ ಪ್ರದೇಶಗಳಲ್ಲಿ ಹೆಚ್ಚು ರೋಗಕಾರಕಹಕ್ಕಿ ಜ್ವರವು ಉಲ್ಬಣಗೊಂಡಿದೆಯೆಂದು ವರದಿಯೊಗಿರುವುದು ನಿಜವೇ ಮತ್ತು ಹಾಗಿದ್ದಲ್ಲಿ, ಭಾರತದ ಆರ್ಥಿಕತೆಯ ಮೇಲೆ ಅದರ ಪರಿಣಾಮಗಳೊಂದಿಗೆ ಅದರ ವಿವರಗಳು;

(ಬಿ) ಹಕ್ಕಿಜ್ವರವನ್ನು ನಿಯಂತ್ರಿಸುವುದಕ್ಕಾಗಿ ಮತ್ತು ಹತೋಟಿಗೆ ತರುವುದಕ್ಕಾಗಿ ಸರ್ಕಾರವು ತೆಗೆದುಕೊಂಡಿರುವ ಹಲವಾರು ಮುಂಜಾಗ್ರತಾ ಕ್ರಮಗಳು;

(ಸಿ) ಹಕ್ಕಿ ಜ್ವರವು ಆಗಿಂದಾಗ್ಗೆ ಉಲ್ಬಣಗೊಳ್ಳುತ್ತಿರುವುದಕ್ಕೆ ಕಾರಣಗಳನ್ನು ಹುಡುಕಲು ಸರ್ಕಾರದ ಮೂಲಕ ಯಾವುದೇ ಅಧ್ಯಯನವನ್ನು ಕೈಗೊಳ್ಳಲಾಗಿದೆಯೇ/ ಕೈಗೊಳ್ಳಲು ಉದ್ದೇಶಿಸಲಾಗಿದೆಯೇ ಮತ್ತು ಹಾಗಿದ್ದಲ್ಲಿ, ಅದರ ವಿವರಗಳು; ಮತ್ತು

(ಡಿ) ಭವಿಷ್ಯದಲ್ಲಿ ಹಕ್ಕಿ ಜ್ವರವು ಉಲ್ಬಣವಾಗುವುದನ್ನು ತಡೆಗಟ್ಟಲು ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಸಂಬಂಧಪಟ್ಟು ಪ್ರಾಧಿಕಾರಗಳಿಗೆ ಸರ್ಕಾರವು ನಿರ್ದೇಶನ ನೀಡಿದೆಯೇ ಮತ್ತು ಹಾಗಿದ್ದಲ್ಲಿ, ಅದರ ವಿವರಗಳು?

## ಪರಿಸರ-ಸೂಕ್ಷ್ಮ ವಲಯಗಳು

**229**. ಶ್ರೀ .............................................................

ಮಾನ್ಯ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಿಗಳು ದಯವಿಟ್ಟು ಉತ್ತರಿಸುವಂತೆ:

(ಎ) ರಾಷ್ಟ್ರೀಯ ಉದ್ಯಾನಗಳ ಸುತ್ತಮುತ್ತ ಪರಿಸರ ಸೂಕ್ಷ್ಮ ವಲಯಗಳನ್ನು ಸೃಜಿಸಲು ಸರ್ವೋಚ್ಛ ನ್ಯಾಯಾಲಯವು ನಿರ್ದೇಶನಗಳನ್ನು ನೀಡಿದೆಯೇ ಮತ್ತು ಈ ಸಂಬಂಧದಲ್ಲಿ ಕೆಲವು ಷರತ್ತುಗಳನ್ನೂ ಸಹಾ ನಿರ್ದಿಷ್ಟಪಡಿಸಿದೆಯೇ;

(ಬಿ) ಹಾಗಿದ್ದಲ್ಲಿ, ಅದರ ವಿವರಗಳು;

(ಸಿ) ರಾಷ್ಟ್ರೀಯ ಉದ್ಯಾನಗಳ ಸುತ್ತಮುತ್ತ ಪಡಿಸರ-ಸೂಕ್ಷ್ಮ ವಲಯಗಳ ಶುದ್ಧತೆಯನ್ನು ಖಚಿತಪಡಿಸಿಕೊಳ್ಳಲು/ನಿರ್ವಹಿಸಲು ಸರ್ಕಾರವು ಕ್ರಮಗಳನ್ನು ತೆಗೆದುಕೊಂಡಿದೆಯೇ ಮತ್ತು ಹಾಗಿದ್ದಲ್ಲಿ, ಅದರ ವಿವರಗಳು; ಮತ್ತು

(ಡಿ) ಪರಿಸರ – ಸೂಕ್ಷ್ಮ ವಲಯಗಳ ಸುತ್ತಮುತ್ತ ಜಲನಿಲಯಗಳು ಅಥವಾ ಜಲಾನಯನ ಪ್ರದೇಶಗಳನ್ನು ಬದಲಿಸಲು ಅಥವಾ ಎಲ್ಲೆಹಾಕಲು ಅನುಮತಿಯ ಅಗತ್ಯವಿದೆಯೇ ಮತ್ತು ಹಾಗಿದ್ದಲ್ಲಿ ಅದರ ವಿವರಗಳು?

ಪ್ರಾಥಮಿಕ ಮಾಹಿತಿ ವರದಿಗಳನ್ನು (ಎಫ್ ಐ ಆರ್) ದಾಖಲ್ಮಾಡುವುದು.

**237**. ಶ್ರೀ ..........................................

ಮಾನ್ಯ ಗೃಹ ವ್ಯವಹಾರಗಳ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ:

(ಎ) ದೇಶದಲ್ಲಿನ ಅಶಕ್ತ ವರ್ಗಗಳಿಗೆ ಸೇರಿದ ಮಹಿಳೆಯರು ಮತ್ತು ಜನರು, ಪೊಲೀಸರ ವರ್ತನೆಯಿಂದಾಗಿ, ಪ್ರಥಮಮಾಹಿತಿ ವರದಿಗಳನ್ನು (ಎಫ್ ಐ.ಆರ್) ದಾಖಲ್ಮಾದುತ್ತಿಲ್ಲವೆಂಬುದು ವಾಸ್ತವಾಂಶವೇ ಮತ್ತು ಹಾಗಿದ್ದಲ್ಲಿ, ಅದರ ವಿವರಗಳು;

(ಬಿ) ಈ ಬಗ್ಗೆ ಸರ್ಕಾರವು ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಲು ಆಲೋಚಿಸುತ್ತಿದೆಯೇ;

(ಸಿ) ಹಾಗಿದ್ದಲ್ಲಿ, ಅದರ ವಿವರಗಳು ಮತ್ತು ಅಂಥ ಕ್ರಮಗಳನ್ನು ತೆಗೆದುಕೊಳ್ಳಲು ಬೇಕಾದ ಸಮಯ; ಮತ್ತು

(ಡಿ) ಹಾಗಿರದಿದ್ದಲ್ಲಿ, ಅದಕ್ಕೆ ಕಾರಣಗಳು?

ರ‍್ಯಾಸಮ್ ವೇರ್ ದಾಳಿ

**244**. ಶ್ರೀ .........................................................................

ಮಾನ್ಯ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ.

(ಎ) ದೇಶದುದ್ದಕ್ಕೂ ರ‍್ಯಾನ್ ಸಮ್ ವೇರ್ ವೈರಸ್ ನ ದಾಳಿಯಿಂದಾಗಿ ಆದ ನಷ್ಟವಾದ ದತ್ತಾಂಶದ ಅಂದಾಜನ್ನು ಸರ್ಕಾರವು ಮಾಡಿದೆಯೇ;

(ಬಿ) ಟಿಎಸ್ ಪಿಗಳ ಹಣಕಾಸು ಹೊರೆಯನ್ನು ಸುಗಮಗೊಳಿಸಲು ಮತ್ತು ಅವರ ಸೇವೆಯನ್ನು ಪೊರೈಸಲು ಸದರಿ ಶಿಫಾರಸು ನೆರವಾಗುತ್ತದೆಯೇ ಮತ್ತು ಹಾಗಿದ್ದಲ್ಲಿ, ಅದರ ವಿವರಗಳು,

(ಸಿ) ದೂರಸಂಪರ್ಕ ವಲಯದ ಮೇಲೆ ಜಿ.ಎಸ್.ಟಿ ದರವನ್ನು ಶೇಕಡಾ ಹದಿನೆಂಟರಿಂದ ಶೇಕಡಾ ಐದಕ್ಕೆ ಇಳಿಸಲು ಟಿ.ಆರ್.ಪಿ.ಐ.ಯು ಪ್ರಸ್ತಾಪಿಸಿದೆಯೇ ಮತ್ತು ಪ್ರಮುಖ ಮೂಲಸೌಕರ್ಯವಲಯಕ್ಕೆ ಇದು ಅನ್ವಯವಾಗುವುದೇ: ಮತ್ತು

(ಡಿ) ಹಾಗಿದ್ದಲ್ಲಿ, ಅದರ ವಿವರಗಳು ಮತ್ತು ಅದಕ್ಕೆ ಸರ್ಕಾರದ ಪ್ರತಿಕ್ರಿಯೆ?

ಹರಾಜುಮೊದಲ್ಪಟ್ಟ ಸ್ಪೆಕ್ಟ್ರಮಾಗಾಗಿ ವಿಧಿಸುವಿಕೆಗಳನ್ನು ಕಡಿಮೆ ಮಾಡುವುದು.

242 ಶ್ರೀ ...............................................

ಮಾನ್ಯ ಸಂಪರ್ಕಗಳ ಮಂತ್ರಿಗಳು ದಯವಿಟ್ಟು ಉತ್ತರಿಸುವಂತೆ;

(ಎ) ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟಿಆರ್ ಎ.ಐ),ದೂರಸಂಪರ್ಕ ಸೇವೆ ಒದಗಿಸುವವರಿಗೆ (ಟಿಎಸ್.ಪಿಗಳು) ಹರಾಜುಮಾಡಲ್ಪಟ್ಟ ಸ್ಪೆಕ್ಟ್ರಮ್ ಗಾಗಿ ವಿದಿಸುವಿಕೆಗಳಲ್ಲಿ ಕಡಿಮೆ ಮಾಡುವ ಮತ್ತು ಪಾವತಿ ಅವಧಿಯ ಸಡಿಲಿಸುವಿಕೆಗೆ ಸಂಬಂಧಿದಂತೆ ತನ್ನ ಶಿಫಾರಸ್ಸುಗಳನ್ನು ಅನುಕೂಲಕರವಾಗಿರುವಂತೆ ಪರಿಗಣಿಸಬೇಕೆಂದು ಒತ್ತಾಯಿಸಿದೆಯೇ, ಹಾಗಿದ್ದಲ್ಲಿ, ಅದರ ವಿವರಗಳು ಮತ್ತು ಅದಕ್ಕೆ ಸರ್ಕಾರದ ಪ್ರತಿಕ್ರಿಯೆ;

(ಬಿ) ಹಾಗಿದ್ದಲ್ಲಿ, ಅದರ ವಿವರಗಳು ಮತ್ತು ಇಲ್ಲದಿದ್ದಲ್ಲಿ, ಜವಾಹಾರ್ ಲಾಲ್ ನೆಹರೂ ಪೋರ್ಟ್ ಟ್ರಸ್ಟ್, ಮುಂಬೈ ದಾಳಿಯನ್ನು ಒಳಗೊಂಡಂತೆ ಕಳೆದ ಪ್ರತಿ ಮೂರು ವರ್ಷಗಳಲ್ಲಿ ಮತ್ತು ಪ್ರಸ್ತುತ ವರ್ಷದಲ್ಲಿ ದೇಶದುದ್ದಕ್ಕೂ ವರದಯೋದ ವೈರಸ್ ದಾಳಿಗಳ ಸಂಖ್ಯೆಗಳೊಂದಿಗೆ ಅದಕ್ಕೆ ಕಾರಣಗಳು;

(ಸಿ) ದೇಶದಲ್ಲಿ ಸದರಿ ವೈರಸ್ ದಾಳಿಮಾಡಿ/ ಮುಚ್ಚಿಟ್ಟ ದತ್ತಾಂಶವನ್ನು ಭಾರತೀಯ ಸೈಬರ್ ತಜ್ಞರು ಯಶಸ್ಸಿಯಾಗಿ ಹಿಂಪಡೆದಿದ್ದಾರೆಯೇ ಮತ್ತು ಹಾಗಿದ್ದಲ್ಲಿ ಅದರ ವಿವರಗಳು;

(ಡಿ) ನ್ ಸಮ್ ವೈರಸ್ ವಿರುದ್ಧ ಹೋರಾಡಲು ಭಾರತೀಯ ಸೈಬರ್ ತಜ್ಞರಿಗೆ ಮುಂದುವರೆದ ರಾಷ್ಟ್ರಗಳು ಯಾವುದೇ ಸಹಕಾರವನ್ನು ನೀಡುತ್ತಿವೆಯೇ ಮತ್ತು ಹಾಗಿದ್ದಲ್ಲಿ, ನ್ ಸಮ್ ವೇರ್, ವ್ಯಾನಕ್ರೈ, ಪೆಟ್ಯಾ, ಇತ್ಯಾದಿ ಮೂಲಕ ಉಂಟಾಗುವ ಸೈಬರ್ ದಾಳಿಗಳನ್ನು ಎದುರಿಸಲು ಸಿದ್ಧತೆಯಮೆಯದೊಂದಿಗೆ ಅದರ ವಿವರಗಳು, ಮತ್ತು

(ಇ) ಭವಿಷ್ಯದಲ್ಲಿ ಅಂಥ ವೈರಸ್ ದಾಳಿಗಳಿಂದ ದೇಶದ ದತ್ತಾಂಶವನ್ನು ರಕ್ಷಿಸಲು ಸರ್ಕಾರವು ತೆಗೆದುಕೊಂಡ/ತೆಗೆದುಕೊಳ್ಳತ್ತಿರುವ ಇತರೆ ಕ್ರಮಗಳು?

ನ್ಯಾಯಾಂಗಣಗಳ ನಿರ್ಮಾಣ

248. ಶ್ರೀ ............................................

ಮಾನ್ಯ  ಕಾನೂನು ಮತ್ತು ನ್ಯಾಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ.

(ಎ) ಹೆಚ್ಚಿನ ನ್ಯಾಯಾಧೀಶರುಗಳಿಗೆ ಸ್ಥಳವಾಕಾಶ ಒದಗಿಸಲು 3000ದಷ್ಟು ಹೆಚ್ಚು ನ್ಯಾಯಾಂಗಣಗಳನ್ನು ನಿರ್ಮಿಸಲು ಸರ್ಕಾರದಲ್ಲಿ ಯಾವುದೇ ಪ್ರಸ್ತಾಪವಿದೆಯೇ ಮತ್ತು ಹಾಗಿದ್ದಲ್ಲಿ, ಈ ಬಗ್ಗೆ ವಿವರಗಳು;

(ಬಿ) ಈ ದಿನಾಂಕದಲ್ಲಿ ದೇಶದಲ್ಲಿ ಲಭ್ಯವಿರುವ ನ್ಯಾಯಾಂಗಣಗಳ ಒಟ್ಟು ಸಂಖ್ಯೆ;

(ಸಿ) ಈ ಪ್ರಸ್ತಾವನೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸುವಂತೆ ಸರ್ಕಾರವು ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿದೆಯೇ? ಮತ್ತು

(ಡಿ) ಹಾಗಿದ್ದಲ್ಲಿ, ಅದರ ವಿವರಗಳು?

## *ಅನುಬಂಧ* – II

### *ಯುವ ಸಂಸತ್ ಮಾದರಿ ಕಾರ್ಯಕಲಾಪಗಳ ಪಟ್ಟಿ*

*ದಿನ ದಿನಾಂಕ ತಿಂಗಳು ವರ್ಷ ವೇಳೆ*

### *ಪ್ರಮಾಣ ಅಥವಾ ದೃಢೀಕರಣ*

1. ಶ್ರೀ ...................... ( ................. ಮತ ಕ್ಷೇತ್ರದಿಂದ) ಪ್ರಮಾಣವಚನ ಪ್ರತಿಜ್ಞಾವಚನವನ್ನು ಸ್ವೀಕರಿಸುವುದು ಮತ್ತು ಸದನದಲ್ಲಿ ಆಸೀನರಾಗುವುದು.

### ರಾಷ್ಟ್ರಪತಿಗಳ ಭಾಷಣ

2. ಮಹಾ ಕಾರ್ಯದರ್ಶಿಯವರು, ...................... ರಂದು ಸೇರಿದ ಸಂಸತ್ತಿನ ಉಭಯ ಸದನಗಳನ್ನು ಉದ್ದೇಶಿಸಿ ರಾಷ್ಟ್ರಪತಿಯವರು ಮಾಡಿದ ಭಾಷಣದ ಪ್ರತಿಯನ್ನು ಸದನದ ಮುಂದೆ ಮಂಡಿಸುವುದು.

### *ಸಂತಾಪ ಸೂಚನೆ*

3. ಶ್ರೀ ....................... ರವರು ನಿಧನರಾದುದಕ್ಕಾಗಿ ಸಂತಾಪ ಸೂಚನೆ

### *ಪ್ರಶ್ನೆಗಳು*

4. ಕೇಳಬೇಕಾದ ಪ್ರಶ್ನೆಗಳನ್ನು ಪ್ರತ್ಯೇಕ ಪಟ್ಟಿಯಲ್ಲಿ ನಮೂದಿಸುವುದು ಮತ್ತು ಉತ್ತರಗಳನ್ನು ನೀಡುವುದು.

5. ಕೇಳಬೇಕಾದ ಅಲ್ಪಕಾಲಿಕ ಪ್ರಶ್ನೆ ಸಂಖ್ಯೆ ....... ಯನ್ನು ಪ್ರತ್ಯೇಕ ಪಟ್ಟಿಯಲ್ಲಿ ನಮೂದಿಸುವುದು ಮತ್ತು ಉತ್ತರಗಳನ್ನು ನೀಡುವುದು.

### *ಸಭೆಯ ಮುಂದೆ ಮಂಡಿಸಬೇಕಾದ ಕಾಗದ ಪತ್ರಗಳು*

6. "ಶ್ರೀ .......................... ಅವರು ಆಕಾಶವಾಣಿ ಮತ್ತು ದೂರವಾಣಿಯ ಸ್ವಾಯತ್ತತೆಗೆ ಸಂಬಂಧಿಸಿದ ಕಾರ್ಯತಂಡದ ವರದಿಯ (ವ್ಯಾಲ್ಯೂಮ್ I ಮತ್ತು II) (ಹಿಂದಿ ಮತ್ತು ಇಂಗ್ಲೀಷ್ ಆವೃತ್ತಿಯಲ್ಲಿ) ಪ್ರತಿಯನ್ನು ಸದನದ ಮುಂದೆ ಮಂಡಿಸುವುದು".

7. ಶ್ರೀ ................... ಅವರು ನೌಕರರ ಭವಿಷ್ಯ ನಿಧಿ ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1952ರ 7ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ದಿನಾಂಕ: ................. ರಂದು ಭಾರತ ರಾಜ್ಯ ಪತ್ರದಲ್ಲಿ ಅಧಿಸೂಚನೆ ಸಂಖ್ಯೆ: ಜಿಎಸ್‌ಆರ್ 201 ರಲ್ಲಿ ಪ್ರಕಟವಾದ ನೌಕರರ ಕುಟುಂಬ (ತಿದ್ದುಪಡಿ) ಯೋಜನೆ, 1983ರ ಪ್ರತಿಯನ್ನು (ಹಿಂದಿ ಮತ್ತು ಇಂಗ್ಲೀಷ್ ಆವೃತ್ತಿಗಳಲ್ಲಿ) ಸದನದ ಮುಂದೆ ಮಂಡಿಸುವುದು.

### *ಮೇಲ್ಮನೆಯಿಂದ ಸಂದೇಶಗಳು*

8. ಮಹಾ ಕಾರ್ಯದರ್ಶಿಯವರು, ಪತ್ರಿಕಾ ಪರಿಷತ್ ವಿಧೇಯಕ, 1986 ಮತ್ತು ಬಾಲ ವಿವಾಹ ನಿಗ್ರಹ (ತಿದ್ದುಪಡಿ) ವಿಧೇಯಕ, 1987ಕ್ಕೆ ಸಂಬಂಧಪಟ್ಟಂತೆ ಮೇಲ್ಮನೆಯ ಎರಡು ಸಂದೇಶಗಳ ಬಗ್ಗೆ ವರದಿಯನ್ನು ನೀಡುವುದು.

### *ವಿಧೇಯಕಗಳಿಗೆ ಅನುಮತಿ*

9. ಮಹಾ ಕಾರ್ಯದರ್ಶಿಯವರು, ಯುವ ಸಂಸತ್ತಿನ ಕಳೆದ ಅಧಿವೇಶನದಲ್ಲಿ ಅಂಗೀಕಾರವಾದ ಮತ್ತು ಅನುಮತಿ ಪಡೆದ ವಿಧೇಯಕಗಳನ್ನು ಸದನದ ಮುಂದೆ ಮಂಡಿಸುವುದು.

***ಗಮನ ಸೆಳೆಯುವ ಸೂಚನೆ***

10. ಶ್ರೀ ......................

ಶ್ರೀ ......................

ಶ್ರೀಮತಿ ...................... ರವರು ದೇಶದ ವಿವಿಧ ಭಾಗಗಳಲ್ಲಿ ಬೆಲ್ಲ, ಕಬ್ಬು, ಹತ್ತಿ ಮತ್ತು ಸಾಸುವೆಯ ಬೆಲೆಗಳಲ್ಲಿ ಇಳಿತವಾಗಿದೆಯೆಂದು ಮತ್ತು ಕಬ್ಬು ಬೆಳೆಗಾರರಿಗೆ ಕಡಿಮೆ ಬೆಲೆ ನೀಡುವ ಮೂಲಕ ಸಕ್ಕರೆ ಕಾರ್ಖಾನೆಗಳ ಮಾಲೀಕರು ಒಪ್ಪಂದದ ಉಲ್ಲಂಘನೆ ಮಾಡಿರುವ ವರದಿಯ ಬಗ್ಗೆ ಕೃಷಿ ಮತ್ತು ನೀರಾವರಿ ಸಚಿವರ ಗಮನ ಸೆಳೆಯುವುದು.

***ಸದನದ ಅಧಿವೇಶನಗಳಿಂದ ಗೈರುಹಾಜರಾಗುವುದಕ್ಕೆ ಅನುಮತಿ***

11. ಮಾನ್ಯ ಅಧ್ಯಕ್ಷರು ಅಧಿವೇಶನದ ಉಪವೇಶನದಿಂದ ಸದಸ್ಯರ ಗೈರುಹಾಜರಿಯ ಮೇಲಿನ ಸಮಿತಿಯು ದಿನಾಂಕ: ................ ರಂದು ಮಂಡಿಸಿದ ವರದಿಯಲ್ಲಿ ಶಿಫಾರಸ್ಸು ಮಾಡಲಾದಂತೆ ಇಬ್ಬರು ಸದಸ್ಯರು ಗೈರು ಹಾಜರಾಗುವುದಕ್ಕೆ ಅನುಮತಿ ನೀಡಿರುವ ಬಗ್ಗೆ ಸದನದ ಗಮನ ಸೆಳೆಯುವುದು.

***ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ವರದಿ***

12. ಶ್ರೀ ........................

ಶ್ರೀ ........................ ರವರು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ 71ನೇ ವರದಿಯನ್ನು ಮಂಡಿಸುವುದು.

***ಸದಸ್ಯರ ಗೈರುಹಾಜರಿಯ ಮೇಲಿನ ಸಮಿತಿಯ ವರದಿ***

13. ಶ್ರೀ ........................

ಶ್ರೀ ........................ ರವರು ಸದನದ ಉಪವೇಶನದಿಂದ ಸದಸ್ಯರ ಗೈರುಹಾಜರಿಯ ಮೇಲಿನ ಸಮಿತಿಯ ಐದನೇ ವರದಿಯನ್ನು ಮಂಡಿಸುವುದು.

***ಮನವಿ ಮಂಡಿಸುವುದು***

14. ಶ್ರೀ .................... ಅವರು ಕಪ್ಪೆ ಮಾಂಸವನ್ನು ರಫ್ತು ಮಾಡುವುದರ ನಿಷೇಧದ ಬಗ್ಗೆ ಮಹಾರಾಷ್ಟ್ರದ ಥಾನೆ ಜಿಲ್ಲೆಯ ಶ್ರೀ 'ಎ' ಮತ್ತು ಇತರರು ಸಹಿ ಮಾಡಿದ ಮನವಿಯನ್ನು ಮಂಡಿಸುವುದು.

***ಸಚಿವರಿಂದ ಹೇಳಿಕೆ***

15. ಶ್ರೀ ........................... ಅವರು, ..................... ದಿಂದ ಪ್ರಾರಂಭವಾಗುವ ವಾರಕ್ಕೆ ಸರ್ಕಾರಿ ಕಾರ್ಯಕಲಾಪಗಳ ಬಗ್ಗೆ ಹೇಳಿಕೆಯನ್ನು ನೀಡುವುದು.

16. ಶ್ರೀ ........................... ಅವರು, .................... ಬಗ್ಗೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ .................... ಯ ಭಾಗ (ಎ) ಗೆ .......... ರಂದು ಶ್ರೀ ............................... ರವರು ನೀಡಿದ ಉತ್ತರಕ್ಕೆ ತಿದ್ದುಪಡಿ ಹೇಳಿಕೆಯನ್ನು ನೀಡುವುದು.

17. ಶ್ರೀ ....................... ಅವರು, 1988-89ನೇ ವರ್ಷದ ಸರ್ಕಾರದ ಆಮದು ರಫ್ತು ಧೋರಣೆಯ ಬಗ್ಗೆ ಹೇಳಿಕೆಯನ್ನು ನೀಡುವುದು.

***ನಿಯಮ 199ರ ಅಡಿಯಲ್ಲಿ ಹೇಳಿಕೆ***

18. ಶ್ರೀ .................. ಅವರು, ..................... ಸಚಿವರ ಪದಕ್ಕೆ ತನ್ನ ರಾಜೀನಾಮೆಯ ಬಗ್ಗೆ ವಿವರಣಾ ಹೇಳಿಕೆಯನ್ನು ನೀಡುವುದು.

***115ರ ನಿರ್ದೇಶನದ ಅಡಿಯಲ್ಲಿ ಹೇಳಿಕೆ***

19. ಶ್ರೀ ......................... ಅವರು, .................... ಪ್ರಸ್ತಾವನೆಯ ಬಗ್ಗೆ ..................... ದಂದು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ........ ಗೆ ಉತ್ತರವಾಗಿ ........................ ಸಚಿವರು ನೀಡಿದ ಕೆಲವು ಮಾಹಿತಿಗಳ ಬಗ್ಗೆ ಒಂದು ಹೇಳಿಕೆಯನ್ನು ನೀಡುವುದು.

ಶ್ರೀ .......................... ಅವರು, ಅದಕ್ಕೆ ಉತ್ತರವಾಗಿ ಒಂದು ಹೇಳಿಕೆಯನ್ನು ನೀಡುವುದು.

***ನಿಯಮ 357ರ ಅಡಿಯಲ್ಲಿ ವೈಯಕ್ತಿಕ ವಿವರಣೆ***

20. ಶ್ರೀ ....................... ಅವರು, ................. ದಂದು ಸದನದಲ್ಲಿ ....................... ಅವರು ತನ್ನ ಬಗ್ಗೆ ಮಾಡಿದ ಕೆಲವು ಆಕ್ಷೇಪಗಳ ಬಗ್ಗೆ ವೈಯಕ್ತಿಕ ವಿವರಣೆಯನ್ನು ನೀಡುವುದು.

***ಸಮಿತಿಯ ಚುನಾವಣೆಯ ಪ್ರಸ್ತಾವ***

21. ಶ್ರೀ ......................... ಅವರು ಈ ಮುಂದಿನ ಪ್ರಸ್ತಾವವನ್ನು ಮಂಡಿಸುವುದು. "ಸೀಮಾ ಶುಲ್ಕ ಅಧಿನಿಯಮ, 1965ರ 4ನೇ ಪ್ರಕರಣದ (3) (ಸಿ) ಉಪ ಪ್ರಕರಣಕ್ಕೆ ಅನುಸಾರವಾಗಿ, ಸಭಾಪತಿಯವರು ನಿರ್ದೇಶಿಸಬಹುದಾದ ಅಂಥ ರೀತಿಯಲ್ಲಿ ಸದರಿ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಈ ಸದನದ ಸದಸ್ಯರು ತಮ್ಮ ಪೈಕಿ ಇಬ್ಬರು ಸದಸ್ಯರನ್ನು ಏಲಕ್ಕಿ ಮಂಡಲಿಯ ಸದಸ್ಯರಾಗಿ ಸೇವೆ ಸಲ್ಲಿಸಲು ಚುನಾಯಿಸಲು ತೊಡಗುತ್ತಾರೆ."

***ಜಂಟಿ ಸಮಿತಿಯ ವರದಿಯ ಬಗ್ಗೆ ಅವಧಿ ವಿಸ್ತರಣೆಗೆ ಪ್ರಸ್ತಾವ***

22. ಶ್ರೀ ..................

ಶ್ರೀ ...................... ಅವರು ಈ ಮುಂದಿನ ಪ್ರಸ್ತಾವವನ್ನು ಮಂಡಿಸುವುದು:

"ಸಾರ್ವಜನಿಕರ ವಿರುದ್ಧ ದುರ್ನಡತೆಯ ಆಪಾದನೆಗಳ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ವಿಚಾರಣೆಗಾಗಿ ಲೋಕಪಾಲರನ್ನು ನೇಮಿಸುವುದಕ್ಕೆ ಉಪಬಂಧ ಕಲ್ಪಿಸುವ ವಿಧೇಯಕದ ಮೇಲೆ ಜಂಟಿ ಸಮಿತಿಯ ವರದಿಯನ್ನು ಮಂಡಿಸಲು ಕಾಲಮಿತಿಯನ್ನು ಮುಂದಿನ ಅಧಿವೇಶನದ ಮೊದಲ ವಾರದ ಕೊನೆಯ ದಿನದವರೆಗೆ ಈ ಸದನವು ಮತ್ತಷ್ಟು ವಿಸ್ತರಿಸುತ್ತದೆ."

***ಪ್ರಸ್ತಾವ***

23. ಶ್ರೀ ...................

ಶ್ರೀ ................... ರವರು ಈ ಮುಂದಿನದನ್ನು ಮಂಡಿಸುವುದು:

"ಈ ಸದನವು ......................... ದಂದು ಮಂಡಿಸಿದ ಕಾರ್ಯಕಲಾಪಗಳ ಸಲಹಾ ಸಮಿತಿಯ ....................... ವರದಿಯನ್ನು ಅಂಗೀಕರಿಸುತ್ತದೆ."

***ಮಂತ್ರಿ ಪರಿಷತ್ತಿನಲ್ಲಿ ಅವಿಶ್ವಾಸ ಗೊತ್ತುವಳಿ***

24. ಶ್ರೀ ......................... ಅವರು ಈ ಮುಂದಿನದನ್ನು ಮಂಡಿಸುವುದು:

"ಈ ಸದನವು ಸಚಿವ ಸಂಪುಟದಲ್ಲಿ ವಿಶ್ವಾಸವಿಲ್ಲದಿರುವುದನ್ನು ತಿಳಿಸುತ್ತದೆ."

***ಶಾಸನಾತ್ಮಕ ಕಾರ್ಯಕಲಾಪಗಳು***

(i) ವಿಧೇಯಕವನ್ನು ಹಿಂತೆಗೆದುಕೊಳ್ಳುವುದು

25. ಶ್ರೀ ........................ ಅವರು, ದಂಡ ಪ್ರಕ್ರಿಯಾ ಸಂಹಿತೆ ಅಧಿನಿಯಮ, 1973ಕ್ಕೆ ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕವನ್ನು ಹಿಂತೆಗೆದುಕೊಳ್ಳುವುದಕ್ಕೆ ಅನುಮತಿಯನ್ನು ಕೋರುವ ಪ್ರಸ್ತಾವವನ್ನು ಮಂಡಿಸುವುದು.

(i) ವಿಧೇಯಕವನ್ನು ಮಂಡಿಸುವುದು.

26. ಶ್ರೀ..................... ಅವರು ಅಲಿಘರ್ ಮುಸ್ಲಿಂ ವಿಶ್ವವಿದ್ಯಾನಿಲಯ ಅಧಿನಿಯಮ, 1920ಕ್ಕೆ ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕವನ್ನು ಮಂಡಿಸಲು ಅನುಮತಿ ಕೋರುವ ಪ್ರಸ್ತಾವವನ್ನು ಮಂಡಿಸುವುದು. ಹಾಗೂ ವಿಧೇಯಕವನ್ನು ಮಂಡಿಸುವುದು.

***ರಾಷ್ಟ್ರಪತಿಗಳ ಭಾಷಣಕ್ಕೆ ವಂದನಾರ್ಪಣಾ ಪ್ರಸ್ತಾವ***

27. ಶ್ರೀ ........................... ಅವರು ಈ ಮುಂದಿನ ಪ್ರಸ್ತಾವವನ್ನು ಮಂಡಿಸುವುದು.

"ಈ ಮುಂದಿನಂತೆ ರಾಷ್ಟ್ರಪತಿಗಳು ......................... ರಂದು ಸಂಸತ್ತಿನ ಉಭಯ ಸದನಗಳನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ....................... ಸದಸ್ಯರಾದ ನಾವು ರಾಷ್ಟ್ರಪತಿಗಳಿಗೆ ಅತ್ಯಂತ ಕೃತಜ್ಞರಾಗಿದ್ದೇವೆ.

ಶ್ರೀ ....................... ಅವರು ಪ್ರಸ್ತಾವವನ್ನು ಅನುಮೋದಿಸುವುದು."

***ಆಯವ್ಯಯ (ಸಾಮಾನ್ಯ)***

***ಮೊದಲನೇ ಹಂತ***

28. 2012-13ನೇ ಸಾಲಿನ ಆಯವ್ಯಯ (ಸಾಮಾನ್ಯ)ದ ಮೇಲೆ ಸಾಮಾನ್ಯ ಚರ್ಚೆ.

***ಆಯವ್ಯಯ (ಸಾಮಾನ್ಯ)***

***ಎರಡನೇ ಹಂತ***

29. ಗೃಹ ಮಂತ್ರಾಲಯದ ನಿಯಂತ್ರಣದಲ್ಲಿರುವ ಬೇಡಿಕೆಗಳ ಮೇಲೆ ಚರ್ಚೆ ಮತ್ತು ಮತದಾನ.

***ಶಾಸನಾತ್ಮಕ ಕಾರ್ಯಕಲಾಪಗಳು***

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

30. ಶ್ರೀ ................. ಅವರು, ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ಅಧಿನಿಯಮ, 1956ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವ ಪ್ರಸ್ತಾವವನ್ನು ಮಂಡಿಸುವುದು.

ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವ ಪ್ರಸ್ತಾವವನ್ನು ಕೂಡ ಮಂಡಿಸುವುದು.

***ಖಾಸಗಿ ಸದಸ್ಯರ ಕಾರ್ಯಕಲಾಪಗಳು***

31. ಶ್ರೀ ......................

ಶ್ರೀ ...................... ಅವರು, ಈ ಮುಂದಿನಂತೆ ಪ್ರಸ್ತಾವವನ್ನು ಮಂಡಿಸುವುದು.

"ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಪರಿಭಾವಿತ ವಿಶ್ವವಿದ್ಯಾನಿಲಯಗಳಾದ ಇತರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಲ್ಲಿ ಅಶಾಂತಿ ಬೆಳೆಯುತ್ತಿರುವುದರ ಬಗ್ಗೆ ಈ ಸದನವು ತನ್ನ ಆತಂಕವನ್ನು ವ್ಯಕ್ತಪಡಿಸುತ್ತದೆ ಹಾಗೂ ಅಶಾಂತಿಗೆ ಕಾರಣಗಳನ್ನು ನಿವಾರಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ."

***ನಿರ್ಣಯ***

32. ಶ್ರೀ ....................... ಅವರು ಈ ಮುಂದಿನ ಪ್ರಸ್ತಾವವನ್ನು ಮಂಡಿಸುವುದು.

"ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸಮಾನತೆಯನ್ನು ತರುವ ದೃಷ್ಟಿಯಿಂದ ಹಾಗೂ ಜಾತಿ ಮತ್ತು ವರ್ಗ ತಾರತಮ್ಯವನ್ನು ತೊಡೆದು ಹಾಕುವುದು ಹಾಗೂ ಸಮಾಜದ ಶೋಷಿತ ಮತ್ತು ದುರ್ಬಲ ವರ್ಗಗಳಿಗೆ ವಿಶೇಷ ಅವಕಾಶವನ್ನು ನೀಡಲು, ಸರ್ಕಾರಿ ನೌಕರರಿಗೆ ಅಂತರ್ಜಾತಿ ವಿವಾಹವನ್ನು ಕಡ್ಡಾಯಗೊಳಿಸಲು ಮತ್ತು ಸರ್ಕಾರಿ ಸೇವೆಯಲ್ಲಿ ಮತ್ತು ಸೈನ್ಯದಲ್ಲಿ ಕನಿಷ್ಠ ಶೇಕಡಾ 60 ರಷ್ಟು ಹುದ್ದೆಗಳನ್ನು ಹರಿಜನರು, ಆದಿವಾಸಿಗಳು, ಅಲ್ಪಸಂಖ್ಯಾತರು ಮಹಿಳೆಯರು ಮತ್ತು ಇತರ ಹಿಂದುಳಿದ ವರ್ಗಗಳಿಗೆ, ಸಂವಿಧಾನವನ್ನು ತಿದ್ದುಪಡಿ ಮಾಡುವ ಮತ್ತು ಈ ಬಗ್ಗೆ ಕಾನೂನನ್ನು ತರುವ ಮೂಲಕ ಮೀಸಲಾತಿಯನ್ನು ತರಲು ಈ ಸದನವು ಶಿಫಾರಸ್ಸು ಮಾಡುತ್ತದೆ."

***ಅರ್ಧ ಗಂಟೆ ಕಾಲಾವಧಿ ಚರ್ಚೆ***

33. ಶ್ರೀ ......................... ಅವರು ಟೈರುಗಳ ಬೆಲೆ ಏರಿಕೆಯ ಬಗ್ಗೆ ........................ ದಂದು ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ............... ಗೆ ನೀಡಿರುವ ಉತ್ತರದಿಂದ ಉದ್ಭವಿಸಿದ ಅಂಶದ ಮೇಲೆ ಚರ್ಚಿಸುವುದು.

ನವದೆಹಲಿ (ಹೆಸರು)

ದಿನಾಂಕ: ಕಾರ್ಯದರ್ಶಿ

***ಸೂಚನೆ:*** ಸಾಮಾನ್ಯವಾಗಿ ಸದನದ ಕಾರ್ಯಕಲಾಪಗಳನ್ನು ಮುಂದೂಡುವ ಸೂಚನೆಗಳ ಬಗ್ಗೆ ಮತ್ತು ವಿಶೇಷ ಅಧಿಕಾರದ ಉಲ್ಲಂಘನೆಯ ಪ್ರಶ್ನೆಗಳ ಬಗ್ಗೆ ಕಾರ್ಯಕಲಾಪಗಳ ಪಟ್ಟಿಯಲ್ಲಿ ಯಾವುದೇ ನಮೂದು ಮಾಡಿಲ್ಲದ 'ಪ್ರಶ್ನೆಗಳ' ತರುವಾಯ ಪರಿಗಣನೆಗೆ ತೆಗೆದುಕೊಳ್ಳಲಾಗುವುದು.

## *ಅನುಬಂಧ* – III

### *ಯುವ ಸಂಸತ್ ಸ್ಪರ್ಧೆ ನಡೆಸುವ ಪದ್ಧತಿ ಮತ್ತು ಕಾರ್ಯವಿಧಾನದ ಬಗ್ಗೆ ಟಿಪ್ಪಣಿ*

***1. ಯುವ ಸಂಸತ್ ಸದನದ ಒಳಗೆ ಆಸನ ವ್ಯವಸ್ಥೆ.***- ಯುವ ಸಂಸತ್ತಿನ ಕಾರ್ಯವ್ಯವಸ್ಥೆಯು ಸ್ಥೂಲವಾಗಿ ಲೋಕಸಭೆಯ ಕಾರ್ಯವ್ಯವಸ್ಥೆಯ ಮಾದರಿಯಲ್ಲಿಯೇ ಇರತಕ್ಕದ್ದು. ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗವಹಿಸಲು ಆಯ್ಕೆಯಾದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕೆ ಮೊದಲು ದೇಶದ ನಿಜವಾದ ಸಂಸತ್ತಿನ ವಾಸ್ತವಿಕ ಕಾರ್ಯಕಲಾಪಗಳನ್ನು ಸ್ವತಃ ನೋಡಿ ಲೋಕಸಭೆಯ ಸದನದಲ್ಲಿ ಸದಸ್ಯರುಗಳಿಗಾಗಿ ಮಾಡಲಾದ ವ್ಯವಸ್ಥೆಯನ್ನು ತಿಳಿದುಕೊಂಡರೆ ಕಾರ್ಯಚಟುವಟಿಕೆಯ ಜವಾಬ್ದಾರಿ ಹೊತ್ತಿರುವ ಉಪಾಧ್ಯಾಯರ ಕಾರ್ಯಭಾರ ಸುಲಭವಾದಂತಾಗುತ್ತದೆ.

ಯುವ ಸಂಸತ್ತಿನ ಸದನದ ವಿನ್ಯಾಸವು ಸಾಧ್ಯವಾದಷ್ಟು ಮಟ್ಟಿಗೆ ಲೋಕಸಭಾ ಸದನದ ವಿನ್ಯಾಸದಂತೆಯೇ ಇರಬೇಕು. ಸಭಾಧ್ಯಕ್ಷರ ವೇದಿಕೆ ಮತ್ತು ಆಸನವು ಅರ್ಧವೃತ್ತಾಕಾರದ ಜ್ಯಾರೇಖೆಯ ಕೇಂದ್ರದಲ್ಲಿರಬೇಕು. ಸದಸ್ಯರುಗಳ ಆಸನ ವ್ಯವಸ್ಥೆಯು ಲೋಕಸಭೆಯಲ್ಲಿರುವಂತೆ ಲಾಳದ ಆಕಾರದಲ್ಲಿರಬೇಕು. ಲೋಕಸಭೆಯ ಸದನವು ಅರ್ಧವೃತ್ತಾಕಾರದ ಸಭಾಂಗಣವಾಗಿದ್ದು, ಸಭಾಧ್ಯಕ್ಷರು ಅರ್ಧ ವೃತ್ತಾಕಾರದ ಎರಡೂ ಕೊನೆಗಳನ್ನು ಸೇರಿಸಿದ ಜ್ಯಾರೇಖೆಯ ಮಧ್ಯಭಾಗದ ಎದ್ದು ಕಾಣುವ ಸ್ಥಳದಲ್ಲಿರುವ ಮೇಲ್ಕಟ್ಟಿನಿಂದ ಕೂಡಿದ ಆಸನದಲ್ಲಿ ಕುಳಿತಿರುತ್ತಾರೆ. ಸಭಾಧ್ಯಕ್ಷರ ಆಸನದ ಮುಂದೆ ಒಂದು ವಿಭಾಜಕ ಸ್ಥಾನವಿರುತ್ತದೆ. ವೇದಿಕೆಯ ಎಡಭಾಗದಲ್ಲಿ ವಿರೋಧಪಕ್ಷದ ಸದಸ್ಯರಿಗಾಗಿ ಮತ್ತು ಬಲಭಾಗದಲ್ಲಿ ಆಡಳಿತಾರೂಢ ಪಕ್ಷದವರಿಗೆ ಆಸನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. ಯುವ ಸಂಸತ್ ಸದನಕ್ಕಿಂತ ಸ್ವಲ್ಪ ಎತ್ತರಿಸಲಾದ ಸ್ಥಳದಲ್ಲಿ ಸಂದರ್ಶಕರು, ಪತ್ರಿಕೆಯವರು, ಗಣ್ಯ ರಾಜತಾಂತ್ರಿಕರು ಮತ್ತು ವಿಶೇಷ ಸಂದರ್ಶಕರು ಮುಂತಾದವರಿಗಾಗಿ ಸಂದರ್ಶಕರ ಗ್ಯಾಲರಿ ಇರುತ್ತದೆ.

### *ಯುವ ಸಂಸತ್ತನ್ನು ನಡೆಸುವುದಕ್ಕಾಗಿ ಕಾರ್ಯವಿಧಾನ*

ಯುವ ಸಂಸತ್ತಿನಲ್ಲಿ ಅನುಸರಿಸಬೇಕಾದ ಸಂಸದೀಯ ಕಾರ್ಯವಿಧಾನಗಳು ಮತ್ತು ಪದ್ಧತಿಗಳು ಸಾಧ್ಯವಾದ ಮಟ್ಟಿಗೆ ಸ್ಥೂಲವಾಗಿ ಲೋಕಸಭೆಯಲ್ಲಿ ಅನುಸರಿಸುತ್ತಿರುವ ಪದ್ಧತಿಗಳು ಮತ್ತು ಕಾರ್ಯವಿಧಾನಗಳಂತೆಯೇ ಇರತಕ್ಕದ್ದು.

ಯುವ ಸಂಸತ್ ಅಧಿವೇಶನವನ್ನು ನಡೆಸುವುದಕ್ಕೆ ಮೊದಲು, ಭಾಗವಹಿಸುತ್ತಿರುವ ಪ್ರತಿಯೊಂದು ಶಾಲೆಯು ಕಲಾಪಗಳ ಒಂದು ಪಟ್ಟಿಯನ್ನು ತಯಾರಿಸತಕ್ಕದ್ದು. ಹೀಗೆ ಮಾಡುವುದರಿಂದ ಅವರು ಸದನದಲ್ಲಿ ಚರ್ಚೆಗಳಲ್ಲಿ ಪಾಲ್ಗೊಳ್ಳಲು ತಯಾರಿ ನಡೆಸಿದಂತೆ ಆಗುತ್ತದೆ.

ಸದನವು ನಡೆಸುವ ಕಲಾಪಗಳನ್ನು ಎರಡು ಸ್ಥೂಲ ವರ್ಗಗಳಾಗಿ ವಿಂಗಡಿಸಬಹುದು. ಅಂದರೆ, (1) ಸರ್ಕಾರದ ಕಲಾಪಗಳು ಮತ್ತು (2) ಖಾಸಗಿ ಸದಸ್ಯರ ಕಲಾಪಗಳು. ಸರ್ಕಾರವು ತನ್ನ ಶಾಸನಗಳು, ಪ್ರಮುಖ ಕಾರ್ಯನೀತಿಗಳು, ತೆರಿಗೆ ಪ್ರಸ್ತಾವಗಳು ಮತ್ತು ವೆಚ್ಚದ ಅಂದಾಜುಗಳು ಇವೆಲ್ಲವುಗಳಿಗೆ ಸದನದ ಅನುಮೋದನೆ ಪಡೆಯಬೇಕಾಗಿರುವುದರಿಂದ, ಸಂಸತ್ತಿನ ಸಮಯದ ಹೆಚ್ಚಿನ ಭಾಗವನ್ನು ಸರ್ಕಾರದ ಕಲಾಪಗಳ ನಿರ್ವಹಣೆಗೆ ನೀಡಲಾಗುತ್ತದೆ.

ಲೋಕಸಭೆಯಲ್ಲಿ, ಸಂಸದೀಯ ಕಲಾಪವನ್ನು "ಸಭಾಧ್ಯಕ್ಷರ ನಿರ್ದೇಶನ" ದಲ್ಲಿ ತೋರಿಸಲಾದ ಕ್ರಮದಲ್ಲಿ ವ್ಯವಸ್ಥೆ ಮಾಡಲಾಗಿದೆ. ಸದನದಲ್ಲಿ ಸಾಮಾನ್ಯವಾಗಿ ಕೈಗೊಳ್ಳಲಾಗುವ ಕಲಾಪಗಳ ವಿವಿಧ ವಿಷಯಗಳು ಈ ಮುಂದಿನ ಕ್ರಮದಲ್ಲಿರತಕ್ಕದ್ದು.-

1. ಪ್ರಮಾಣವಚನ ಅಥವಾ ಪ್ರತಿಜ್ಞಾವಚನ
2. ಸಂಸತ್ತಿನ ಉಭಯ ಸದನಗಳನ್ನು ಉದ್ದೇಶಿಸಿ ರಾಷ್ಟ್ರಪತಿಯವರು ಮಾಡುವ ಭಾಷಣದ ಪ್ರತಿಗಳನ್ನು ಸಭೆಯ ಮುಂದೆ ಮಂಡಿಸುವುದು.
3. ಸಂತಾಪ ಸೂಚನೆಯ ಪ್ರಸ್ತಾವಗಳು.
4. ಪ್ರಶ್ನೆಗಳು (ಅಲ್ಪಾವಧಿ ಸೂಚನೆ ಪ್ರಶ್ನೆಗಳೂ ಒಳಗೊಂಡಂತೆ)
5. ರಾಷ್ಟ್ರಪತಿಯವರ ಭಾಷಣದ ಮೇಲೆ ವಂದನೆಗಳು

6. ಸದನದ ಕಲಾಪಗಳ ನಿಲುವಳಿ ಸೂಚನೆಗಳ ಮಂಡನೆಗೆ ಅನುಮತಿ
7. ಹಕ್ಕುಚ್ಯುತಿಯನ್ನು ಒಳಗೊಂಡಿರುವ ಪ್ರಶ್ನೆಗಳು
8. ಸಭೆಯ ಮುಂದೆ ಮಂಡಿಸಬೇಕಾಗಿರುವ ಕಾಗದಪತ್ರಗಳು
9. ರಾಷ್ಟ್ರಪತಿ ಅವರಿಂದ ಬಂದ ಸಂದೇಶಗಳನ್ನು ಓದುವುದು
10. ರಾಜ್ಯಗಳ ಪರಿಷತ್ತಿನಿಂದ (ರಾಜ್ಯಸಭೆ) ಬಂದ ಸಂದೇಶಗಳನ್ನು ಓದುವುದು
11. ವಿಧೇಯಕಗಳಿಗೆ ರಾಷ್ಟ್ರಪತಿಯವರ ಅನುಮತಿಗೆ ಸಂಬಂಧಪಟ್ಟಂತೆ ಸೂಚನೆ
12. ಸದನದ ಸದಸ್ಯರ ದಸ್ತಗಿರಿ ಅಥವಾ ಬಂಧನ ಅಥವಾ ಬಿಡುಗಡೆಗೆ ಸಂಬಂಧಪಟ್ಟಂತೆ ಇತರ ಪ್ರಾಧಿಕಾರಗಳ ಮ್ಯಾಜಿಸ್ಟ್ರೇಟರಿಂದ ಪತ್ರಗಳು.
13. ಗಮನ ಸೆಳೆಯುವ ಸೂಚನೆಗಳು
14. ಸದನದ ಉಪವೇಶನಗಳಿಂದ ಸದಸ್ಯರ ಗೈರುಹಾಜರಿಯ ಅನುಮತಿಗೆ ಸಂಬಂಧಪಟ್ಟಂತೆ ಸಭಾಧ್ಯಕ್ಷರಿಂದ ಘೋಷಣೆ.
15. ವಿವಿಧ ವಿಷಯಗಳಿಗೆ, ಎಂದರೆ, ಸದನದ ಸದಸ್ಯರ ರಾಜೀನಾಮೆಗಳಿಗೆ ಸಂಬಂಧಪಟ್ಟಂತೆ ಮತ್ತು ಅಧ್ಯಕ್ಷರ ಸ್ಥಾನಗಳಿಗೆ, ಸಮಿತಿಗಳು ಮುಂತಾದವುಗಳಿಗೆ ನಾಮನಿರ್ದೇಶನ ಮಾಡುವುದಕ್ಕೆ ಸಂಬಂಧಪಟ್ಟಂತೆ ಸಭಾಧ್ಯಕ್ಷರಿಂದ ಘೋಷಣೆ.
16. ಸಭಾಧ್ಯಕ್ಷರಿಂದ ನಿರ್ಣಯಗಳು
17. ಸಮಿತಿಗಳ ವರದಿಗಳನ್ನು ಮಂಡಿಸುವುದು
18. ವಿಧೇಯಕಗಳ ಮೇಲಿನ ಆಯ್ಕೆ/ಜಂಟಿ ಸಮಿತಿಗಳ ಮುಂದೆ ಸಾಕ್ಷ್ಯಗಳ ಮಂಡನೆ
19. ಅರ್ಜಿಗಳ ಮಂಡನೆ
20. ಸಚಿವರುಗಳಿಂದ ಹೇಳಿಕೆಗಳು
21. ಮಾಜಿ ಸಚಿವರಿಂದ ಅವರ ರಾಜೀನಾಮೆಯ ಕಾರಣದ ಸಂಬಂಧದಲ್ಲಿ ವೈಯಕ್ತಿಕ ಹೇಳಿಕೆಗಳು
22. 115ನೇ ನಿರ್ದೇಶನದ ಅಡಿಯಲ್ಲಿನ ಹೇಳಿಕೆಗಳು
23. ನಿಯಮ 357ರ ಅಡಿಯಲ್ಲಿ ವೈಯಕ್ತಿಕ ವಿವರಣೆ (ಚರ್ಚೆಯ ಸಂದರ್ಭದಲ್ಲಿ ನೀಡದಿದ್ದಲ್ಲಿ)
24. ಸಮಿತಿಗಳಿಗೆ ಚುನಾವಣಾ ಪ್ರಸ್ತಾವಗಳು
25. ವಿಧೇಯಕಗಳ ಮೇಲಿನ ಆಯ್ಕೆ / ಜಂಟಿ ಸಮಿತಿಗಳ ವರದಿಗಳ ಮಂಡನೆಗಾಗಿ ಕಾಲಾವಕಾಶ ವಿಸ್ತರಣೆಗಾಗಿ ಪ್ರಸ್ತಾವಗಳು
26. ಕಲಾಪಗಳ ಸಲಹಾ ಸಮಿತಿಯ ವರದಿಯ ಅಂಗೀಕಾರಕ್ಕಾಗಿ ಪ್ರಸ್ತಾವಗಳು
27. ಸಭಾಧ್ಯಕ್ಷರನ್ನು / ಉಪಸಭಾಧ್ಯಕ್ಷರನ್ನು ತೆಗೆದು ಹಾಕುವುದಕ್ಕಾಗಿ ನಿರ್ಣಯದ ಮಂಡನೆಗೆ ಅನುಮತಿ ಪ್ರಸ್ತಾವಗಳು.
28. ಮಂತ್ರಿಗಳ ಪರಿಷತ್ತಿನಲ್ಲಿ ಅವಿಶ್ವಾಸ ನಿರ್ಣಯದ ಮಂಡನೆಗೆ ಅನುಮತಿ ಪ್ರಸ್ತಾವ.
29. ಹಿಂತೆಗೆದುಕೊಳ್ಳಬೇಕಾದ ವಿಧೇಯಕಗಳು
30. ಮಂಡಿಸಬೇಕಾದ ವಿಧೇಯಕಗಳು
31. ಖಾಸಗಿ ಸದಸ್ಯರ ವಿಧೇಯಕದ ಮಂಡನೆ
32. ಖಾಸಗಿ ಸದಸ್ಯರ ವಿಧೇಯಕದ ಪರ್ಯಾಲೋಚನೆ

33. ಅಧ್ಯಾದೇಶಗಳ ಮೂಲಕ ತತ್‌ಕ್ಷಣ ಶಾಸನ ರಚನೆಗೆ ಕಾರಣಗಳನ್ನು ನೀಡುವ ವಿವರಣಾತ್ಮಕ ಹೇಳಿಕೆಗಳ ಮಂಡನೆ

34. ಕ್ರಿಯಾಲೋಪಗಳಲ್ಲದ, 377ನೇ ನಿಯಮದ ಅಡಿಯಲ್ಲಿನ ವಿನಯಗಳನ್ನು ಎತ್ತುವುದು.

35. ಹಕ್ಕು ಬಾಧ್ಯತಾ ಸಮಿತಿಯ ವರದಿಗಳ ಪರಿಶೀಲನೆ.

ಈ ಮೇಲ್ಕಂಡ ಎಲ್ಲಾ ವಿಷಯಗಳು, ಯುವ ಸಂಸತ್ತಿನ ಕಲಾಪಗಳ ಪಟ್ಟಿಯಲ್ಲಿ ಒಳಗೊಂಡಿರಬೇಕಾದ ಅಗತ್ಯವಿಲ್ಲ. ಮಾರ್ಗದರ್ಶಿಗಳಾಗಿ ಬಳಸಲು ಇವುಗಳನ್ನು ಪಟ್ಟಿ ಮಾಡಲಾಗಿದೆ. ಸಾಕಷ್ಟು ವಾಸ್ತವಾಂಶಗಳಿರುವ ಪ್ರಮುಖ ವಿಷಯಗಳನ್ನು ಮಾತ್ರ ಒಳಗೊಳ್ಳತಕ್ಕದ್ದು.

ಸಾಮಾನ್ಯವಾಗಿ, ಈ ಮುಂದಿನ ವಿಷಯಗಳನ್ನು "ಯುವ ಸಂಸತ್"ನ ಉಪವೇಶನಕ್ಕಾಗಿ ಕಾರ್ಯಸೂಚಿಯಲ್ಲಿ ಸೇರಿಸಬಹುದಾಗಿದೆ:-

1. ಪ್ರಮಾಣ ವಚನ ಅಥವಾ ಪ್ರತಿಜ್ಞಾವಚನ
2. ಸಂತಾಪ ಸೂಚನೆಯ ಪ್ರಸ್ತಾವಗಳು
3. ಪ್ರಶ್ನೆಗಳು
4. ನಿಲುವಳಿ ಸೂಚನೆ
5. ಹಕ್ಕುಚ್ಯುತಿಯನ್ನು ಒಳಗೊಂಡಿರುವ ಪ್ರಶ್ನೆಗಳು
6. ಸಭೆಯ ಮುಂದೆ ಮಂಡಿಸಬೇಕಾಗಿರುವ ಕಾಗದ ಪತ್ರಗಳು
7. ಗಮನ ಸೆಳೆಯುವ ಸೂಚನೆಗಳು
8. ಶಾಸನ ರಚನಾ ಕಲಾಪ
9. ಖಾಸಗಿ ಸದಸ್ಯರ ಪ್ರಸ್ತಾವ
10. ಅಲ್ಪಾವಧಿ ಚರ್ಚೆ
11. ಮಂತ್ರಿ ಪರಿಷತ್ತಿನಲ್ಲಿ ಅವಿಶ್ವಾಸ ನಿರ್ಣಯದ ಮಂಡನೆ

ಲೋಕಸಭೆಯಲ್ಲಿ ಪ್ರಚಲಿತವಿರುವ ಪದ್ಧತಿಯ ಪ್ರಕಾರ ಯುವ ಸಂಸತ್ತಿನ ಅಧಿವೇಶನವು ಸಭಾಧ್ಯಕ್ಷರ ಆಗಮನದೊಂದಿಗೆ ಪ್ರಾರಂಭವಾಗುತ್ತದೆ. ಮೊದಲು ಮಾರ್ಷಲ್ (ದಂಡನಾಯಕ) ಅವರು ಸದನಕ್ಕೆ ಬಂದು ಸದನದಲ್ಲಿ ಕೋರಂ ಇರುವ ಬಗ್ಗೆ ಎಂದರೆ, ಸದನದ ಒಟ್ಟು ಸದಸ್ಯರ ಕನಿಷ್ಠ ಶೇಕಡಾ 10ರಷ್ಟು ಸದಸ್ಯರು ಹಾಜರಿರುವ ಬಗ್ಗೆ ಖಚಿತಪಡಿಸಿಕೊಂಡ ನಂತರವಷ್ಟೇ ಸಭಾಧ್ಯಕ್ಷರ ಆಗಮನದ ಬಗ್ಗೆ ಮಾರ್ಷಲ್ ಅವರು ಘೋಷಿಸುತ್ತಾರೆ.

ಸಭಾಧ್ಯಕ್ಷರು, ಸದನದ ಒಳಗೆ ಪ್ರವೇಶಿಸಿದ ಕೂಡಲೇ ಅವರ ಆಗಮನದ ಬಗ್ಗೆ ಮಾರ್ಷಲ್ ಅವರು, "ಮಾನ್ಯ ಸದಸ್ಯರೇ, ಸನ್ಮಾನ್ಯ ಸಭಾಧ್ಯಕ್ಷರು" ಎಂಬುದಾಗಿ ಘೋಷಿಸುತ್ತಾರೆ.

ತರುವಾಯ, ಸದನದಲ್ಲಿ ಹಾಜರಿರುವ ಎಲ್ಲಾ ಸದಸ್ಯರೂ ಎದ್ದು ನಿಲ್ಲುತ್ತಾರೆ. ಸಭಾಧ್ಯಕ್ಷರು, ತಮ್ಮ ಆಸನದಲ್ಲಿ ಕುಳಿತುಕೊಳ್ಳುವುದಕ್ಕೆ ಮೊದಲು, ಎಡಭಾಗದಲ್ಲಿ ಕುಳಿತವರಿಗೆ ತಲೆಬಾಗಿ ವಂದಿಸಿ, ನಂತರ ಬಲಭಾಗದಲ್ಲಿ ಹಾಗೂ ಕೊನೆಯದಾಗಿ ಎದುರಿನಲ್ಲಿ ಕುಳಿತವರಿಗೆ ವಂದಿಸುತ್ತಾರೆ. ಸದಸ್ಯರು ತಾವು ಕುಳಿತುಕೊಳ್ಳುವುದಕ್ಕೆ ಮೊದಲು ಕ್ರಮವಾಗಿ, ಗೌರವಾದರಗಳೊಂದಿಗೆ ಸಭಾಧ್ಯಕ್ಷರಿಗೆ ತಲೆಬಾಗಿ ವಂದಿಸುತ್ತಾರೆ.

**1. ಸದಸ್ಯರಿಂದ ಪ್ರಮಾಣವಚನ ಅಥವಾ ಪ್ರತಿಜ್ಞಾವಚನ:**

ಸಭಾಧ್ಯಕ್ಷರು, ಕಲಾಪ ಪಟ್ಟಿಯಲ್ಲಿ ಪ್ರಕಟಿಸಲಾದ ಕ್ರಮದಲ್ಲಿಯೇ ಸದನದ ಕಾರ್ಯಕಲಾಪಗಳನ್ನು ಕೈಗೊಳ್ಳುತ್ತಾರೆ. ಕಾರ್ಯಸೂಚಿಯಲ್ಲಿನ ಪ್ರಥಮ ವಿಷಯ ಎಂದರೆ, ಹೊಸದಾಗಿ ಆಯ್ಕೆಗೊಂಡ ಸದಸ್ಯರಿಂದ ಪ್ರಮಾಣ ವಚನ ಅಥವಾ ಪ್ರತಿಜ್ಞಾವಚನ ಸ್ವೀಕರಿಸುವುದು. ಪ್ರತಿಯೊಬ್ಬ ಹೊಸ ಸದಸ್ಯರು ತಮ್ಮ ಆಸನವನ್ನು

ಅಲಂಕರಿಸುವುದಕ್ಕೆ ಮೊದಲು ಈ ಮುಂದಿನಂತೆ ಪ್ರಮಾಣವಚನ ಅಥವಾ ಪ್ರತಿಜ್ಞಾವಚನ ಸ್ವೀಕರಿಸುವಂತೆ ಅಗತ್ಯಪಡಿಸಲಾಗಿದೆ:–

"ಎ.ಬಿ. ಆದ ನಾನು, ಯುವ ಸಂಸತ್ತಿನ ಸದಸ್ಯನಾಗಿ ಚುನಾಯಿತನಾಗಿದ್ದು ಅಥವಾ (ನಾಮನಿರ್ದೇಶಿತನಾಗಿದ್ದು) ಕಾನೂನಿನ ಮೂಲಕ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ನಿಜವಾದ ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದೂ ಭಾರತದ ಸಾರ್ವಭೌಮತ್ವವನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುತ್ತೇನೆಂದೂ ನಾನು ಈಗ ಕೈಗೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದು ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ/ಶ್ರದ್ಧಾ ಪೂರ್ವಕವಾಗಿ ಪ್ರತಿಜ್ಞಾವಚನ ಸ್ವೀಕರಿಸುತ್ತೇನೆ.

ಸದಸ್ಯನು, ಪ್ರಮಾಣವಚನ ಅಥವಾ ಪ್ರತಿಜ್ಞಾವಚನವನ್ನು ಹಿಂದಿ ಅಥವಾ ಇಂಗ್ಲೀಷ್ ಅಥವಾ ಸಂವಿಧಾನದ ಅನುಸೂಚಿ – 8ರಲ್ಲಿ ನಿದಿಷ್ಟಪಡಿಸಲಾದ ಯಾವುದೇ ಭಾಷೆಯಲ್ಲಿ ಸ್ವೀಕರಿಸಬಹುದು. ಪ್ರಮಾಣವಚನವನ್ನು ಸ್ವೀಕರಿಸುವುದಕ್ಕೆ ಮೊದಲು, ಸದಸ್ಯನು, ಮುಖ್ಯ ಚುನಾವಣಾ ಆಯುಕ್ತರು (ಚುನಾವಣಾಧಿಕಾರಿ) ಅವರು ನೀಡಿದ ಚುನಾವಣಾ ಪ್ರಮಾಣ ಪತ್ರವನ್ನು ತೆಗೆದುಕೊಂಡು ಬರತಕ್ಕದ್ದು.

ಸದನದಲ್ಲಿ, ಮಹಾ ಕಾರ್ಯದರ್ಶಿಯವರು, ಸದಸ್ಯನ ಹೆಸರನ್ನು ಕರೆದಾಗ, ಸದಸ್ಯನು ತಾನು ಕುಳಿತ ಸ್ಥಳದಿಂದ ಎದ್ದು ಮಹಾ ಕಾರ್ಯದರ್ಶಿ ಅವರ ಮೇಜಿನ ಬಲಭಾಗಕ್ಕೆ ಬರುತ್ತಾರೆ ಮತ್ತು ಚುನಾವಣಾ ಪ್ರಮಾಣ ಪತ್ರವನ್ನು ಮಹಾ ಕಾರ್ಯದರ್ಶಿ ಅವರಿಗೆ ನೀಡುತ್ತಾರೆ. ಸದಸ್ಯನು ಯಾವ ಭಾಷೆಯಲ್ಲಿ ಪ್ರಮಾಣವಚನ ಅಥವಾ ಪ್ರತಿಜ್ಞಾವಚನವನ್ನು ಸ್ವೀಕರಿಸಲು ಇಚ್ಛಿಸುತ್ತಾನೋ ಆ ಭಾಷೆಯಲ್ಲಿರುವ ಪ್ರಮಾಣವಚನ ಅಥವಾ ಪ್ರತಿಜ್ಞಾವಚನದ ಒಂದು ಪ್ರತಿಯನ್ನು ಅವನಿಗೆ ನೀಡಲಾಗುವುದು. ಪ್ರಮಾಣವಚನ ಅಥವಾ ಪ್ರತಿಜ್ಞಾವಚನವನ್ನು ಸ್ವೀಕರಿಸುವಾಗ ಸದಸ್ಯನು ಸಭಾಧ್ಯಕ್ಷರಿಗೆ ಅಭಿಮುಖವಾಗಿರುತ್ತಾರೆ ಮತ್ತು ಆ ತರುವಾಯ ಸಭಾಧ್ಯಕ್ಷರ ಬಳಿಹೋಗಿ ವಂದನೆ ಸಲ್ಲಿಸುತ್ತಾನೆ ಅಥವಾ ಕೈಕುಲುಕುತ್ತಾನೆ. ಆತನು ಸಭಾಧ್ಯಕ್ಷರೊಂದಿಗೆ ಕೈಕುಲುಕುವಾಗ ಅಥವಾ ಕೈಜೋಡಿಸಿ ನಮಸ್ಕರಿಸುವಾಗ ಸಾಮಾನ್ಯವಾಗಿ ಸದಸ್ಯರು ಮೇಜನ್ನು ತಟ್ಟಿ ತಮ್ಮ ಹರ್ಷ ವ್ಯಕ್ತಪಡಿಸುತ್ತಾರೆ. ತರುವಾಯ ಸದಸ್ಯರು ಸಭಾಧ್ಯಕ್ಷರ ಆಸನದ ಹಿಂಭಾಗದಿಂದ ಮಹಾ ಕಾರ್ಯದರ್ಶಿ ಅವರ ಮೇಜಿನ ಇನ್ನೊಂದು ಭಾಗಕ್ಕೆ ಹೋಗಿ ಸದಸ್ಯರ ಹೆಸರುಗಳ ಪಟ್ಟಿಯಲ್ಲಿ ಸಹಿ ಮಾಡುತ್ತಾನೆ. ಹೆಸರುಗಳ ಪಟ್ಟಿಯಲ್ಲಿ ಸಹಿ ಮಾಡಿದ ತರುವಾಯ ಸದನದಲ್ಲಿನ ತನ್ನ ಆಸನದಲ್ಲಿ ಕುಳಿತುಕೊಳ್ಳುತ್ತಾನೆ.

***2. ಸಂತಾಪ ಸೂಚನೆಯ ಪ್ರಸ್ತಾವಗಳು :***

ಕಾರ್ಯಸೂಚಿಯ ಮುಂದಿನ ವಿಷಯ ಎಂದರೆ, ಸದನದ ಸದಸ್ಯರ ಅಥವಾ ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಖ್ಯಾತಿಯ ಪ್ರತಿಷ್ಠಿತ ವ್ಯಕ್ತಿಗಳ ಅಥವಾ ಕಲೆ ಮತ್ತು ವಿಜ್ಞಾನ ಕ್ಷೇತ್ರದಲ್ಲಿನ ಹೆಸರಾಂತ ವ್ಯಕ್ತಿಗಳ ನಿಧನಕ್ಕೆ ಸಂಬಂಧಪಟ್ಟ ಸಂತಾಪ ಸೂಚನಾ ಪ್ರಸ್ತಾವಗಳಾಗಿರಬಹುದು. ಈ ಸಂಬಂಧದಲ್ಲಿ ಸಾಮಾನ್ಯ ಪದ್ಧತಿಯೆಂದರೆ, ಸಭಾಧ್ಯಕ್ಷರು ಎದ್ದುನಿಂತು ಅಗಲಿದ ವ್ಯಕ್ತಿಯ ಬಗ್ಗೆ ಸಂತಾಪವನ್ನು ವ್ಯಕ್ತಪಡಿಸುವುದು. ತರುವಾಯ, ಸಭಾಧ್ಯಕ್ಷರು ತಿಳಿಸಿದ ರೀತಿಯಲ್ಲಿ ಪ್ರಧಾನ ಮಂತ್ರಿಯವರು ಕೂಡ ಸಂತಾಪ ವ್ಯಕ್ತಪಡಿಸುತ್ತಾರೆ. ಪ್ರಧಾನ ಮಂತ್ರಿಯವರ ತರುವಾಯ ಸದನದ ವಿರೋಧಪಕ್ಷದ ನಾಯಕರು ಅಗಲಿದ ಆತ್ಮಕ್ಕೆ ತಮ್ಮ ಶ್ರದ್ಧಾಂಜಲಿ ಅರ್ಪಿಸುತ್ತಾರೆ. ತದನಂತರ, ಸದನವು ಅಗಲಿದವರ ಆತ್ಮಕ್ಕೆ ಶಾಂತಿಕೋರಿ ಸ್ವಲ್ಪಕಾಲ ಮೌನ ಆಚರಿಸುವಂತೆ ಸಭಾಧ್ಯಕ್ಷರು ಘೋಷಿಸುತ್ತಾರೆ. ಆಗ ಸದನದ ಸದಸ್ಯರು ಮೌನಾಚರಣೆಗಾಗಿ ಎದ್ದುನಿಲ್ಲುತ್ತಾರೆ. ಸದಸ್ಯರು ತಮ್ಮ ಆಸನಗಳಲ್ಲಿ ಕುಳಿತ ನಂತರ ಸದನದ ಸದಸ್ಯರ ಸಂತಾಪವನ್ನು, ನಿಧನ ಹೊಂದಿದವರ ಕುಟುಂಬಗಳಿಗೆ ಕಳುಹಿಸುವಂತೆ ಮಹಾಕಾರ್ಯದರ್ಶಿ ಅವರಿಗೆ ಸಭಾಧ್ಯಕ್ಷರು ನಿರ್ದೇಶಿಸುತ್ತಾರೆ.

ಇತ್ತೀಚೆಗೆ, ಸದಸ್ಯರ ಮರಣದ ಸಂದರ್ಭದಲ್ಲಿ ಸಂಸತ್ತಿನಲ್ಲಿ ಸಭಾಧ್ಯಕ್ಷರು ಮಾತ್ರ ಸಂತಾಪ ಸೂಚನಾ ಪ್ರಸ್ತಾವಗಳನ್ನು ಮಾಡುತ್ತಾರೆ. ತರುವಾಯ, ಸದನದ ಸದಸ್ಯರು ಎದ್ದು ನಿಂತು ಅಗಲಿದ ಆತ್ಮಕ್ಕೆ ಶಾಂತಿ ಕೋರಿ ಎರಡು ನಿಮಿಷ ಕಾಲ ಮೌನಾಚರಣೆ ಮಾಡುತ್ತಾರೆ.

***3. ಪ್ರಶ್ನೆಗಳು :***

ಯುವ ಸಂಸತ್‌ನಲ್ಲಿ ಪ್ರತಿದಿನವೂ ಉಪವೇಶನದ ಮೊದಲ ಭಾಗವನ್ನು ಸಾಮಾನ್ಯವಾಗಿ ಚುಕ್ಕೆ ಗುರುತಿನ ಪ್ರಶ್ನೆಗಳೆಂದು ಕರೆಯಲಾಗುವ ಮೌಖಿಕ ಪ್ರಶ್ನೆಗಳಿಗೆ ಮೀಸಲಿಡತಕ್ಕದ್ದು. ಭಾರತದ ಸಂಸತ್ತಿನಲ್ಲಿ ಇದು ಸಂಸತ್ತಿನ

ಸದಸ್ಯರಿಗೆ ಮತ್ತು ಸಾರ್ವಜನಿಕರಿಗೆ ಬಹು ಜನಪ್ರಿಯವಾದ ವೇಳೆಯಾಗಿರುತ್ತದೆ. ಸಚಿವರ ದೃಷ್ಟಿಯಿಂದ ನೋಡಿದಾಗ ಅವರಿಗೆ ಹಂಚಿಕೆ ಮಾಡಲಾದ ವಿಷಯಗಳು ಅಥವಾ ಕಲಾಪ ಬಗ್ಗೆ ಅವರಿಗೆ ಇರಬೇಕಾದ ಸಂಪೂರ್ಣ ಗ್ರಹಿಕೆ ಹಾಗೂ ಪೂರಕ ಪ್ರಶ್ನೆಗಳಿಗೆ ಉತ್ತರಿಸುವಾಗ ಅವರ ಸಾಮರ್ಥ್ಯ ಹಾಗೂ ಸಮಯಪ್ರಜ್ಞೆ ಇವುಗಳಿಗೆ ಸಂಬಂಧಿಸಿದಂತೆ ಅವರ ಸತ್ವ ಪರೀಕ್ಷೆಯಾಗಿರುತ್ತದೆ. ಪ್ರಶ್ನೆಯನ್ನು, ಒಬ್ಬ ಸದಸ್ಯನು ಸಾರ್ವಜನಿಕ ಆಡಳಿತಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ವಿವರಣೆ ಪಡೆದುಕೊಳ್ಳುವ, ವಿವರಿಸುವ ಮತ್ತು ಮಾಹಿತಿ ಪಡೆಯುವ ಒಂದು ಸಾಧನವೆಂದು ವ್ಯಾಖ್ಯಾನಿಸಲಾಗಿದೆ. ಯುವ ಸಂಸತ್ ಸ್ಪರ್ಧೆಯ ಸಮಯದಲ್ಲಿ, ಕೇಳಲಾದ ಪ್ರಶ್ನೆಗಳ ಗುಣಮಟ್ಟಕ್ಕೆ ಹಾಗೂ ಸಚಿವರು ನೀಡುವ ಉತ್ತರಗಳ ಗುಣಮಟ್ಟಕ್ಕೆ ತೀರ್ಪುಗಾರರು ಪ್ರಾಶಸ್ತ್ಯ ನೀಡುತ್ತಾರೆ.

ಯುವ ಸಂಸತ್ತಿನ ಪ್ರಭಾರ ಹೊಂದಿರುವ ಅಧ್ಯಾಪಕರಿಗೆ ಸಾಮಾನ್ಯವಾಗಿ ಪ್ರಶ್ನೆಗಳನ್ನು ಮತ್ತು ಉತ್ತರಗಳನ್ನು ರೂಪಿಸುವಲ್ಲಿ ತೊಂದರೆಗಳು ಎದುರಾಗುತ್ತವೆ. ಪ್ರಶ್ನೆಗಳ ವಸ್ತು ವಿಷಯವು ಜನ ಸಾಮಾನ್ಯರು ದಿನನಿತ್ಯ ಎದುರಿಸುವಂಥ ಸಮಸ್ಯಗಳಾಗಿರಬಹುದು. ಉದಾಹರಣೆಗೆ, ದೆಹಲಿಯಲ್ಲಿ ಡಿ.ಎಂ.ಎಸ್. ಹಾಲಿನ ಬೂತುಗಳ ಮುಂದೆ ಬಹಳ ಉದ್ದನೆಯ ಕ್ಯೂ ಇರುವುದು ಸಾಮಾನ್ಯವಾಗಿ ಕಾಣಬರುವ ದೃಶ್ಯವಾಗಿದೆ. ಆ ಬೂತುಗಳಲ್ಲಿ ಅಸಮರ್ಪಕ ಮತ್ತು ಕಳಪೆ ಗುಣಮಟ್ಟದ ಹಾಲಿನ ಸರಬರಾಜಿನ ಬಗ್ಗೆ ಆಗಾಗ್ಗೆ ದೂರುಗಳು ಬರುತ್ತಿವೆ. ಇದು, ಪ್ರಶ್ನೆಯನ್ನು ಕೇಳಲು ಆಹಾರ ಸಚಿವಾಲಯದ ಕಾರ್ಯನಿರ್ವಹಣೆಗೆ ಮತ್ತು ಡಿ.ಎಂ.ಎಸ್. ನ ಅತೃಪ್ತಿಕರ ಕಾರ್ಯ ಸಾಧನೆಗೆ ಸಂಬಂಧಪಟ್ಟ ವಸ್ತು ವಿಷಯವಾಗಿರುತ್ತದೆ. ಲೋಕಸಭೆ/ರಾಜ್ಯಸಭೆಯ ಚರ್ಚೆಗಳ ಭಾಗ-Gರ ಅವಲೋಕನವು ಪ್ರಶ್ನೆಗಳನ್ನು ಮತ್ತು ಪೂರಕ ಪ್ರಶ್ನೆಗಳನ್ನು ರೂಪಿಸುವ ಕಲೆಯ ಬಗ್ಗೆ ಉಪಯುಕ್ತ ಮಾರ್ಗದರ್ಶನವನ್ನು ಒದಗಿಸುತ್ತದೆ. ಆದರೆ ಅವು ಸಂಬಂಧಪಟ್ಟ ಮಂತ್ರಾಲಯಕ್ಕೆ ಹಂಚಿಕೆ ಮಾಡಿದ ಕಲಾಪ ವಿಷಯಗಳಿಗೆ ಸಂಬಂಧಿಸಿದ್ದಾಗಿರತಕ್ಕದ್ದು.

ಪ್ರಯಾಣಿಕರ ಅದರಲ್ಲೂ ವಿಶೇಷವಾಗಿ ಬಸ್ಸುಗಳಿಗಾಗಿ ಕಾಯುತ್ತಿರುವ ಕಚೇರಿ ಕೆಲಸಗಾರರು ಮತ್ತು ವಿದ್ಯಾರ್ಥಿಗಳ ಉದ್ದನೆಯ ಕ್ಯೂಗಳು, ಉದ್ಯೋಗ, ಪಠ್ಯಪುಸ್ತಕದ ಪಠ್ಯ ವಿಷಯಗಳು ಮತ್ತು ಶಿಸ್ತಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಸಮಸ್ಯೆಗಳು ಹಾಗೂ ಬೆಲೆ ಏರಿಕೆ, ಅಪರಾಧಗಳ ಹೆಚ್ಚಳ ಮತ್ತು ಬರಗಾಲಗಳೇ ಮುಂತಾದ ಪ್ರಸಕ್ತ ವಿಷಯಗಳು ಪ್ರಶ್ನೆಗಳ ವಸ್ತು ವಿಷಯಗಳಾಗಿರಬಹುದು.

ಪ್ರಶ್ನೆಯು ವಿಭಿನ್ನ ವಿಷಯಗಳಿಗೆ ಸಂಬಂಧಿಸಿರಬೇಕು ಮತ್ತು ಅದು ನಮ್ಮ ರಾಷ್ಟ್ರೀಯ ಜೀವನದ ಅಥವಾ ದೈನಂದಿನ ಜೀವನದಲ್ಲಿ ಕಂಡುಬರುವ ಯಾವುವೇ ಅಂಶಗಳನ್ನು ಒಳಗೊಂಡಿರಬಹುದು. ಯುವ ಸಂಸತ್ತಿನಲ್ಲಿ ವಿದ್ಯಾರ್ಥಿಗಳು, ತಮ್ಮ ಶಾಲೆಗಳ ಕಾರ್ಯ ಚಟುವಟಿಕೆಗಳು ಮತ್ತು ತಮ್ಮ ಸ್ವಂತ ಸಮಸ್ಯೆಗಳ ಮೇಲೆಯೂ ಸಹ ಪ್ರಶ್ನೆಯನ್ನು ಕೇಳಬಹುದು.

ಸಂಸತ್ತಿನಲ್ಲಿ ಪ್ರಶ್ನೆಗಳಿಗೆ ಉತ್ತರಿಸುವ ಉದ್ದೇಶಕ್ಕಾಗಿ, ಭಾರತ ಸರ್ಕಾರದ ಸಚಿವಾಲಯಗಳನ್ನು 5 ಗುಂಪುಗಳನ್ನಾಗಿ ವಿಂಗಡಿಸಲಾಗಿದ್ದು ಇವು, ಸಂಸತ್ ಅಧಿವೇಶನ ನಡೆಯುವಾಗ ವಾರದ ಐದು ದಿನಗಳನ್ನು ಪ್ರತಿನಿಧಿಸುತ್ತವೆ. ಸ್ಪಷ್ಟೀಕರಣ ಮತ್ತು ಗುಂಪುಗಳಾಗಿ ವಿಂಗಡಣೆಯನ್ನು ಹಿಂದಿನ ಅನುಭವದ ಆಧಾರದ ಮೇಲೆ ಮಾಡಲಾಗಿದ್ದು ಮತ್ತು ಯಾವುದೇ ನಿಯಮಿತ ದಿನದ ಪ್ರಶ್ನೆಗಳ ಪ್ರಮಾಣವು ಹೆಚ್ಚು ಕಡಿಮೆ ಸಮನಾಗಿ ವಿಸ್ತರಿಸಿರುತ್ತವೆ. ಯುವ ಸಂಸತ್ ಸಹ ಈ ಕ್ರಮವನ್ನು ಅನುಸರಿಸಬಹುದು.

ಪ್ರಶ್ನೆಗಳು "ಪ್ರಶ್ನೆಗಳ ಪಟ್ಟಿ" ಯಲ್ಲಿ ಪ್ರತ್ಯೇಕವಾಗಿ ಮುದ್ರಿತವಾಗಿರತಕ್ಕದ್ದು ಮತ್ತು ಸಭಾಧ್ಯಕ್ಷರು, ಪ್ರಶ್ನೆಯು ಯಾವ ಸದಸ್ಯನ ಹೆಸರಿನಲ್ಲಿರುವುದೋ, ಆ ಹೆಸರನ್ನು ಕರೆಯತಕ್ಕದ್ದು. ಸಭಾಧ್ಯಕ್ಷರು ಸದಸ್ಯನ ಹೆಸರನ್ನು ಕರೆದಾಗ, ಆ ಸದಸ್ಯನು ತನ್ನ ಸ್ಥಳದಲ್ಲಿ ಎದ್ದು ನಿಂತು ಪ್ರಶ್ನೆಗಳ ಮುದ್ರಿತ ಪಟ್ಟಿಯಲ್ಲಿನ ತನ್ನ ಹೆಸರಿನಡಿಯಲ್ಲಿ ನಮೂದಿಸಲಾದ ಪ್ರಶ್ನೆಯನ್ನು ಕೇಳುತ್ತಾನೆ. ತರುವಾಯ, ಸಭಾಧ್ಯಕ್ಷರು, ಪ್ರಶ್ನೆಗಳಿಗೆ ಉತ್ತರಿಸುವುದಕ್ಕಾಗಿ ಸಂಬಂಧಪಟ್ಟ ಸಚಿವರನ್ನು ಕರೆಯುತ್ತಾರೆ, ಲೋಕಸಭೆಯಲ್ಲಿ ಸದಸ್ಯನು, ಪ್ರಶ್ನೆಗಳ ಕ್ರಮ ಸಂಖ್ಯೆಗಳನ್ನು ಉಲ್ಲೇಖಿಸುವ ಮೂಲಕ ಮಾತ್ರವೇ ಪ್ರಶ್ನೆಗಳನ್ನು ಕೇಳಬೇಕು. ಯುವ ಸಂಸತ್ತಿನಲ್ಲಿ ಈ ಕ್ರಮವನ್ನು ಸ್ವಲ್ಪ ಮಟ್ಟಿಗೆ ಮಾರ್ಪಾಟು ಮಾಡಿದ್ದು, ಅದರ ಮೇರೆಗೆ, ತೀರ್ಪುಗಾರರು ಪ್ರಶ್ನೆಗಳ ವಸ್ತು ವಿಷಯವನ್ನು ತಿಳಿದುಕೊಳ್ಳಲು ಅನುಕೂಲವಾಗುವಂತೆ ಸದಸ್ಯನು ಸಂಪೂರ್ಣ ಪ್ರಶ್ನೆಯನ್ನು ಓದತಕ್ಕದ್ದು. ಸಚಿವರು ಉತ್ತರ ನೀಡಿದ ತರುವಾಯ, ಪ್ರಶ್ನೆಯನ್ನು ಕೇಳಿದ ಸದಸ್ಯನು, ಅವನು ಮೊದಲ ಪೂರಕ ಪ್ರಶ್ನೆ ಕೇಳಬೇಕೆಂದು ಇಚ್ಛಿಸಿದರೆ ಅವನ್ನು ಅದಕ್ಕೆ ಹಕ್ಕುಳ್ಳವನಾಗಿರತಕ್ಕದ್ದು. ಮತ್ತು ಒಬ್ಬರಾದ ಮೇಲೆ ಒಬ್ಬರಂತೆ ಆಳುವ ಪಕ್ಷದ ಹಾಗೂ ವಿರೋಧ ಪಕ್ಷದ ಇತರ

ಸದಸ್ಯರು 4 ಕ್ಕಿಂತ ಹೆಚ್ಚಲ್ಲದ ಪೂರಕ ಪ್ರಶ್ನೆಗಳನ್ನು ಕೇಳಿದರೆ, ಆದರೆ ನೀಡಲಾಗುವ ಉತ್ತರದ ಸಂಬಂಧದಲ್ಲಿನ ಯಾವುದೇ ಅಂಶಕ್ಕೆ ಸಂಬಂಧಿಸಿದ ವಿಷಯದಲ್ಲಿ ಸಭಾಧ್ಯಕ್ಷರ ಅನುಮತಿಪಡೆದು, ವಿಷದೀಕರಿಸುವಂತೆ ಕೇಳಬಹುದು ಸದಸ್ಯರು ಪ್ರಶ್ನೆಗಳ ಮೇಲೆ ಇಲ್ಲವೇ ದೀರ್ಘ ಪೂರಕ ಪ್ರಶ್ನೆಗಳ ಮೇಲೆ ಯಾವುದೇ ಚರ್ಚೆ ಮಾಡತಕ್ಕದ್ದಲ್ಲ.

***ಸಂಕ್ಷಿಪ್ತ ಸೂಚನಾ ಪ್ರಶ್ನೆ:-*** ಯಾವುದೇ ಪ್ರಶ್ನೆಯು ಸಾರ್ವಜನಿಕ ಪ್ರಾಮುಖ್ಯತೆಯುಳ್ಳ ತುರ್ತು ವಿಷಯಕ್ಕೆ ಸಂಬಂಧಪಟ್ಟಿದ್ದರೆ ಲೋಕ ಸಭೆಯಲ್ಲಿ ಅನುಮತಿಸಲಾಗುವ ಕನಿಷ್ಟ ಸಮಯವಾದ 10 ದಿನಗಳಿಗಿಂತ ಕಡಿಮೆ ಸೂಚನೆಯೊಂದಿಗೆ ಒಬ್ಬ ಸದಸ್ಯನು ಮೌಖಿಕ ಉತ್ತರವನ್ನು ಕೋರಬಹುದಾಗಿದೆ. ಸಭಾಧ್ಯಕ್ಷರು ತುರ್ತು ಸ್ಥಿತಿಯನ್ನು ಒಪ್ಪಿಕೊಂಡಲ್ಲಿ ಸಚಿವರು ಆ ವಿಷಯವನ್ನು ಉತ್ತರಿಸಲು ಒಪ್ಪಿಕೊಂಡ ನಂತರ ಮಾತ್ರವೇ ಅಲ್ಪಕಾಲಿಕ ಸೂಚನೆಯೊಂದಿಗೆ ಅದನ್ನು ಅನುಮತಿಸಬಹುದು. ಅದನ್ನು ಅನುಮತಿಸಿದಾಗ ಮತ್ತು ಕಾರ್ಯಸೂಚಿಯಲ್ಲಿ ಸೇರಿಸಿದಾಗ ಅದನ್ನು ಪ್ರಶ್ನಾವೇಳೆಯ ನಂತರ ತತ್‌ಕ್ಷಣವೇ ತೆಗೆದುಕೊಳ್ಳಲಾಗುವುದು. ಅಲ್ಪಕಾಲಿಕ ಸೂಚನಾ ಪ್ರಶ್ನೆಯನ್ನು ಕೇಳಲು ಮತ್ತು ಅದಕ್ಕೆ ಉತ್ತರಿಸಲು ಅನುಸರಿಸಬೇಕಾದ ಕ್ರಮವು ಚುಕ್ಕೆ ಗುರುತಿನ ಪ್ರಶ್ನೆಗೆ ಸಂಬಂಧಿಸಿದಂತೆ ಅನುಸರಿಸಲಾಗುವ ಕ್ರಮದಂತೆಯೇ ಇರತಕ್ಕದ್ದು.

**ಶೂನ್ಯವೇಳೆ.–** ಪ್ರಶ್ನೋತ್ತರ ವೇಳೆ ನಂತರ ಸರ್ಕಾರಿ ಕಾರ್ಯಕಲಾಪಕ್ಕೆ ಮೊದಲು ಬರುವ ಅವಧಿಯೇ ಶೂನ್ಯವೇಳೆ. ಈ ಅವಧಿಯಲ್ಲಿ ತುರ್ತು ವಿಷಯಗಳನ್ನು ಮಾತ್ರ ಪ್ರಸ್ತಾಪಿಸಬಹುದು.

***4. ನಿಲುವಳಿ ಸೂಚನೆ:***

ದೇಶದಲ್ಲಿ ಅಥವಾ ವಿದೇಶಗಳಲ್ಲಿ ಉದ್ಭವಿಸಿದಂಥ ಹಾಗೂ ಸರ್ಕಾರ ಮತ್ತು ಸದನವು ತಕ್ಷಣ ಗಮನ ಹರಿಸಬೇಕಾದಂಥ ಜರೂರಿನ ಅಥವಾ ತುರ್ತು ಸ್ವರೂಪದ ಕೆಲವು ವಿಷಯಗಳ ಮೇಲೆ ಚರ್ಚೆ ನಡೆಸುವುದಕ್ಕೆ ಕೋರಿ ನಿಲುವಳಿ ಸೂಚನೆಯನ್ನು ತರಲಾಗುತ್ತದೆ. ಸೂಚನೆಯು ಕ್ರಮಬದ್ಧವಾಗಿದ್ದರೆ ಮತ್ತು ಅದರ ಬಗ್ಗೆ ಸಭಾಧ್ಯಕ್ಷರು ತೃಪ್ತಿ ಹೊಂದಿದರೆ, ಅವರು, ತಮ್ಮ ಒಪ್ಪಿಗೆಯನ್ನು ನೀಡುತ್ತಾರೆ ಮತ್ತು ಸಂಬಂಧಪಟ್ಟ ಸದಸ್ಯನು ಸದನದ ಅನುಮತಿಯನ್ನು ಪಡೆಯುವಂತೆ ಕೇಳುತ್ತಾರೆ. ಸದಸ್ಯನು, ತನ್ನ ಸ್ಥಾನದಲ್ಲಿ ಎದ್ದುನಿಂತು ಸದನದ ಅನುಮತಿಯನ್ನು ಈ ಮುಂದಿನಂತೆ ಕೋರುತ್ತಾರೆ. "ಮಾನ್ಯರೇ, ನಾನು ನಿಲುವಳಿ ಸೂಚನೆಯನ್ನು ತರಲು ಸದನದ ಅನುಮತಿಯನ್ನು ಕೋರುತ್ತೇನೆ" ಯುವ ಸಂಸತ್ತಿನಲ್ಲಿ ಹಾಜರಿರುವ ಕನಿಷ್ಠ 1/10 ರಷ್ಟು ಸದಸ್ಯರು ಸದನವು ಒಪ್ಪಿಗೆ ನೀಡಿದೆ ಎಂದು ನಿಲುವಳಿಯ ಪರವಾಗಿ ಎದ್ದು ನಿಂತಲ್ಲಿ ನಿಲುವಳಿಗೆ ಸಭಾಧ್ಯಕ್ಷರು ಅನುಮತಿ ನೀಡಬಹುದು, ಈ ಮೇಲಿನ ಸಂಖ್ಯೆಗಿಂತ ಕಡಿಮೆ ಸಂಖ್ಯೆಯಲ್ಲಿ ಸದಸ್ಯರು ತಮ್ಮ ಸ್ಥಾನದಲ್ಲಿ ಎದ್ದುನಿಂತಲ್ಲಿ, ಸಭಾಧ್ಯಕ್ಷರು ಸಂಬಂಧಪಟ್ಟ ಸದಸ್ಯನಿಗೆ ನಿಲುವಳಿ ಸೂಚನೆಯನ್ನು ಮಂಡಿಸಲು ಸದನವು ತನ್ನ ಅನುಮತಿಯನ್ನು ನೀಡಿಲ್ಲವೆಂಬುದಾಗಿ ತಿಳಿಸುತ್ತಾರೆ.

ನಿಲುವಳಿ ಸೂಚನೆಗೆ ಅನುಮತಿ ದೊರೆತಿಲ್ಲವೆಂಬ ಬಗ್ಗೆ ಸಭಾಧ್ಯಕ್ಷರು ತೃಪ್ತಿ ಹೊಂದಿದಲ್ಲಿ, ಅವರು, ವಿಷಯವನ್ನು ಸದನದ ಮುಂದೆ ತಾರದೇ ತಮ್ಮ ಒಪ್ಪಿಗೆ ನೀಡಲು ನಿರಾಕರಿಸುತ್ತಾರೆ ಮತ್ತು ಸಂಬಂಧಪಟ್ಟ ಸದಸ್ಯನಿಗೆ ಸಭಾಧ್ಯಕ್ಷರ ತೀರ್ಮಾನವನ್ನು ತಿಳಿಸಲಾಗುವುದು. ನಿಲುವಳಿ ಸೂಚನೆಗೆ ಸಭಾಧ್ಯಕ್ಷರು ಅನುಮತಿ ನೀಡದಿರುವುದಕ್ಕೆ ಆಧಾರವಾದ ಕೆಲವು ಕಾರಣಗಳನ್ನು ಸಂಕ್ಷಿಪ್ತವಾಗಿ ಈ ಮುಂದಿನಂತೆ ಪಟ್ಟಿ ಮಾಡಲಾಗಿದೆ:–

(i) ಅದು ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಪಟ್ಟಿರುವುದಿಲ್ಲ

(ii) ವಿಷಯವು ದಿನದ ಕಲಾಪವನ್ನು ತಡೆಯುವಷ್ಟು ತುರ್ತು ಸ್ವರೂಪದ್ದಾಗಿಲ್ಲ.

(iii) ಅದು, ಸಾಕಷ್ಟು ಸಾರ್ವಜನಿಕ ಪ್ರಾಮುಖ್ಯತೆಯುಳ್ಳ ವಿಷಯಕ್ಕೆ ಸಂಬಂಧಪಟ್ಟಿರುವುದಿಲ್ಲ.

(iv) ಅದು ಇತ್ತೀಚೆಗೆ ಹಠಾತ್ತಾಗಿ ಸಂಭವಿಸಿರುವ ವಿಷಯಕ್ಕೆ ಸಂಬಂಧಪಟ್ಟದ್ದಾಗಿರದೆ, ಮುಂದುವರಿಯುತ್ತಿರುವ ಒಂದು ವಿಷಯಕ್ಕೆ ಸಂಬಂಧಪಟ್ಟಿರುತ್ತದೆ.

(v) ಅದು ನಿಲುವಳಿ ಸೂಚನೆಗೆ ಸಂಬಂಧಿಸಿದ ವಿಷಯವಾಗಿರುವುದಿಲ್ಲ. ವಿಷಯವನ್ನು ಎತ್ತಲು ಇತರ ಅವಕಾಶಗಳನ್ನು ಉಪಯೋಗಿಸಿಕೊಳ್ಳಬಹುದಾಗಿದೆ.

(vi) ಅದು ಒಂದಕ್ಕಿಂತ ಹೆಚ್ಚಿನ ವಿವಾದಾಂಶಗಳಿಗೆ ಸಂಬಂಧಪಟ್ಟಿರುತ್ತದೆ.

(vii) ಆ ವಿಷಯವು ನಿಕಟ ಭವಿಷ್ಯದಲ್ಲಿ ಚರ್ಚೆಯಾಗುವ ಸಂಭವವಿರುವ ವಿಷಯಕ್ಕೆ ಸಂಬಂಧಿಸಿದ್ದಾಗಿದೆ/ಈಗಾಗಲೇ ವಿಷಯದ ಮೇಲೆ ಚರ್ಚೆಯಾಗಿದೆ.

(viii) ಅದು ನ್ಯಾಯಾಲಯದ ಮುಂದೆ ವಿಚಾರಣೆಯಲ್ಲಿರುವ ವಿಷಯಕ್ಕೆ ಸಂಬಂಧಪಟ್ಟಿರುತ್ತದೆ.

(ix) ಅದು ರಾಜ್ಯದ ಒಂದು ವಿಷಯಕ್ಕೆ ಸಂಬಂಧಪಟ್ಟಿರುತ್ತದೆ.

(x) ಅದು ಒಂದು ವಿಶೇಷ ಹಕ್ಕಿನ ಬಾಧ್ಯತೆಗೆ ಸಂಬಂಧಿಸಿದ ಪ್ರಶ್ನೆಯನ್ನು ಎತ್ತುವಂತಿದೆ.

(xi) ಅದು ಶಾಸನ ರಚನೆಯನ್ನು ಅಗತ್ಯಪಡಿಸುವ ಒಂದು ವಿಷಯವಾಗಿದೆ.

(xii) ನಿಲುವಳಿ ಸೂಚನೆಯ ಮೇಲೆ ಒಂದು ವಿದೇಶಿ ಸರ್ಕಾರದ ವರ್ತನೆಯನ್ನು ಚರ್ಚಿಸಲಾಗುವುದಿಲ್ಲ.

(xiii) ಅದು ಒಂದು ವೈಯಕ್ತಿಕ ಪ್ರಕರಣಕ್ಕೆ ಸಂಬಂಧಿಸಿದ್ದಾಗಿದೆ.

(xiv) ಅದು ಒಂದು ಸ್ವಾಯತ್ತ ನಿಗಮದ/ನಿಕಾಯದ ವ್ಯವಹಾರಗಳಿಗೆ ಸಂಬಂಧಪಟ್ಟಿರುತ್ತದೆ.

(xv) ಪ್ರಶ್ನೆಯೊಂದಕ್ಕೆ ಅತೃಪ್ತಿಕರ ಉತ್ತರ ನೀಡಲಾಗಿದ್ದರೆ ಅಥವಾ ಸರ್ಕಾರವು ಉತ್ತರ ನೀಡಲು ತಿರಸ್ಕರಿಸಿದ್ದರೆ, ಆ ವಿಷಯವು ನಿಲುವಳಿ ಸೂಚನೆಗೆ ಬರುವುದಿಲ್ಲ.

ಲೋಕಸಭೆಯಲ್ಲಿ "ಈ ಸದನವನ್ನು ಈಗ ಮುಂದೂಡಲಾಗಿದೆ" ಎಂದಾಗ, ನಿಲುವಳಿ ಸೂಚನೆಯನ್ನು 1600 ವೇಳೆಯಲ್ಲಿ ಅಥವಾ ಸಭಾಧ್ಯಕ್ಷರ ಸದನದ ಕಲಾಪವನ್ನು ಪರಿಗಣಿಸಿದ ನಂತರ, ಇನ್ನು ಮೊದಲೇ ಕೈಗೆತ್ತಿಕೊಳ್ಳಬಹುದೆಂದು ನಿರ್ದೇಶಿಸಿದರೆ ಅದನ್ನು ಚರ್ಚೆಗೆ ತೆಗೆದುಕೊಳ್ಳಲಾಗುತ್ತದೆ. ಆದರೆ ಶಾಲೆಗಳ ವೈಯಕ್ತಿಕ ಯುವ ಸಂಸತ್‌ಗಳು ಅಲ್ಪಾವಧಿಯ ಅಧಿವೇಶನಗಳನ್ನು ನಡೆಸುವುದರಿಂದ, ಗಮನ ಸೆಳೆಯುವ ಸೂಚನೆಯ ನಂತರ ಅಥವಾ ಸಭಾಧ್ಯಕ್ಷರ ಅನುಕೂಲಕ್ಕೆ ತಕ್ಕಂತೆ ತತ್‌ಕ್ಷಣವೇ ನಿಲುವಳಿ ಸೂಚನೆಯನ್ನು ಕೈಗೆತ್ತಿಕೊಳ್ಳಬಹುದು.

ಗಮನ ಸೆಳೆಯುವ ಸೂಚನೆಯ ಇತ್ಯರ್ಥದ ನಂತರ ಅಥವಾ ಸಂದರ್ಭಾನುಸಾರ, ನಿಲುವಳಿ ಸೂಚನೆಯನ್ನು ಯಾವ ಸದಸ್ಯನ ಹೆಸರಿನಲ್ಲಿ ಅನುಮತಿಸಲಾಗಿದೆಯೋ ಆತನನ್ನು ಸೂಚನೆಯನ್ನು ಮಂಡಿಸುವಂತೆ ಸಭಾಧ್ಯಕ್ಷರು ಕೇಳುತ್ತಾರೆ. ಸದಸ್ಯನು ತನ್ನ ಸ್ಥಾನದಲ್ಲಿ ಎದ್ದು ನಿಂತು ಈ ಮುಂದಿನ ಸೂಚನೆಗಳನ್ನು ಮಂಡಿಸುತ್ತಾನೆ, "ಈ ಸದನವನ್ನು ಈಗ ಮುಂದೂಡಲಾಗಿದೆ, ಸದಸ್ಯನು ತರುವಾಯ ಸದನವು ಪರಿಗಣಿಸುವುದಕ್ಕಾಗಿ ಒಂದು ನಿರ್ದಿಷ್ಟ ವಿಷಯದ ಮೇಲೆ ಮಾತನಾಡುತ್ತಾನೆ. ತರುವಾಯ ಆಡಳಿತ ಪಕ್ಷದ ಸದಸ್ಯರು ಹಾಗೂ ವಿರೋಧ ಪಕ್ಷದ ಸದಸ್ಯರು ಸೂಚನೆಯ ವಸ್ತು ವಿಷಯದ ಮೇಲೆ ಸಂಕ್ಷಿಪ್ತ ಭಾಷಣಗಳನ್ನು ಮಾಡುತ್ತಾರೆ. ತರುವಾಯ, ಸಂಬಂಧಪಟ್ಟ ಸಚಿವರು ಚರ್ಚೆಯಲ್ಲಿ ಪಾಲ್ಗೊಳ್ಳುವರು. ಇದಕ್ಕೆ ಸೂಚನೆಯನ್ನು ಮಂಡಿಸಿದವರು ಉತ್ತರವನ್ನು ನೀಡುವರು. ನಂತರ, ಸಭಾಧ್ಯಕ್ಷರು, ಔಪಚಾರಿಕವಾಗಿ, ಸೂಚನೆಯನ್ನು ಸದನದ ಮತಕ್ಕೆ ಹಾಕುತ್ತಾರೆ".

ವಸ್ತು ವಿಷಯದ ತುರ್ತು ಸ್ಥಿತಿ ಮತ್ತು ಪ್ರಾಮುಖ್ಯತೆಯಿಂದಾಗಿ ಅದೇ ದಿನ ನಿಲುವಳಿ ಸೂಚನೆಯ ನೋಟೀಸನ್ನು ನೀಡಲಾಗುವ ಕಾರಣ ಮತ್ತು ಅದನ್ನು ಅಂದೇ ಅಂಗೀಕರಿಸಲಾಗುವುದರಿಂದ ಅದರ ಬಗ್ಗೆ ಸದನದ ಆ ದಿನದ ಕಾರ್ಯ ಸೂಚಿಯಲ್ಲಿ ತೋರಿಸಲಾಗುವುದಿಲ್ಲ. ಆದಾಗ್ಯೂ, ಪ್ರಶ್ನಾವಳಿಯ ನಂತರ ಕೂಡಲೇ ನಿಲುವಳಿ ಸೂಚನೆಯನ್ನು ಅಂಗೀಕರಿಸುವುದಕ್ಕೆ ಸಂಬಂಧಪಟ್ಟ ಪ್ರಶ್ನೆಯನ್ನು ಎತ್ತಲಾಗುವುದು.

***5. ಹಕ್ಕುಚ್ಯುತಿಯನ್ನು ಒಳಗೊಳ್ಳುವ ಪ್ರಶ್ನೆಗಳು:***

ಸಂಸತ್ ಸದಸ್ಯರು, ತಮ್ಮ ಕಾರ್ಯಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ವೈಯಕ್ತಿಕವಾಗಿ ಮತ್ತು ಸಂಸತ್ ಸದನದ ಘನತೆ ಮತ್ತು ಅಧಿಕಾರವನ್ನು ರಕ್ಷಿಸಲು ಸಾಮೂಹಿಕವಾಗಿಯೂ ಕೆಲವು ಸೌಲಭ್ಯಗಳು, ವಿನಾಯಿತಿಗಳು ಮತ್ತು ಹಕ್ಕುಬಾಧ್ಯತೆಗಳನ್ನು ಅವರಿಗೆ ನೀಡಲಾಗಿದೆ. ಮುಖ್ಯವಾಗಿ, ಸಂಸತ್ತಿನ ಸ್ವಾತಂತ್ರ್ಯ ಮತ್ತು ಘನತೆಯ ರಕ್ಷಣೆ

ಮತ್ತು ನಿರ್ವಹಣೆಯ ಸಲುವಾಗಿಯೇ ವಿಶೇಷ ಹಕ್ಕುಗಳು ಅಸ್ತಿತ್ವದಲ್ಲಿರುತ್ತವೆ. ನಿರ್ದಿಷ್ಟ ಹಕ್ಕುಗಳು, ಸದನದ ಹೊರಗಿನ ಯಾರೇ ವ್ಯಕ್ತಿಯ, ಅಷ್ಟೇ ಏಕೆ ಸ್ವತಃ ಚಕ್ರವರ್ತಿಯ ಯಾವುದೇ ಕೃತ್ಯ ಅಥವಾ ಬೆದರಿಕೆ ಅಥವಾ ವ್ಯವಹರಣೆಗಳ, ಭಯವೂ ಇಲ್ಲದೆ, ತನ್ನ ಪ್ರತಿಯೊಬ್ಬ ಸದಸ್ಯನು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು, ಪಡೆಯುವುದಕ್ಕೆ ಸಂಬಂಧಿಸಿದ ಲೋಕಸಭೆಯ ಅಧಿಕಾರಕ್ಕೆ ಸಂಬಂಧಪಟ್ಟಿರುತ್ತದೆ. (ಸಂಸದೀಯ ಹಕ್ಕುಬಾಧ್ಯತೆಗಳ ಕಾನೂನು ವಿಸ್‌ಕೌಂಟ್ ಕಿಲ್‌ಮ್ಯೂ)

ಯಾವುದೇ ಹೇಳಿಕೆ ಅಥವಾ ಕಾರ್ಯವು, ಅಂದರೆ, ಸದನದ ಆದೇಶಗಳಿಗೆ ಅಥವಾ ಅಧಿಕಾರಕ್ಕೆ ಅವಿಧೇಯತೆಯನ್ನುಂಟು ಮಾಡುವುದೆನ್ನಲಾಗುವ ಅಥವಾ ಅದರ ಘನತೆಗೆ ಹಾನಿಯನ್ನುಂಟು ಮಾಡುವ ಅಥವಾ ಅವಮಾನ ಅಥವಾ ಕುಂದನ್ನುಂಟು ಮಾಡುವ ಅಥವಾ ನಿಂದನೆ ಅಥವಾ ಅವಹೇಳನ ಮಾಡುವ ಯಾವುದನ್ನಾದರೂ ಹೇಳಿದರೆ ಅಥವಾ ಮಾಡಿದರೆ, ಅದು "ಸದನದ ನಿಂದನೆ" ಯಾಗುತ್ತದೆ ಮತ್ತು ಅದು ವಾಗ್ದಂಡನೆಯಿಂದ ಶಿಕ್ಷಿತವಾಗುತ್ತದೆ ಹಾಗೂ ಅಸಾಧಾರಣ ಸಂದರ್ಭದಲ್ಲಿ ಕಾರಾವಾಸದಿಂದ ಅಥವಾ ಬಂಧನದಿಂದ ಶಿಕ್ಷಾರ್ಹವಾಗುತ್ತದೆ.

ಸಂಕ್ಷಿಪ್ತವಾಗಿ, ಹಕ್ಕುಚ್ಯುತಿ ಪ್ರಶ್ನೆಗಳಿಗೆ ಸಂಬಂಧಿಸಿದ ವ್ಯವಹಾರಗಳನ್ನು ನಡೆಸುವಲ್ಲಿ ಅನುಸರಿಸಬೇಕಾದ ಕ್ರಮವು ಈ ಮುಂದಿನಂತಿದೆ:-

ಒಬ್ಬ ಸದಸ್ಯನು, ಹಕ್ಕುಚ್ಯುತಿ ಪ್ರಶ್ನೆಯನ್ನು ಎತ್ತಲು ಇಚ್ಛಿಸಿದಲ್ಲಿ ಅವನು ಹಾಗೆ ಮಾಡುವ ತನ್ನ ಉದ್ದೇಶದ ಬಗ್ಗೆ ಸಭಾಧ್ಯಕ್ಷರಿಗೆ ನೋಟೀಸು ನೀಡುವುದು ಅಗತ್ಯವಾಗಿರುತ್ತದೆ. ಅದು ಇತ್ತೀಚಿಗೆ ನಿರ್ದಿಷ್ಟ ನಡೆದಿರುವ ವಿಷಯವಾಗಿದ್ದಲ್ಲಿ ಮತ್ತು ಸಭಾಧ್ಯಕ್ಷರು, ಈ ವಿಷಯದಲ್ಲಿ ಸದನದ ಪಾಲ್ಗೊಳ್ಳುವಿಕೆಯು ಅವಶ್ಯಕವೆಂದು ಮನಗಂಡರೆ, ಅವರು ತನ್ನ ಒಪ್ಪಿಗೆಯನ್ನು ನೀಡಬಹುದು. ಸದಸ್ಯನು ತರುವಾಯ, ಪ್ರಶ್ನೆಯನ್ನು ಎತ್ತುವುದಕ್ಕೆ ಅನುಮತಿ ಕೋರುತ್ತಾನೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಸಂಕ್ಷಿಪ್ತ ಹೇಳಿಕೆಯನ್ನು ನೀಡುತ್ತಾನೆ. ಅನುಮತಿ ನೀಡುವುದಕ್ಕೆ ಆಕ್ಷೇಪಣೆಗಳಿದ್ದರೆ, ಸಭಾಧ್ಯಕ್ಷರು, ಅನುಮತಿ ನೀಡುವುದರ ಪರವಾಗಿರುವ ಸದಸ್ಯರನ್ನು ತಮ್ಮ ಸ್ಥಳದಲ್ಲಿ ಎದ್ದು ನಿಲ್ಲುವಂತೆ ಕೋರುತ್ತಾರೆ ಮತ್ತು ಯುವ ಸಂಸತ್ತಿನಲ್ಲಿ ಹಾಜರಿದ್ದ ಸದಸ್ಯರ ಶೇಕಡಾ 10 ರಷ್ಟಕ್ಕೆ ಕಡಿಮೆ ಇಲ್ಲದ ಸದಸ್ಯರು ಎದ್ದು ನಿಂತರೆ, ಅನುಮತಿಯನ್ನು ಮಂಜೂರು ಮಾಡಲಾಗಿದೆ ಎಂದು ಸಭಾಧ್ಯಕ್ಷರು ಘೋಷಿಸುತ್ತಾರೆ. ಸಭಾಧ್ಯಕ್ಷರು ಅನುಮತಿಯನ್ನು ನಿರಾಕರಿಸಿದರೆ, ಅವರು ಆ ಬಗ್ಗೆ ಸದನದಲ್ಲಿ ತಿಳಿಸುತ್ತಾರೆ ಮತ್ತು ಅಲ್ಲಿಗೆ ವಿಷಯವು ಮುಕ್ತಾಯವಾಗುತ್ತದೆ. ಹಕ್ಕುಚ್ಯುತಿಯ ಪ್ರಶ್ನೆಗಳು ಆದ್ಯತೆಗೆ ಅರ್ಹವಾಗಿರುತ್ತವೆ ಮತ್ತು ಪ್ರಶ್ನೋತ್ತರ ವೇಳೆಯ ನಂತರ ಕೂಡಲೇ ಅವುಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಅನುಮತಿಯನ್ನು ನೀಡಿದಾಗ, ಸದನವು ಪ್ರಶ್ನೆಯನ್ನು ಪರಿಗಣಿಸಬಹುದು ಮತ್ತು ಒಂದು ತೀರ್ಮಾನಕ್ಕೆ ಬರಬಹುದು ಅಥವಾ ಒಬ್ಬ ಸದಸ್ಯನು ಹಕ್ಕುಬಾಧ್ಯತಾ ಸಮಿತಿಗೆ ವಿಷಯವನ್ನು ಉಲ್ಲೇಖಿಸಬೇಕೆಂದು ಮಾಡಿದ ಸೂಚನೆಯ ಮೇಲೆ ಹಾಗೆ ಉಲ್ಲೇಖಿಸಬಹುದು. ಸಭಾಧ್ಯಕ್ಷರು ತಾವೇ ಸ್ವತಃ, ಯಾವುದೇ ಹಕ್ಕುಬಾಧ್ಯತಾ ಪ್ರಶ್ನೆಯನ್ನು ಪರೀಕ್ಷಿಸುವುದಕ್ಕಾಗಿ ತನಿಖೆ ನಡೆಸುವುದಕ್ಕಾಗಿ ಅಥವಾ ವರದಿ ಸಲ್ಲಿಸುವುದಕ್ಕಾಗಿ ಹಕ್ಕುಬಾಧ್ಯತಾ ಸಮಿತಿಗೆ ಉಲ್ಲೇಖಿಸಬಹುದು.

***6. ಸಭೆಯ ಮುಂದೆ ಮಂಡಿಸಬೇಕಾಗಿರುವ ಪತ್ರಗಳು:***

ಸಂವಿಧಾನದ ಉಪಬಂಧಗಳ ಅಥವಾ ಪ್ರಕ್ರಿಯಾ ನಿಯಮಗಳ ಅಥವಾ ಸಭಾಧ್ಯಕ್ಷರ ನಿರ್ದೇಶನಗಳ ಅಥವಾ ಸಂಸತ್ತು ರಚಿಸಿದ ಯಾವುದೇ ಅಧಿನಿಯಮ ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳು ಮತ್ತು ವಿನಿಯಮಗಳ ಅನುಸರಣೆಯಲ್ಲಿ, ಸಭಾಧ್ಯಕ್ಷರ ಅನುಮತಿಯೊಂದಿಗೆ ಸಚಿವರಿಂದ ಅಥವಾ ಖಾಸಗೀ ಸದಸ್ಯರಿಂದ ಅಥವಾ ಸದನದ ಕಾರ್ಯದರ್ಶಿಯವರಿಂದ, ಅವುಗಳನ್ನು ಸದನದ ದಾಖಲೆಯಲ್ಲಿ ತರುವ ಉದ್ದೇಶಕ್ಕಾಗಿ ಆ ಪತ್ರಗಳನ್ನು ಅಥವಾ ದಸ್ತಾವೇಜುಗಳನ್ನು ಸದನದ ಮುಂದೆ ಮಂಡಿಸುವುದು ಎಂದು ಅರ್ಥ. ಹಾಗೆ ಮಂಡಿಸಲಾದ ಎಲ್ಲಾ ಪತ್ರಗಳನ್ನು ಸದನದ ವ್ಯವಹರಣೆಗಳ ಒಂದು ಭಾಗವೆಂಬುದಾಗಿ ಮುದ್ರಿಸಲಾಗುತ್ತದೆ, ಇಲ್ಲವೇ ಗ್ರಂಥಾಲಯದಲ್ಲಿ ಇಡಲಾಗುತ್ತದೆ. ಸದನದ ಮುಂದೆ ಮಂಡಿಸಲು ವ್ಯವಹಾರಗಳ ಪಟ್ಟಿಯಲ್ಲಿ ನಮೂದಿಸಿದ ಪತ್ರಗಳಿಗೆ ಸಂಬಂಧಪಟ್ಟಂತೆ ಸಚಿವರಿಂದ ಮಾಹಿತಿಗಳನ್ನು ಪಡೆಯಲು ಇಚ್ಛಿಸುವ ಸದಸ್ಯರು, ಸಂಬಂಧಪಟ್ಟ ಸಚಿವರಿಂದ ಅಗತ್ಯವಿರುವ ಮಾಹಿತಿಯ ಯಾವ ನಿರ್ದಿಷ್ಟ ಅಂಶದ ಬಗ್ಗೆ ಮಾಹಿತಿ ಬೇಕೆಂಬುದನ್ನು ಸೂಚಿಸಿ ಸಭಾಧ್ಯಕ್ಷರಿಗೆ ಮುಂಗಡ ಸೂಚನೆಯನ್ನು ನೀಡತಕ್ಕದ್ದು. ಇದರಿಂದಾಗಿ ಸಂಬಂಧಪಟ್ಟ ಸಚಿವರು ಮಾಹಿತಿಯೊಂದಿಗೆ ಸಿದ್ಧವಾಗಿ ಬರಲು ಸಾಧ್ಯವಾಗುತ್ತದೆ.

***7. ಗಮನ ಸೆಳೆಯುವ ಸೂಚನೆಗಳು:***

ವಸ್ತು ವಿಷಯದ ತುರ್ತುಸ್ವರೂಪ ಮತ್ತು ಸಾರ್ವಜನಿಕ ಪ್ರಾಮುಖ್ಯತೆಯನ್ನು ಗಮನಿಸಿ ಸಭಾಧ್ಯಕ್ಷರು ಅಂಗೀಕಾರಾರ್ಹತೆಯನ್ನು ತೀರ್ಮಾನಿಸುತ್ತಾರೆ. ಅದರ ನೋಟೀಸನ್ನು ಸಾಧ್ಯವಾದಷ್ಟು ಮಟ್ಟಿಗೆ ನಿಲುವಳಿಯ ವಸ್ತು ವಿಷಯ ಉದ್ಭವಿಸಿದ ದಿನವೇ ನೀಡತಕ್ಕದ್ದು, ಸಭಾಧ್ಯಕ್ಷರು, ಸದಸ್ಯರನ್ನು ಕರೆದಾಗ, ಅವನು ತನ್ನ ಸ್ಥಳದಲ್ಲಿ ಎದ್ದು ನಿಲ್ಲುವುದು ಮತ್ತು ವಿಷಯಕ್ಕೆ ಸಂಬಂಧಪಟ್ಟ ಸಚಿವರ ಗಮನ ಸೆಳೆಯುವುದು ಹಾಗೂ ಒಂದು ಹೇಳಿಕೆ ನೀಡುವಂತೆ ಅವರನ್ನು ಕೋರಿಕೊಳ್ಳುವುದು ಪದ್ಧತಿಯಾಗಿರುತ್ತದೆ. ಸಚಿವರು ಹೇಳಿಕೆಯನ್ನು ಓದುತ್ತಾರೆ ಅಥವಾ ಹೇಳಿಕೆಯು ಬಹಳ ದೊಡ್ಡದಾಗಿದ್ದರೆ, ಅವರು, ಅದನ್ನೇ ಸದನದ ಮುಂದೆ ಮಂಡಿಸಬಹುದು. ದೀರ್ಘ ಹೇಳಿಕೆಯ ಪ್ರಕರಣದಲ್ಲಿ ಹೇಳಿಕೆಯನ್ನು ಓದಿ ತಿಳಿದುಕೊಳ್ಳಲು ಮತ್ತು ಅವರು ಪ್ರಶ್ನೆಗಳನ್ನು ಕೇಳಲು ಸದಸ್ಯರಿಗೆ ಸಮಯಾವಕಾಶವನ್ನು ನೀಡಲಾಗುತ್ತದೆ, ಅದಕ್ಕೆ ಸಚಿವರು ಸ್ಥಳದಲ್ಲಿಯೇ ಉತ್ತರಿಸುವರು. ಹೇಳಿಕೆಯ ಮೇಲೆ ಯಾವುದೇ ಚರ್ಚೆ ಇರುವುದಿಲ್ಲ, ಆದರೆ, ಸ್ಪಷ್ಟನೆಗಾಗಿ ಸದಸ್ಯರು ಪ್ರಶ್ನೆಗಳನ್ನು ಕೇಳಬಹುದು.

ನಿಲುವಳಿ ಸೂಚನೆಯು ಯುವ ಸಂಸತ್ತಿನ ಕಾರ್ಯಸೂಚಿಯಲ್ಲಿ ಒಂದು ಪ್ರಮುಖ ವಿಷಯವಾಗಿರುತ್ತದೆ ಮತ್ತು ಇದು ಒಂದು ದೀರ್ಘಾವಧಿ ಚರ್ಚೆಯಾಗಿ ಪರಿಣಮಿಸದಂತೆ ನೋಡಿಕೊಳ್ಳತಕ್ಕದ್ದು. ಸಚಿವರು, ತಮ್ಮ ಹೇಳಿಕೆಯನ್ನು ಓದಿದ ತರುವಾಯ ಆ ಬಗ್ಗೆ ಸ್ಪಷ್ಟೀಕರಣವನ್ನು ಅಥವಾ ಒಂದು ಅಂಶವನ್ನು ವಿಶದೀಕರಿಸಲು ಪ್ರಥಮ ಅವಕಾಶವನ್ನು ನಿಲುವಳಿ ಸೂಚನೆಯನ್ನು ಮಂಡಿಸಿದ ಸದಸ್ಯನಿಗೆ ನೀಡಲಾಗುತ್ತದೆ. ತದನಂತರ ಸಭಾಧ್ಯಕ್ಷರ ಅನುಮತಿಯೊಂದಿಗೆ ಕಾರ್ಯಕಲಾಪಗಳ ಪಟ್ಟಿಯಲ್ಲಿರುವ ಇತರ ಸದಸ್ಯರಿಗೆ, ಪ್ರಶ್ನೆ ಕೇಳಲು ಅಥವಾ ಸ್ಪಷ್ಟೀಕರಣ ಕೋರಲು ಅವಕಾಶವಿರುತ್ತದೆ. ಎಲ್ಲಾ ಸದಸ್ಯರು ತಮ್ಮ ವಾದಗಳನ್ನು ಮಂಡಿಸಿದಾಗ ಸದಸ್ಯರು ಎತ್ತಿದ ಅಂಶಗಳಿಗೆ ಉತ್ತರಿಸಲು ಸಂಬಂಧಿಸಿದ ಸಚಿವರನ್ನು ಸಭಾಧ್ಯಕ್ಷರು ಆಹ್ವಾನಿಸುತ್ತಾರೆ.

ಈ ಬಾಬಿಗೆ ಸಂಬಂಧಪಟ್ಟ ನಮೂದುಗಳನ್ನು ಈ ಮುಂದಿನ ಕ್ರಮದಲ್ಲಿ ಕಲಾಪಗಳ ಪಟ್ಟಿಯಲ್ಲಿ ನೀಡಲಾಗಿದೆ:-

ಗಮನ ಸೆಳೆಯುವ ಸೂಚನೆ:

ಶ್ರೀ ಆನಂದಕುಮಾರ್;

ಶ್ರೀ ಜಾರ್ಜ್ ಮ್ಯಾಥ್ಯೂ;

ಶ್ರೀ ಸುರೇಶ್ ಸಿಂಗ್;

ಶ್ರೀ ಮೊಹಮ್ಮದ್ ಖಾನ್.

ದೇಶದ ವಿವಿಧ ಭಾಗಗಳಲ್ಲಿ, ನ್ಯಾಯವಾದಿಗಳು ಹೂಡಿದ ಮುಷ್ಕರಗಳು ಮುಂದುವರಿದುದರಿಂದ ಉದ್ಭವಿಸಿದ ಪರಿಸ್ಥಿತಿಯ ಬಗ್ಗೆ ಮತ್ತು ವಿಷಯವನ್ನು ಇತ್ಯರ್ಥಗೊಳಿಸಲು ಸರ್ಕಾರವು ಕೈಗೊಂಡ ಕ್ರಮದ ಬಗ್ಗೆ ಗೃಹ ಸಚಿವರ ಗಮನ ಸೆಳೆಯುವುದು.

ಇತ್ತೀಚಿಗೆ ಯಾವ ಕೆಲವು ವಿಷಯಗಳ ಮೇಲೆ ಸಂಸತ್ತಿನಲ್ಲಿ ಗಮನ ಸೆಳೆಯುವ ಸೂಚನೆಗಳನ್ನು ಅನುಸರಿಸಲಾಗಿತ್ತೋ ಅವುಗಳು ಈ ಮುಂದಿನಂತಿವೆ:-

1. ದೆಹಲಿ ಸಾರಿಗೆ ಸಂಸ್ಥೆಯ ಉದ್ಯೋಗಿಗಳು ಹೂಡಿದ ದೆಹಲಿ ಸಾರಿಗೆ ಸಂಸ್ಥೆಯ ಮುಷ್ಕರದಿಂದಾಗಿ ಉದ್ಭವಿಸಿದ ಪರಿಸ್ಥಿತಿ.
2. ಕಬ್ಬು ಬೆಳೆಗಾರರಿಗೆ ಅವರ ಉತ್ಪನ್ನಕ್ಕಾಗಿ ಲಾಭದಾಯಕ ದರ ಸಿಗುವಂತೆ ಮಾಡುವ ಅಗತ್ಯತೆ.
3. ಜವಳಿ ಕೈಗಾರಿಕೆಯಲ್ಲಿ ಉಂಟಾಗಿರುವ ಬಿಕ್ಕಟ್ಟಿನಿಂದಾಗಿ ಹತ್ತಿ ಬೆಳೆಗಾರರ ಮತ್ತು ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ನೇಕಾರರ ಮೇಲೆ ಉಂಟಾಗಿರುವ ಪರಿಣಾಮ ಮತ್ತು ಈ ವಿಷಯದಲ್ಲಿ ಸರ್ಕಾರವು ಕೈಗೊಂಡ ಕ್ರಮ.

***8. ಶಾಸನ ರಚನಾ ವ್ಯವಹಾರ:***

ಈ ಸಂಬಂಧದಲ್ಲಿ, "ಶಾಸನ ರಚನೆ" ಎಂಬುದರ ಬಗ್ಗೆ ಯುವ ಸಂಸತ್ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿರುವ ಅಭ್ಯರ್ಥಿಗಳಿಗೆ ಕೆಲವು ಸ್ಪಷ್ಟೀಕರಣ ನೀಡುವುದು ಅವಶ್ಯಕವಾಗಿದೆ. ಅದಕ್ಕೆ ಮೂರುನ ಅರ್ಥಗಳಿವೆ.

(ಎ) ಕಾನೂನಿನ ನಿಯಮಗಳನ್ನು ಅಧಿನಿಯಮಿಸುವ ಪ್ರಕ್ರಿಯೆ ಮತ್ತು ಅವುಗಳನ್ನು ಅಧಿನಿಯಮಿಸುವ ಪ್ರಾಧಿಕಾರ.

(ಬಿ) ಈ ಪ್ರಕ್ರಿಯೆಯ ಫಲಿತಾಂಶ ಅಥವಾ ಪ್ರಯೋಜನವೆಂದೂ ತಿಳಿಯಬಹುದು ಮತ್ತು

(ಸಿ) ಅದು, ಪ್ರಸಕ್ತ ಇರುವ ಶಾಸನಗಳ ಮೂಲಕ ಅಧಿಕಾರ ನೀಡಲಾದ ಪ್ರಾದೇಶಿಕ ಅಥವಾ ಸ್ಥಳೀಯ ಆಡಳಿತಾತ್ಮಕ ಏಜೆನ್ಸಿಗಳ ಮೂಲಕ ರಚಿಸಲಾದ ನಿಯಮಗಳ ಮತ್ತು ವಿನಿಯಮಗಳ ವ್ಯಾಪಕ ವ್ಯವಸ್ಥೆ ಎಂದು ಸಹ ಉಲ್ಲೇಖಿಸಬಹುದು.

ಕಾನೂನುಗಳು ಮೂಲತಃ ನಡವಳಿಕೆಯ ನಿಯಮಗಳು ಅಥವಾ ಸೂತ್ರಗಳು, ಅವುಗಳು ನಿಷೇಧಗಳು, ವಿಧಿವಿಧಾನಗಳು ಮತ್ತು ಅನುಮತಿಗಳ ಒಂದು ಸರಣಿಯಾಗಿದೆ. ಅವುಗಳು ನಿರ್ದಿಷ್ಟ ಸಂದರ್ಭದಲ್ಲಿ ಏನು ಮಾಡಬೇಕು, ಏನು ಮಾಡಬಾರದು ಅಥವಾ ಏನನ್ನು ಮಾಡಬಹುದು ಎಂಬುದನ್ನು ನಮಗೆ ತಿಳಿಸುತ್ತವೆ. ನಿಷೇಧಿಸಬಹುದಾದವುಗಳ ಅಥವಾ ನಿಯಮಿಸಬಹುದಾದವುಗಳ ಉಲ್ಲಂಘನೆಗಾಗಿ ಕಾನೂನು ದಂಡವನ್ನು ವಿಧಿಸಬಹುದು. ಕಾನೂನುಗಳು ಅವಶ್ಯಕವಾಗಿ ಸಾಮಾಜಿಕ ಅಗತ್ಯತೆಗಳನ್ನು ಪೂರೈಸುವಂತಿರಬೇಕು. ಇಲ್ಲದಿದ್ದಲ್ಲಿ, ಅವುಗಳು ಅರ್ಥಹೀನವಾಗುತ್ತವೆ ಮತ್ತು ಅನವಶ್ಯಕವಾಗುತ್ತವೆ.

ಕಾನೂನುಗಳು ತಮ್ಮ ಸ್ವರೂಪದಿಂದಾಗಿ ಬಹಳ ಅಮೂರ್ತ ರಚನೆಗಳಾಗಿವೆ. ಇಂದಿನ ಆಧುನಿಕ ಸ್ಥಿತಿಯಲ್ಲಿ ಕಾನೂನನ್ನು ರಚಿಸುವುದು ಬಹಳ ಸಂಕೀರ್ಣ ಮತ್ತು ಜಟಿಲವಾದ ಕಾರ್ಯವಾಗಿದೆ. ಅದಕ್ಕೆ ಅಪಾರ ದತ್ತಾಂಶಗಳ ಸಂಶೋಧನೆ, ಸಂಗ್ರಹಣೆ, ಸಹಯೋಗ ಮತ್ತು ವಿಶ್ಲೇಷಣೆಯ ಅವಶ್ಯಕತೆ ಇದೆ. ಪ್ರಾರೂಪಣಾ ಕೌಶಲ್ಯ, ಉತ್ತಮ ಸಮಾಲೋಚನೆ ಮತ್ತು ಕಾನೂನಿನಿಂದ ಬಾಧಿತರಾಗಬಹುದಾದಂಥ ಅಥವಾ ಕಾನೂನನ್ನು ಒತ್ತಾಯಪಡಿಸುವಂಥ ಆಸಕ್ತ ಗುಂಪುಗಳೊಂದಿಗೆ ಚರ್ಚೆ ನಡೆಸುವುದು ಅಗತ್ಯವಿರುತ್ತದೆ ಹಾಗೂ ಸಹಕಾರವನ್ನು ಖಚಿತಪಡಿಸಿಕೊಳ್ಳಲು ಮತ್ತು ಘರ್ಷಣೆಯನ್ನು ತಪ್ಪಿಸಲು ಅನುಕೂಲಕರ ರಾಜಿ ಮನೋಭಾವದ ಅವಶ್ಯಕತೆ ಇರುತ್ತದೆ. ಎಲ್ಲಾ ಕಾನೂನುಗಳು ಒಂದಲ್ಲ ಒಂದು ರೀತಿಯಲ್ಲಿ ನಾಗರಿಕ ಜೀವನ, ಸ್ವಾತಂತ್ರ್ಯ ಅಥವಾ ಸ್ವತ್ತಿಗೆ ಬಾಧಕವಾಗಿರುತ್ತವೆ. ವ್ಯಾಪಾರ, ಕಾರ್ಮಿಕ, ಕೃಷಿ ಕೈಗಾರಿಕೆಗಳಂಥ ವೃತ್ತಿಪರ, ಉದ್ಯೋಗಸ್ಥ ಮತ್ತು ವಿಶೇಷ ಆಸಕ್ತಿಗಳು/ಗುಂಪುಗಳು ಪರಸ್ಪರ ವಿರೋಧಿ ಆಸಕ್ತಿಗಳನ್ನು ಹೊಂದಿರುತ್ತವೆ. ಆ ಕಾರಣದಿಂದಾಗಿ ಅವು ಇತರ ಗುಂಪುಗಳೊಂದಿಗೆ ಅಥವಾ ಸರ್ಕಾರದೊಂದಿಗೆ ವ್ಯವಹರಿಸುವಲ್ಲಿ ಸಂಸ್ಥೆಗಳು ತಮ್ಮನ್ನು ತಾವು ಬಲಪಡಿಸುವುದಕ್ಕಾಗಿ ಒಕ್ಕೂಟಗಳು ಮುಂತಾದವುಗಳನ್ನು ಸಂಘಟಿಸಿಕೊಂಡಿವೆ.

ಅದರಿಂದಾಗಿ, ಒಂದು ಶಾಸನವು ಆಡಳಿತಾತ್ಮಕ ಸಮಸ್ಯೆಗಳಲ್ಲಿ ಮತ್ತು ಅನುಭವದಲ್ಲಿ ಅಥವಾ ರಾಜಕೀಯ ಮತ್ತು ಸಾಮಾಜಿಕ ತತ್ವದ ತಾಂತ್ರಿಕ ಮೌಲ್ಯ ನಿರ್ಣಯದಲ್ಲಿ ತನ್ನ ಮೂಲವನ್ನು ಹೊಂದಿರಬಹುದು. ಮೂಲವು ಯಾವುದೇ ಆಗಿದ್ದರೂ, ಅದು ಒಂದು ಪ್ರಸ್ತಾವನೆಯಾಗಿ ಹೊರ ಬಂದಾಗ ಅದರ ಮೇಲೆ ಚರ್ಚೆ, ವಿಮರ್ಶೆ ಅಥವಾ ಹಲವಾರು ಪಂಗಡಗಳೊಂದಿಗೆ ಸಮಾಲೋಚನೆಗಳು ನಡೆಯುತ್ತವೆ.

ಆ ತರುವಾಯ ಪ್ರಸ್ತಾವವು ಸಚಿವ ಸಂಪುಟದ ಮುಂದೆ ಬಂದಾಗ ಸಚಿವ ಸಂಪುಟವು ಅದರ ಅವಶ್ಯಕ ಸಾರ, ಸ್ವರೂಪ ಮತ್ತು ಸಮಯಾಯೋಚನೆ ಇವುಗಳ ಬಗ್ಗೆ ನಿರ್ಧರಿಸುತ್ತದೆ. ಆ ತರುವಾಯ ಸರ್ಕಾರಿ ಪ್ರಾರೂಪಕರು, ತಜ್ಞರು ಮತ್ತು ಉದ್ಯೋಗಿಗಳು ಅದಕ್ಕೆ ಒಂದು ವಿಧೇಯಕದ ರೂಪ ನೀಡಿದ ಮೇಲೆ ಅದನ್ನು ಸಂಸತ್ತಿನಲ್ಲಿ ಮಂಡಿಸಲಾಗುತ್ತದೆ.

ಸಂಸತ್ತಿಗೆ, ಸಂವಿಧಾನದ ಏಳನೇ ಅನುಸೂಚಿಯಲ್ಲಿ ಒಕ್ಕೂಟ ಪಟ್ಟಿ ಎಂದು ಕರೆಯಲಾದ ಪಟ್ಟಿ I ರಲ್ಲಿ ನಮೂದಿಸಿದ ವಿಷಯಗಳ ಬಗ್ಗೆ ಕಾನೂನು ರಚಿಸಲು ರಾಜ್ಯ ಸಂಸತ್ತಿಗೆ ಅನನ್ಯ ಅಧಿಕಾರವಿರುತ್ತದೆ. ಅದರಂತೆಯೇ, ರಾಜ್ಯ ಪಟ್ಟಿಯೆಂದು ಕರೆಯಲಾದ ಪಟ್ಟಿ IIರಲ್ಲಿ ನಮೂದಿಸಿದ ವಿಷಯಗಳ ಬಗ್ಗೆ ಕಾನೂನು ರಚಿಸಲು ವಿಧಾನ ಮಂಡಲಗಳಿಗೆ ಅನನ್ಯ ಅಧಿಕಾರವಿರುತ್ತದೆ. ಪಟ್ಟಿ IIIನ್ನು ಸಮವರ್ತಿ ಪಟ್ಟಿಯೆಂದು

ಕರೆಯಲಾಗುತ್ತಿದ್ದು, ಅದು ಸಂಸತ್ತು ಮತ್ತು ರಾಜ್ಯ ವಿಧಾನ ಮಂಡಲಗಳು ಕಾನೂನು ರಚಿಸಲು ಸಮವರ್ತಿ ಅಧಿಕಾರವನ್ನು ಹೊಂದಿರುವ ವಿಷಯಗಳನ್ನು ಒಳಗೊಂಡಿರುತ್ತದೆ.

(i) ವಿಧೇಯಕಗಳ ವರ್ಗೀಕರಣ:

ವಿಧೇಯಕಗಳನ್ನು ಸ್ಥೂಲವಾಗಿ (1) ಸಚಿವರಿಂದ ಪ್ರಾಯೋಜಿಸಲ್ಪಡುವ ಸರ್ಕಾರಿ ವಿಧೇಯಕಗಳು ಮತ್ತು (2) ಸಚಿವರನ್ನು ಹೊರತುಪಡಿಸಿ ವೈಯಕ್ತಿಕ ಸದಸ್ಯರಿಂದ ಪ್ರಾಯೋಜಿಸಲ್ಪಡುವ ಖಾಸಗಿ ಸದಸ್ಯರ ವಿಧೇಯಕಗಳು ಎಂಬುದಾಗಿ ವಿಭಜನೆ ಮಾಡಲಾಗಿದೆ. ವಿಧೇಯಕಗಳನ್ನು ಅವುಗಳು ಒಳಗೊಂಡಿರುವ ವಿಷಯಗಳ ಆಧಾರದ ಮೇಲೆ ಈ ಮುಂದಿನಂತೆ ವರ್ಗೀಕರಿಸಲಾಗಿದೆ:-

(ಎ) ಮೂಲ ವಿಧೇಯಕಗಳು, ಅಂದರೆ, ಹೊಸ ಪ್ರಸ್ತಾವನೆ, ವಿಚಾರ ಅಥವಾ ಕಾರ್ಯನೀತಿಯನ್ನು ಒಳಗೊಂಡ ವಿಧೇಯಕಗಳು.

(ಬಿ) ತಿದ್ದುಪಡಿ ವಿಧೇಯಕಗಳು, ಅಂದರೆ ಈಗಿರುವ ಅಧಿನಿಯಮಗಳನ್ನು ಮಾರ್ಪಾಡು ಮಾಡಲು, ತಿದ್ದುಪಡಿ ಮಾಡಲು ಅಥವಾ ಪರಿಷ್ಕರಿಸಲು ಬಯಸುವ ವಿಧೇಯಕಗಳು.

(ಸಿ) ಕ್ರೋಢೀಕರಣ ವಿಧೇಯಕಗಳು, ಅಂದರೆ ಅನೇಕ ಅಧಿನಿಯಮಿತಿಗಳಲ್ಲಿ ಹಂಚಿ ಹೋಗಿರುವ ಉಪಬಂಧಗಳನ್ನು ಒಂದೇ ಅಧಿನಿಯಮಿತಿಯಲ್ಲಿ ಒಟ್ಟುಗೂಡಬಯಸುವ ವಿಧೇಯಕಗಳು.

(ಡಿ) ಅವಧಿ ಮುಕ್ತಾಯವಾಗುತ್ತಿರುವ ಅಧಿನಿಯಮಿತಿಗಳನ್ನು ಮುಂದುವರಿಸುವ ಅಥವಾ ಜೀವಂತವಾಗಿರಿಸುವ ವಿಧೇಯಕಗಳು.

(ಇ) ಅಂಗೀಕೃತವಾದ ಅಧ್ಯಾದೇಶಗಳನ್ನು ಪ್ರತಿಸ್ಥಾಪಿಸುವ ವಿಧೇಯಕಗಳು.

(ಎಫ್) ಸಂವಿಧಾನದ ತಿದ್ದುಪಡಿ ವಿಧೇಯಕಗಳು.

(ii) ವಿಧೇಯಕದ ಹಂತ:

ಒಂದು ವಿಧೇಯಕವು, ವಿಧೇಯಕದ ಮೂರು ಪರಿಚಯಗಳೆಂದು ಕರೆಯಲಾಗುವ ಮೂರು ಹಂತಗಳನ್ನು ಹಾದು ಹೋಗಬೇಕಾಗುತ್ತದೆ,-

ವಿಧೇಯಕದ ಮೊದಲ ಹಂತದ ಪರಿಚಯ:

ವಿಧೇಯಕದ ಮಂಡನೆಗೆ ಗೊತ್ತುಪಡಿಸಿದ ದಿನದಂದು ವಿಧೇಯಕವನ್ನು ಮಂಡಿಸುವುದಕ್ಕೆ ಅನುಮತಿಗಾಗಿ ಸೂಚನೆಯನ್ನು ಮಂಡಿಸುವಂತೆ ಸಭಾಧ್ಯಕ್ಷರು ಪ್ರಭಾರದಲ್ಲಿರುವ ಸಚಿವರನ್ನು ಕರೆಯುತ್ತಾರೆ. ಸೂಚನೆಯು ಹೀಗಿರುತ್ತದೆ.

"ನಾನು............ (ವಿಧೇಯಕದ ಶೀರ್ಷಿಕೆ). ವಿಧೇಯಕವನ್ನು ಮಂಡಿಸುವುದಕ್ಕೆ ಅನುಮತಿಕೊಡುವ ಸೂಚನೆಯನ್ನು ಮಂಡಿಸಲು ಇಚ್ಛಿಸುತ್ತೇನೆ.

ತರುವಾಯ ಸಭಾಧ್ಯಕ್ಷರು ಪ್ರಶ್ನೆಯನ್ನು ಮತಕ್ಕಾಗಿ ಈ ಮುಂದಿನ ಪದಗಳಲ್ಲಿ ಸದನದ ಮುಂದೆ ಇಡುತ್ತಾರೆ. "............... ಸಚಿವರಿಗೆ ................ (ವರ್ಷ) .................. ವಿಧೇಯಕವನ್ನು ಮಂಡಿಸುವುದಕ್ಕಾಗಿ ಅನುಮತಿ ನೀಡಬೇಕೆಂಬುದು ಪ್ರಶ್ನೆಯಾಗಿದೆ. ಪರವಾಗಿರುವವರು ಹೌದು" ಎಂದು ಹೇಳಬೇಕು, ವಿರೋಧಿಸುವವರು "ಇಲ್ಲ" ಎಂದು ಹೇಳಬೇಕು.

ಸದನದ ತೀರ್ಮಾನವೇನೆಂಬುದನ್ನು ನಿರ್ಧರಿಸಿದ ತರುವಾಯ ಸಭಾಧ್ಯಕ್ಷರು ಮೂರು ಬಾರಿ "ಹೌದು (ಇಲ್ಲ) ಎಂದವರು ಗೆದ್ದಿದ್ದಾರೆ; ಹೌದು (ಇಲ್ಲ) ಎಂದವರು ಗೆದ್ದಿದ್ದಾರೆ, ಹೌದು (ಇಲ್ಲ) ಎಂದವರು ಗೆದ್ದಿದ್ದಾರೆ" ಎಂದು ಹೇಳುತ್ತಾರೆ.

ಆಗ ಅವರು, ಸಂದರ್ಭಾನುಸಾರ "ಅನುಮತಿಯನ್ನು ನೀಡಲಾಗಿದೆ (ಅಥವಾ ನೀಡಲಾಗಿಲ್ಲ) ಎಂದು ಘೋಷಿಸುತ್ತಾರೆ. ಅನುಮತಿಯನ್ನು ನೀಡಲಾಗಿದ್ದರೆ, ಅವರು ಸಂಬಂಧಿಸಿದ ಸಚಿವರಿಗೆ ವಿಧೇಯಕವನ್ನು ಮಂಡಿಸುವಂತೆ ಕೇಳುತ್ತಾರೆ. ಸಚಿವರು ಆಗ ತಮ್ಮ ಆಸನದಲ್ಲಿ ಎದ್ದು ನಿಂತು "ನಾನು ............. ವಿಧೇಯಕವನ್ನು ಮಂಡಿಸುತ್ತೇನೆ" ಎಂದು ಹೇಳುತ್ತಾರೆ. ಅದು ದಿನ ನಿತ್ಯದ ವ್ಯವಹಾರ ಪಟ್ಟಿಯಲ್ಲಿ ಕಾಣಿಸತಕ್ಕ ನಮೂನೆಯು ಈ ಮುಂದೆ ಕೊಡಲಾದ ನಿದರ್ಶನದಂತೆ ಇರತಕ್ಕದ್ದು.

***ಶಾಸನ ರಚನಾ ಕಲಾಪಗಳು***

***ಮಂಡನೆಗಾಗಿ ವಿಧೇಯಕ***

***ಲೇಖಾನುದಾನ ವಿಧೇಯಕ, 2015***

ಶ್ರೀ .................. (ಹಣಕಾಸು ಸಚಿವರು) ಲೇಖಾನುದಾನ ವಿಧೇಯಕ, 2015ನ್ನು ಮಂಡಿಸುವುದಕ್ಕಾಗಿ ಅನುಮತಿ ಕೋರುವ ಸೂಚನೆ ಪ್ರಸ್ತಾಪಿಸುವರು "ಹಾಗೂ ವಿಧೇಯಕವನ್ನು ಮಂಡಿಸುವರು". ಸೂಚನೆಯನ್ನು ಅಂಗೀಕರಿಸಿದ ಮೇಲೆ ಸಚಿವರು ವಿಧೇಯಕವನ್ನು ಮಂಡಿಸಿದ್ದಾರೆ ಎಂದು ಪರಿಗಣಿಸಲಾಗುತ್ತದೆ.

ಸಂಪ್ರದಾಯದಂತೆ, ಅಂಥ ಸೂಚನೆಯನ್ನು ಅದು ಸದನದ ಸಕ್ಷಮತೆಯ ವ್ಯಾಪ್ತಿಯೊಳಗೆ ಇಲ್ಲವೆಂದು, ಒಬ್ಬ ಅಥವಾ ಹೆಚ್ಚು ಸದಸ್ಯರು ಅಭಿಪ್ರಾಯಪಟ್ಟ ಹೊರತು, ವಿರೋಧಿಸುವುದಿಲ್ಲ. ವಿರೋಧಿಸಿದ ಸಂದರ್ಭದಲ್ಲಿ, ಆ ದಿನದ ಉಪವೇಶನವು ಪ್ರಾರಂಭವಾಗುವುದಕ್ಕೆ ಮುಂಚೆ ಅವರು ತಮ್ಮ ಅಭಿಪ್ರಾಯವನ್ನು ಲಿಖಿತದಲ್ಲಿ ಸದನದ ಮಹಾಕಾರ್ಯದರ್ಶಿಗೆ ತಿಳಿಸಬೇಕಾಗುತ್ತದೆ.

**ವಿಧೇಯಕದ ಎರಡನೇ ಹಂತದ ಪರಿಚಯ:**

ವಿಧೇಯಕದ ಎರಡನೇ ಹಂತದ ಪರಿಚಯವು ಎರಡು ಹಂತಗಳನ್ನು ಒಳಗೊಂಡಿರುತ್ತದೆ. ಮೊದಲ ಹಂತದಲ್ಲಿ ಈ ಮುಂದಿನ ಸೂಚನೆಗಳಲ್ಲಿ ಯಾವುದಾದರೂ ಒಂದನ್ನು ಮಂಡಿಸಬಹುದು. ಅದರ ನಂತರ 1 ವಿಧೇಯಕದ ಮುಖ್ಯಾಂಶಗಳ ಮೇಲೆ ಚರ್ಚೆ ನಡೆಯುವುದು. ಸೂಚನೆಯು ಹೀಗಿರಬಹುದು ..................... (i) ಅದನ್ನು ಪರಿಗಣನೆಗಾಗಿ ತೆಗೆದುಕೊಳ್ಳಬಹುದು (ii) ಅದನ್ನು ಸದನದ ಪರಿಶೀಲನಾ ಸಮಿತಿಗೆ ಒಪ್ಪಿಸಬಹುದು (iii) ಅದನ್ನು ಸಂಸತ್ತಿನ ಉಭಯ ಸದನಗಳ ಜಂಟಿ ಸಮಿತಿಗೆ ಒಪ್ಪಿಸಬಹುದು ಮತ್ತು (iv) ಅದನ್ನು ಸಾರ್ವಜನಿಕ ಅಭಿಪ್ರಾಯ ಪಡೆಯಲು ಪರಿಚಲಿಸಬಹುದು.

ಎರಡನೇ ಸೂಚನೆಯನ್ನು ಅಂದರೆ, "ವಿಧೇಯಕವನ್ನು ಪರಿಗಣನೆಗಾಗಿ ತೆಗೆದುಕೊಳ್ಳಬಹುದು" ಎಂಬುದನ್ನು ಮಂಡಿಸಿದ ಸಂದರ್ಭದಲ್ಲಿ ಮತ್ತು ಸದನವು ಸಮ್ಮತಿಸಿದಲ್ಲಿ, ಅದು ಸಾಮಾನ್ಯ ಮುಖ್ಯಾಂಶಗಳನ್ನು ಮತ್ತು ಉಪಬಂಧಗಳನ್ನು ಚರ್ಚಿಸಲು ಪ್ರಾರಂಭಿಸುತ್ತದೆ. ಮುಖ್ಯಾಂಶಗಳ ನಿರೂಪಣೆಗೆ ಅಗತ್ಯವಾದ ವಿವರಗಳ ಹೊರತು, ವಿಧೇಯಕದ ಇತರ ವಿವರಗಳನ್ನು ಈ ಹಂತದಲ್ಲಿ ಸಾಮಾನ್ಯವಾಗಿ ಚರ್ಚಿಸಲಾಗುವುದಿಲ್ಲ.

ಎರಡನೇ ಹಂತದ ಪರಿಚಯದ ಎರಡನೇ ಹಂತವು ಮಂಡಿಸಿದಂಥ ಅಥವಾ ಜಂಟಿ ಅಥವಾ ಪರಿಶೀಲನಾ ಸಮಿತಿಯಿಂದ ವರದಿ ಮಾಡಿದಂಥ ವಿಧೇಯಕಗಳ ಖಂಡಾನು ಖಂಡವಾದ ಪರಿಶೀಲನೆಯಾಗಿರುತ್ತದೆ. ವಿಧೇಯಕವನ್ನು ಮಂಡಿಸಿದ ನಂತರ, ತಿದ್ದುಪಡಿಯ ಸೂಚನೆಗಳನ್ನು ಯಾವುದೇ ಸಮಯದಲ್ಲಾದರೂ ಕೊಡಬಹುದು. ಆದರೆ, ಎಲ್ಲಾ ತಿದ್ದುಪಡಿಗಳನ್ನು ವಿಧೇಯಕದ ಪರಿಶೀಲನೆಗೆ ಕನಿಷ್ಠ ಒಂದು ದಿನ ಮುಂಚಿತವಾಗಿಯಾದರೂ ಕೊಡತಕ್ಕದ್ದು. ಸಭಾಧ್ಯಕ್ಷರು, ಸದನದ ಒಪ್ಪಿಗೆಯೊಂದಿಗೆ ಒಂದು ದಿನಕ್ಕಿಂತ ಕಡಿಮೆ ಅವಧಿಯ ಯಾವುದೇ ಸೂಚನೆಯನ್ನು ಬಿಟ್ಟುಬಿಡಬಹುದು. ಸ್ವೀಕಾರಾರ್ಹತೆಗೆ ತಿದ್ದುಪಡಿಯು ವಿಧೇಯಕದ ವ್ಯಾಪ್ತಿಯಲ್ಲಿ ಇರತಕ್ಕದ್ದು, ಸದನದ ಮುಂಚಿನ ತೀರ್ಮಾನಕ್ಕೆ ಸುಸಂಗತವಾಗಿರತಕ್ಕದ್ದಲ್ಲ. ಕ್ಷುಲ್ಲಕ ಅಥವಾ ಅರ್ಥಹೀನ ಅಥವಾ ವಿಷಯಕ್ಕೆ ದೂರವಾಗಿರತಕ್ಕದ್ದಲ್ಲ.

**ವಿಧೇಯಕದ ಮೂರನೇ ಹಂತದ ಪರಿಚಯ:**

ವಿಧೇಯಕವನ್ನು ಖಂಡಾನುಖಂಡವಾಗಿ ಪರಿಶೀಲನೆ ಮಾಡುವಾಗ ಮತ್ತು ಅದರ ಎಲ್ಲಾ ಅನುಸೂಚಿಗಳನ್ನು ಮತ್ತು ಇತರ ಭಾಗಗಳನ್ನು ಪರಿಶೀಲಿಸಿ ಅಂಗೀಕರಿಸಿದಾಗ, ಪ್ರಭಾರದಲ್ಲಿರುವ ಸಚಿವರು ವಿಧೇಯಕವನ್ನು ಅಂಗೀಕೃತಗೊಳಿಸುವಂತೆ ಸೂಚಿಸಬಹುದು. ಒಮ್ಮೆ ಸೂಚನೆಯನ್ನು ಮಂಡಿಸಿದ ಮೇಲೆ

ಔಪಚಾರಿಕವಾದ ಮೌಖಿಕ ಅಥವಾ ನಿಷ್ಪರಿಣಾಮಕಾರಿಯಾದವುಗಳನ್ನು ಹೊರತುಪಡಿಸಿ ಯಾವುದೇ ತಿದ್ದುಪಡಿಯನ್ನು ಪರಿಗಣಿಸತಕ್ಕದ್ದಲ್ಲ. ಈ ಹಂತದಲ್ಲಿನ ಚರ್ಚೆಯು, ವಿಧೇಯಕವನ್ನು ಅದು ಇರುವಂತೆಯೇ ಅಂಗೀಕರಿಸುವುದು ಅಥವಾ ತಿರಸ್ಕರಿಸುವುದೇ ಆಗಿರತಕ್ಕದ್ದು. ಸಾಮಾನ್ಯ ವಿಧೇಯಕವನ್ನು ಅಂಗೀಕರಿಸುವಲ್ಲಿ, ಹಾಜರಿರುವ ಮತ್ತು ಮತ ಚಲಾಯಿಸುವ ಸದಸ್ಯರ ಸರಳ ಬಹುಮತ ಅವಶ್ಯಕವಾಗಿರುತ್ತದೆ. ಸಂವಿಧಾನವನ್ನು ತಿದ್ದುಪಡಿ ಮಾಡುವ ವಿಧೇಯಕಕ್ಕೆ ಸದನದ ಒಟ್ಟು ಸದಸ್ಯತ್ವದ ಬಹುಮತದ ಮತ್ತು ಹಾಜರಿರುವ ಮತ್ತು ಮತ ಚಲಾಯಿಸುವ ಸದಸ್ಯರ 2/3 ರಷ್ಟಕ್ಕಿಂತ ಕಡಿಮೆ ಇಲ್ಲದ ಬಹುಮತದ ಅಗತ್ಯವಿದೆ.

ವಿಧೇಯಕವು, ಎರಡನೇ ಮತ್ತು ಮೂರನೇ ಹಂತದ ಪರಿಚಯದಲ್ಲಿ ಯಾವ ನಮೂನೆಯಲ್ಲಿರತಕ್ಕದ್ದೆಂಬುದು ಈ ಮುಂದೆ ಕೊಡಲಾದ ನಿದರ್ಶನದಂತೆ ಇರತಕ್ಕದ್ದು:

***ಶಾಸನ ರಚನಾ ಕಲಾಪಗಳು:***

ಪರಿಶೀಲನೆಗಾಗಿ ಮತ್ತು ಅನುಮೋದನೆಗಾಗಿ ವಿಧೇಯಕ.

ಶ್ರೀ ........................ (ಹೆಸರು) .................... ವಿದೇಶಾಂಗ ಸಚಿವರು, 1967ರ ಪಾಸ್‌ಪೋರ್ಟ್ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕವನ್ನು ಪರಿಶೀಲನೆಗಾಗಿ ತೆಗೆದುಕೊಳ್ಳಲು ಮಂಡಿಸುತ್ತಾರೆ. ಹಾಗೂ ವಿಧೇಯಕವನ್ನು ಅಂಗೀಕರಿಸಲು ಮಂಡಿಸುತ್ತಾರೆ. *ಖಾಸಗಿ ಸದಸ್ಯರ ವಿಧೇಯಕಗಳು:* ಖಾಸಗಿ ಸದಸ್ಯರು ತಮ್ಮ ವಿಧೇಯಕಗಳ ಬಗ್ಗೆ ಅನುಸರಿಸಬೇಕಾದ ಸಾಮಾನ್ಯ ಕಾರ್ಯವಿಧಾನವು ಸರ್ಕಾರಿ ವಿಧೇಯಕಗಳಂತೆಯೇ ಇರುವುವು: ಇದಕ್ಕೆ ಹೊರತೆಂದರೆ;

(ಎ) ಸೂಚನೆಯ ಕಾಲಾವಧಿ ಒಂದು ತಿಂಗಳು

(ಬಿ) ಒಂದು ಅಧಿವೇಶನದಲ್ಲಿ ಯಾವೊಬ್ಬ ಸದಸ್ಯನು ನಾಲ್ಕು ವಿಧೇಯಕಗಳಿಗಿಂತ ಹೆಚ್ಚಿಗೆಯಾಗಿ ಸೂಚನೆ ನೀಡತಕ್ಕದ್ದಲ್ಲ.

(ಸಿ) ಮಂಡನೆಯ ನಂತರ ಪರಸ್ಪರ ಆದ್ಯತೆಯನ್ನು ಮತದಾನದ ಮೂಲಕ ನಿರ್ಧರಿಸಲಾಗುವುದು.

***9. ಪ್ರಸ್ತಾವಗಳು:***

ಸದನವು, ಯಾವುದೇ ವಿಷಯವನ್ನು, ಅದಕ್ಕಾಗಿ ಮಾಡಲಾದ ಪ್ರಸ್ತಾವದ ಹೊರತು ಪರಿಶೀಲಿಸತಕ್ಕದ್ದಲ್ಲ. ಸದನವು ಅದರ ಇಚ್ಛೆಯನ್ನು ಆದೇಶಗಳ ರೂಪದಲ್ಲಿ ಮತ್ತು ಅದರ ಅಭಿಪ್ರಾಯವನ್ನು ಗೊತ್ತುವಳಿಯ ರೂಪದಲ್ಲಿ ವ್ಯಕ್ತಪಡಿಸುತ್ತದೆ. ಆದರೆ ಅವೆರಡರ ಮೂಲವು ಪ್ರಸ್ತಾವದಲ್ಲಿರುತ್ತದೆ. ಪ್ರಸ್ತಾವವನ್ನು ಪರಿಶೀಲನೆಗಾಗಿ ಮತ್ತು ತೀರ್ಮಾನಕ್ಕಾಗಿ ಸದನಕ್ಕೆ ಒಪ್ಪಿಸಿದ ಪ್ರಸ್ತಾವನೆಯೆಂದು ವ್ಯಾಖ್ಯಾನಿಸಲಾಗಿದೆ. "ಪ್ರಸ್ತಾವವು ಸದನದ ಸದಸ್ಯನು, ಸದನದ ಮುಂದಿಟ್ಟ ಕೇವಲ ಅಭಿಪ್ರಾಯದ ಅಥವಾ ಇಚ್ಛೆಯ ಅಭಿವ್ಯಕ್ತಿಯಾಗಿದ್ದು, ಸದನವು ಅದನ್ನು ಅಂಗೀಕರಿಸಿದಾಗ, ಅದು ಸಮಗ್ರ ಸದನದ ಅಭಿಪ್ರಾಯ ಅಥವಾ ಇಚ್ಛೆಯಾಗುತ್ತದೆ". (ಇರಿಯೋ ಟೇಲರ್ – ಹೌಸ್ ಆಫ್ ಕಾಮನ್ಸ್, ಆಟ್‌ವರ್ಕ್ – ಎಂಬ ತನ್ನ ಪುಸ್ತಕದಲ್ಲಿ).

ಸದನದ ತೀರ್ಮಾನವು ಅಗತ್ಯವಿರುವ ವಿಷಯವನ್ನು, ಸದಸ್ಯನು ಮಾಡಿದ ಪ್ರಸ್ತಾವದ ಮೇಲೆ ಸಭಾಧ್ಯಕ್ಷರು ಮುಂದಿಟ್ಟ ಪ್ರಶ್ನೆಯ ಮೂಲಕ ತೀರ್ಮಾನಿಸಲಾಗುವುದು. ಪ್ರಸ್ತಾವದ ಮೇಲಿನ ಚರ್ಚೆಯು ಈ ಮುಂದಿನ ನಾಲ್ಕು ಹಂತಗಳನ್ನು ದಾಟಬೇಕಾಗುತ್ತದೆ.

(ಎ) ಪ್ರಸ್ತಾವವನ್ನು ಮಂಡಿಸುವುದು

(ಬಿ) ಸಭಾಧ್ಯಕ್ಷರು ಪ್ರಶ್ನೆಯನ್ನು ಪ್ರಸ್ತಾಪಿಸುವುದು

(ಸಿ) ಅನುಮತಿಸಬಹುದಾಗಿದ್ದಲ್ಲಿ ವಿಚಾರವಿನಿಮಯ ಅಥವಾ ಚರ್ಚೆ; ಮತ್ತು

(ಡಿ) ಸಭಾಧ್ಯಕ್ಷರು ಪ್ರಶ್ನೆಯನ್ನು ಮುಂದಿಟ್ಟ ನಂತರ, ತೀರ್ಮಾನಕ್ಕಾಗಿ ಮತದಾನ, ಪ್ರಶ್ನೆಯ ಮೇಲೆ ಹೌದು ಅಥವಾ ಇಲ್ಲ ಎಂಬ ಧ್ವನಿ ಮತ ಸಂಗ್ರಹಣೆಯನ್ನು ಸಭಾಧ್ಯಕ್ಷರು ಮಾಡಿದ ಮೇಲೆ ಸದಸ್ಯನು ಮಾತನಾಡತಕ್ಕದ್ದಲ್ಲ.

ಪ್ರಸ್ತಾವಗಳು, ಬೇರೆ ಬೇರೆ ವ್ಯಕ್ತಿಗಳು ಬೇರೆ ಬೇರೆ ಉದ್ದೇಶಗಳಿಗಾಗಿ ಮಂಡಿಸಲಾದ ಬೇರೆ ಬೇರೆ ರೀತಿಯ ಪ್ರಸ್ತಾವಗಳಾಗಿರಬಹುದು. ಅವುಗಳನ್ನು ಸರ್ಕಾರದ ಸಚಿವರು ಅಥವಾ ಖಾಸಗಿ ಸದಸ್ಯರು ಮಂಡಿಸಬಹುದು. ಸಾಮಾನ್ಯವಾಗಿ ಹೇಳುವುದಾದರೆ, ಸರ್ಕಾರದ ಪ್ರಸ್ತಾವಗಳು, ಸರ್ಕಾರದ ನೀತಿಯನ್ನು ಅಥವಾ ಕ್ರಮವನ್ನು ಸದನವು ಅನುಮೋದಿಸಬೇಕಾದ ಸಂದರ್ಭಗಳಿಗೆ ಸೀಮಿತವಾಗಿರುತ್ತವೆ. ಸರ್ಕಾರದ ವಿಧೇಯಕವು ಸಹ ಪ್ರಸ್ತಾವಗಳ ಸರಣಿಯಲ್ಲಿ ಮುಂದುವರಿಯಬೇಕಾಗಿರುತ್ತದೆ. ಇದಕ್ಕೆ ಪ್ರತಿಯಾಗಿ ಖಾಸಗಿ ಸದಸ್ಯರ ಪ್ರಸ್ತಾವಗಳು ಸಾಮಾನ್ಯವಾಗಿ ಸಂಬಂಧಪಟ್ಟ ಪ್ರಸ್ತಾವನೆಗಳು, ವಿಧೇಯಕಗಳು ಮತ್ತು ತೀರ್ಮಾನಗಳಿಗೆ ಸಂಬಂಧಿಸಿರುತ್ತವೆ.

***ಕೆಲವು ಪ್ರಮುಖ ಪ್ರಸ್ತಾವಗಳ ಉದಾಹರಣೆಗಳು:***

ಕೆಲವು ವಿಶಿಷ್ಟ ರೀತಿಯ ಪ್ರಸ್ತಾವಗಳಿರುತ್ತವೆ. ಅವುಗಳನ್ನು ಯುವ ಸಂಸತ್ತಿನ ಸ್ಪರ್ಧೆಗಳಲ್ಲಿ ಭಾಗವಹಿಸುವ ಶಾಲೆಗಳು ತಮ್ಮ ಕಲಾಪಗಳ ಪಟ್ಟಿಯಲ್ಲಿ ಸೇರಿಸಿದರೆ, ಅವುಗಳು ಚರ್ಚೆಗೆ ವೈವಿಧ್ಯತೆಯನ್ನು ನೀಡುತ್ತವೆ.

ಈ ಮುಂದಿನವು ಈ ರೀತಿಯ ಪ್ರಸ್ತಾವಗಳಿಗೆ, ಕೆಲವು ಉದಾಹರಣೆಗಳಾಗಿರುತ್ತವೆ.

(1) ನಿಲುವಳಿ ಸೂಚನೆಗಳು

(2) ಸಚಿವ ಸಂಪುಟದಲ್ಲಿ ಅವಿಶ್ವಾಸ ಸೂಚನೆಗಳು

(3) ಸಂಸತ್ತಿನ ಉಭಯ ಸದನಗಳ ಜಂಟಿ ಅಧಿವೇಶನದಲ್ಲಿ ರಾಷ್ಟ್ರಪತಿಯು ಸಂವಿಧಾನದ 87(1)ನೇ ಅನುಚ್ಛೇದದ ಮೇರೆಗೆ ಮಾಡಿದ ಭಾಷಣದ ಮೇಲಿನ ವಂದನಾ ಸೂಚನೆ.

(1) ನಿಲುವಳಿ ಸೂಚನೆಗಳು:

ಈ ರೀತಿಯ ಸೂಚನೆಗಳ ಬಗ್ಗೆ ಮೇಲಿನ 4 ರಲ್ಲಿ ಈಗಾಗಲೇ ಸುದೀರ್ಘವಾಗಿ ವಿವರಿಸಲಾಗಿದೆ.

(2) ಸಚಿವ ಸಂಪುಟದಲ್ಲಿ ಅವಿಶ್ವಾಸ ಸೂಚನೆಗಳು:

ಕೆಲವು ವೇಳೆ, ವಿರೋಧ ಪಕ್ಷದ ಸದಸ್ಯರು ಸಚಿವ ಸಂಪುಟದಲ್ಲಿನ ಅವಿಶ್ವಾಸ ಸೂಚನೆಯನ್ನು ಈ ಮುಂದಿನ ಪದಗಳಲ್ಲಿ ಮಂಡಿಸುತ್ತಾರೆ. "ಈ ಸದನವು ಸಚಿವ ಸಂಪುಟದಲ್ಲಿ ತನಗೆ ವಿಶ್ವಾಸವಿಲ್ಲದಿರುವುದನ್ನು ವ್ಯಕ್ತಪಡಿಸುತ್ತದೆ". ಇದು, ಸರ್ಕಾರದ ಸಂಪೂರ್ಣ ಕಾರ್ಯನೀತಿಯನ್ನು ಮತ್ತು ಕಾರ್ಯಪದ್ಧತಿಯನ್ನು ಟೀಕಿಸಲು ಸದಸ್ಯರಿಗೆ ವ್ಯಾಪಕ ಅವಕಾಶವನ್ನು ಒದಗಿಸುತ್ತದೆ. ಸದನದಲ್ಲಿ ಈ ಸೂಚನೆಯನ್ನು ಮಂಡಿಸುವುದಕ್ಕಾಗಿ, ಆ ದಿನದ ಉಪವೇಶನವು ಆರಂಭವಾಗುವುದಕ್ಕೆ ಮುಂಚೆ ಸದಸ್ಯರು ಪ್ರಧಾನ ಕಾರ್ಯದರ್ಶಿಗೆ ತನ್ನ ಪ್ರಸ್ತಾವದ ಬಗ್ಗೆ ಲಿಖಿತ ನೋಟೀಸನ್ನು ಕೊಡಬೇಕಾಗುತ್ತದೆ. ಸೂಚನೆಯು ಕ್ರಮಬದ್ಧವಾಗಿದೆ ಎಂದು ಸಭಾಧ್ಯಕ್ಷರು ಅಭಿಪ್ರಾಯಪಟ್ಟರೆ, ಸದನದ ಅನುಮತಿ ಪಡೆಯುವಂತೆ ಅವರು ಸದಸ್ಯನಿಗೆ ಆದೇಶಿಸುತ್ತಾರೆ. ಸದಸ್ಯ ಆಗ ಈ ಮುಂದಿನ ಪ್ರಸ್ತಾವವನ್ನು ಮಂಡಿಸುತ್ತಾನೆ. "ಅವಿಶ್ವಾಸ ಸೂಚನೆಯನ್ನು ಮಂಡಿಸಲು ನಾನು ಸದನದ ಅನುಮತಿಯನ್ನು ಕೋರುತ್ತೇನೆ". ಸಭಾಧ್ಯಕ್ಷರು ಸದನಕ್ಕೆ ಪ್ರಸ್ತಾವವನ್ನು ಓದಿಹೇಳುತ್ತಾರೆ. ಮತ್ತು ಅನುಮತಿ ನೀಡಲು ಪರವಾಗಿರುವ ಸದಸ್ಯರು ತಮ್ಮ ಸ್ಥಾನದಲ್ಲಿ ಎದ್ದು ನಿಲ್ಲುವಂತೆ ಕೋರುತ್ತಾರೆ. ಸದನದ ಒಟ್ಟು ಸದಸ್ಯರ ಶೇಕಡಾ ಹತ್ತಕ್ಕಿಂತ ಕಡಿಮೆ ಇಲ್ಲದಷ್ಟು ಸದಸ್ಯರು ಎದ್ದು ನಿಂತರೆ, ಸದನದಿಂದ ಅನುಮತಿ ನೀಡಲಾಗುವುದು. ಆದರೆ, ಶೇಕಡಾ ಹತ್ತಕ್ಕಿಂತ ಕಡಿಮೆ ಸದಸ್ಯರು ಎದ್ದು ನಿಂತ ಸಂದರ್ಭದಲ್ಲಿ ಸದನದಿಂದ ಅನುಮತಿ ನೀಡಲಾಗುವುದಿಲ್ಲ. ಅವಿಶ್ವಾಸ ಸೂಚನೆಯನ್ನು ಚರ್ಚೆಗಾಗಿ ತೆಗೆದುಕೊಳ್ಳಲಾಗುವುದಿಲ್ಲ.

ಆದರೆ, ಅವಿಶ್ವಾಸ ಸೂಚನೆಯನ್ನು ಮಂಡಿಸುವುದಕ್ಕಾಗಿ ಅನುಮತಿ ನೀಡಿದಲ್ಲಿ, ಅದನ್ನು ಚರ್ಚೆಗಾಗಿ ಯಾವ ಸಮಯದಲ್ಲಿ ತೆಗೆದುಕೊಳ್ಳಲಾಗುವುದೆಂದು ಸಭಾಧ್ಯಕ್ಷರು ಪ್ರಕಟಿಸುತ್ತಾರೆ. ಗೊತ್ತುಪಡಿಸಿದ ವೇಳೆಯಲ್ಲಿ ಸಭಾಧ್ಯಕ್ಷರು ಸದಸ್ಯನನ್ನು ಕರೆಯುತ್ತಾರೆ. ಅವನು ಸೂಚನೆಯನ್ನು ಈ ಮುಂದಿನ ಪದಗಳಲ್ಲಿ ಮಂಡಿಸುತ್ತಾನೆ.

"ಈ ಸದನವು ಸಚಿವ ಸಂಪುಟದಲ್ಲಿ ತನಗೆ ವಿಶ್ವಾಸವಿಲ್ಲದಿರುವುದನ್ನು ವ್ಯಕ್ತಪಡಿಸುತ್ತದೆ".

ಪ್ರಸ್ತಾವವನ್ನು ಮಂಡಿಸಿದ ನಂತರ, ಪ್ರಸ್ತಾವಿಸಿದ ಸದಸ್ಯನು ಚಿಕ್ಕ ಭಾಷಣವನ್ನು ಮಾಡುತ್ತಾನೆ. ಅದನ್ನು ಮುಂದುವರಿಸಿ, ವಿರೋಧಪಕ್ಷಕ್ಕೆ ಹಾಗೂ ಆಳುವ ಪಕ್ಷಕ್ಕೆ ಸೇರಿದ ಸದನದ ಇತರ ಸದಸ್ಯರು ಮಾತನಾಡುತ್ತಾರೆ. ಅವಿಶ್ವಾಸ ಸೂಚನೆಯ ಮೇಲಿನ ಚರ್ಚೆಯು ಯಾವುದೇ ನಿರ್ದಿಷ್ಟ ವಿಷಯಕ್ಕೆ ಸೀಮಿತವಾಗಿರುವುದಿಲ್ಲ. ಚರ್ಚೆಯ

ಸಮಯದಲ್ಲಿ ಯಾರೇ ಸದಸ್ಯನು ಯಾವುದೇ ವಿಷಯವನ್ನು ಪ್ರಸ್ತಾಪಿಸಬಹುದು ಅಥವಾ ಸರ್ಕಾರದ ಯಾವುದೇ ನೀತಿಯ ಅಥವಾ ಕ್ರಮದ ಬಗ್ಗೆ ಟೀಕಿಸಬಹುದು. ಆಳುವ ಪಕ್ಷದ ಹಾಗೂ ವಿರೋಧ ಪಕ್ಷಗಳ ಸದಸ್ಯರು ಚರ್ಚೆಯಲ್ಲಿ ಭಾಗವಹಿಸುತ್ತಾರೆ.

ಅವಿಶ್ವಾಸ ಸೂಚನೆಯ ಮೇಲೆ ಸದಸ್ಯರು ಮಾತನಾಡಿದ ನಂತರ ಪ್ರಧಾನ ಮಂತ್ರಿಗಳು ತನ್ನ ಸರ್ಕಾರದ ವಿರುದ್ಧ ಮಾಡಲಾದ ಆರೋಪಗಳಿಗೆ ಉತ್ತರ ನೀಡುತ್ತಾರೆ. ಆ ನಂತರ ಅವಿಶ್ವಾಸ ಸೂಚನೆಯನ್ನು ಮಂಡಿಸಿದವನಿಗೆ ಪ್ರತ್ಯುತ್ತರ ನೀಡಲು ಅವಕಾಶ ಕೊಡಲಾಗುತ್ತದೆ. ಸಭಾಧ್ಯಕ್ಷರು ಆಗ ಅವಿಶ್ವಾಸ ಸೂಚನೆಯನ್ನು ಸದನದ ಮುಂದೆ ಇಡುತ್ತಾರೆ ಮತ್ತು ಸದನದ ತೀರ್ಮಾನವನ್ನು ಧ್ವನಿ ಮತದ ಮೂಲಕ ಪಡೆಯುತ್ತಾರೆ.

(3) ರಾಷ್ಟ್ರಪತಿಯವರ ಭಾಷಣದ ಮೇಲೆ ವಂದನಾ ಸೂಚನೆ:

ಇದು, ಸಂಸತ್ತಿನ ಉಭಯ ಸದನಗಳ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಷ್ಟ್ರಪತಿಯವರು, ಸಂವಿಧಾನದ ಅನುಚ್ಛೇದ 87(1)ರ ಮೇರೆಗೆ ಮಾಡಿದ ಭಾಷಣಕ್ಕೆ ಕೃತಜ್ಞತೆ ಅರ್ಪಿಸುವ ಔಪಚಾರಿಕ ಪ್ರಸ್ತಾವವಾಗಿರುತ್ತದೆ. ಭಾಷಣದಲ್ಲಿ ಉಲ್ಲೇಖಿಸಲಾದ ವಿಷಯಗಳನ್ನು ಕುರಿತು ಚರ್ಚಿಸಲು ಇದು ಅವಕಾಶ ಒದಗಿಸುತ್ತದೆ. ಇದನ್ನು ಆಳುವ ಪಕ್ಷದ ಹಿರಿಯ ಸದಸ್ಯನು, ಈ ಮುಂದಿನ ರೂಪದಲ್ಲಿ ಮಂಡಿಸುತ್ತಾನೆ:

"ಈ ಮುಂದಿನಂತೆ ರಾಷ್ಟ್ರಪತಿಯವರಿಗೆ ವಂದನಾರ್ಪಣೆ ಮಾಡಬಹುದು.

ಈ ಅಧಿವೇಶನದಲ್ಲಿ ಸೇರಿರುವ ಯುವ ಸಂಸತ್ತಿನ ಸದಸ್ಯರು, ರಾಷ್ಟ್ರಪತಿಯವರು ಸಂಸತ್ತಿನ ಉಭಯ ಸದನಗಳ ಜಂಟಿ ಅಧಿವೇಶನವನ್ನು ಉದ್ದೇಶಿಸಿ ............. (ದಿನಾಂಕ) ................ ರಂದು ಮಾಡಿದ ಭಾಷಣಕ್ಕೆ ತುಂಬಾ ಕೃತಜ್ಞರಾಗಿರುತ್ತಾರೆ.'

ಆಳುವ ಪಕ್ಷದ ಇನ್ನೊಬ್ಬ ಸದಸ್ಯನು ಸೂಚನೆಯನ್ನು ಅನುಮೋದಿಸುತ್ತಾನೆ.

ಸಂವಿಧಾನದ 87(1)ನೇ ಅನುಚ್ಛೇದದ ಮೇರೆಗೆ ರಾಷ್ಟ್ರಪತಿಯವರು ಸದನದಲ್ಲಿ ಮಾಡಿದ ಭಾಷಣದಲ್ಲಿ ಉಲ್ಲೇಖಿಸಿದ ವಿಷಯಗಳ ಕುರಿತು ಚರ್ಚೆಗೆ ಸಮಯವನ್ನು ಸದನದ ನಾಯಕನೊಂದಿಗೆ ಸಮಾಲೋಚಿಸಿ ಸಭಾಧ್ಯಕ್ಷರು ನಿಗದಿಪಡಿಸುತ್ತಾನೆ. ಅಂಥ ದಿನ, ಭಾಷಣದಲ್ಲಿ ಉಲ್ಲೇಖಿಸಿದ ವಿಷಯಗಳನ್ನು ಒಬ್ಬ ಸದಸ್ಯನು ಮಂಡಿಸಿದ ಮತ್ತು ಮೇಲೆ ಹೇಳಿದಂತೆ ಇನ್ನೊಬ್ಬ ಸದಸ್ಯನು ಅನುಮೋದಿಸಿದ ವಂದನಾ ಸೂಚನೆಯ ಮೇಲೆ ಚರ್ಚಿಸಲು ಸದನಕ್ಕೆ ಸ್ವಾತಂತ್ರ್ಯವಿರುತ್ತದೆ.

***10. ನಿರ್ಣಯಗಳು:***

ನಿರ್ಣಯಗಳು ಅಭಿಪ್ರಾಯದ ಅಥವಾ ಶಿಫಾರಸ್ಸಿನ ಸ್ವರೂಪದಲ್ಲಿ ಇರಬಹುದು ಅಥವಾ ಸರ್ಕಾರದ ಕ್ರಮವನ್ನು ಅಥವಾ ನೀತಿಯನ್ನು ಸದನವು ಅನುಮೋದಿಸುವುದನ್ನು ಅಥವಾ ಅನುಮೋದಿಸದಿರುವುದನ್ನು ಅಭಿಲೇಖಿಸುವ ಸ್ವರೂಪದಲ್ಲಿ ಇರಬಹುದು ಅಥವಾ ಸರ್ಕಾರದ ಪರಿಶೀಲನೆಗಾಗಿ ಒಂದು ವಿಷಯದ ಅಥವಾ ಪರಿಸ್ಥಿತಿಯ ಬಗ್ಗೆ ಸಂದೇಶವನ್ನು ತಿಳಿಸುವ ಅಥವಾ ತಿದ್ದುಪಡಿ ಮಾಡುವ, ಒತ್ತಾಯಿಸುವ ಅಥವಾ ಕೋರುವ ಅಥವಾ ಗಮನ ಸೆಳೆಯುವ ರೂಪದಲ್ಲಿರಬಹುದು. ತದನುಸಾರವಾಗಿ ಒಂದು ನಿರ್ಣಯವು ಅಂಗೀಕಾರಾರ್ಹವಾಗಿರಬೇಕಾದರೆ, ಅದು ಈ ಮುಂದಿನ ಷರತ್ತುಗಳನ್ನು ಪೂರೈಸತಕ್ಕದ್ದು:

(i) ಅದನ್ನು ಸ್ಪಷ್ಟವಾಗಿ ಮತ್ತು ನಿಖರವಾಗಿ ವ್ಯಕ್ತಪಡಿಸಿರಬೇಕು.

(ii) ಅದು ಒಂದು ನಿರ್ದಿಷ್ಟ ವಿಷಯವನ್ನು ಗಣನಾರ್ಹವಾಗಿ ಪ್ರತಿಪಾದಿಸಬೇಕು.

(iii) ಅದು ವಾದಗಳನ್ನು, ಊಹೆಗಳನ್ನು, ವ್ಯಂಗ್ಯವಾದ ಅಭಿವ್ಯಕ್ತಿಗಳನ್ನು, ಆರೋಪಣೆಗಳನ್ನು ಅಥವಾ ಮಾನಹಾನಿಗೆ ಎಡೆಕೊಡುವ ಹೇಳಿಕೆಗಳನ್ನು ಒಳಗೊಂಡಿರಬಾರದು.

(iv) ಅದು ವ್ಯಕ್ತಿಗಳ ಸರ್ಕಾರಿ ಅಥವಾ ಸಾರ್ವಜನಿಕ ಸ್ಥಾನದ ಹೊರತು, ಅವರ ಚಾರಿತ್ರ್ಯ ಅಥವಾ ನಡತೆಗೆ ಉಲ್ಲೇಖವಾಗಿರಕೂಡದು.

(v) ಅದು ಭಾರತದ ಯಾವುದೇ ಭಾಗದಲ್ಲಿ ಅಧಿಕಾರ ವ್ಯಾಪ್ತಿಯಿರುವ ಯಾವುದೇ ನ್ಯಾಯಾಲಯದಲ್ಲಿ ನ್ಯಾಯ ನಿರ್ಣಯದಲ್ಲಿರುವ ವಿಷಯಕ್ಕೆ ಸಂಬಂಧಿಸಿರ ಕೂಡದು.

ಕಲಾಪಗಳ ಪಟ್ಟಿಯಲ್ಲಿ ನಿರ್ಣಯವು ಯಾರ ಹೆಸರಿನಲ್ಲಿದೆಯೋ ಆ ಸದಸ್ಯನು ಅದನ್ನು ಹಿಂದಕ್ಕೆ ತೆಗೆದುಕೊಳ್ಳಲು ಇಚ್ಛಿಸಿದ ಹೊರತು ಅವನನ್ನು ಕರೆದಾಗ ನಿರ್ಣಯವನ್ನು ಮಂಡಿಸತಕ್ಕದ್ದು ಮತ್ತು ಅದು ವ್ಯವಹಾರ ಪಟ್ಟಿಯಲ್ಲಿ ಪ್ರಕಟವಾಗತಕ್ಕದ್ದು.

ನಿರ್ಣಯವನ್ನು ಮಂಡಿಸಿದ ನಂತರ ಯಾರೇ ಸದಸ್ಯನು, ನಿರ್ಣಯಗಳಿಗೆ ಸಂಬಂಧಿಸಿದ ನಿಯಮಗಳಿಗೆ ಒಳಪಟ್ಟು ನಿರ್ಣಯಕ್ಕೆ ತಿದ್ದುಪಡಿಯನ್ನು ಮಂಡಿಸಬಹುದು.

ಸದಸ್ಯನು ನಿರ್ಣಯವನ್ನು ಮಂಡಿಸಿದ ನಂತರ, ಇತರ ಸದಸ್ಯರು ವಿರೋಧ ಪಕ್ಷದಿಂದ ಹಾಗೂ ಆಳುವ ಪಕ್ಷದಿಂದ, ಸಭಾಧ್ಯಕ್ಷರು ಅವರನ್ನು ನಿರ್ಣಯದ ವಿಷಯದ ಮೇಲೆ ಮಾತನಾಡಲು ಕರೆದಾಗ, ಒಬ್ಬರ ನಂತರ ಒಬ್ಬರು ಮಾತನಾಡತಕ್ಕದ್ದು. ಆನಂತರ ಸಂಬಂಧಿಸಿದ ಸಚಿವರು ಚರ್ಚೆಯಲ್ಲಿ ಭಾಗವಹಿಸುವರು ಕೊನೆಯಲ್ಲಿ ನಿರ್ಣಯವನ್ನು ಮಂಡಿಸಿದವನು ಉತ್ತರಿಸುತ್ತಾನೆ.

ನಿರ್ಣಯವನ್ನು ಮಂಡಿಸಿದವನು ತಾನು ಉತ್ತರಿಸುವ ಅವಧಿಯಲ್ಲಿ ನಿರ್ಣಯದ ಮೇಲೆ ತೀರ್ಮಾನಕ್ಕಾಗಿ ಒತ್ತಾಯಿಸಿದ ಸಂದರ್ಭದಲ್ಲಿ ಸಭಾಧ್ಯಕ್ಷರು ಸದನದ ತೀರ್ಮಾನವನ್ನು ಧ್ವನಿ ಮತದ ಮೂಲಕ ಪಡೆಯುವರು.

ಕಾರ್ಯಾಂಗಕ್ಕೆ ಪ್ರತ್ಯಾಯೋಜಿಸಿದ ಅಧಿಕಾರಗಳ ಮೇರೆಗೆ ಮಾಡಲಾದ ಯಾವುದೇ ನಿಯಮಗಳ ಅಥವಾ ಅಧಿಸೂಚನೆಗಳನ್ನು ಒಂದು ನಿರ್ದಿಷ್ಟ ಅವಧಿಯೊಳಗೆ ಸಂಸತ್ತಿನ ನಿರ್ಣಯದ ಮೂಲಕ ಅನುಮೋದಿಸಬೇಕೆಂದು ಕೆಲವು ಶಾಸನಗಳು ಉಪಬಂಧಿಸುತ್ತವೆ ಮತ್ತು ಅಂಥ ನಿಯಮಗಳು ನಿರ್ಣಯಗಳಲ್ಲಿ ನಿರ್ದೇಶಿಸಿದಂಥ ಮಾರ್ಪಾಟಾದ ರೀತಿಯಲ್ಲಿ ಪರಿಣಾಮಕಾರಿಯಾಗಿರುತ್ತವೆ ಅಥವಾ ಪರಿಣಾಮಕಾರಿಯಾಗಿರುವುದು ನಿಂತು ಹೋಗುತ್ತವೆ.

ಸಾಮಾನ್ಯವಾಗಿ ಈ ಮುಂದಿನ ಮಾದರಿಯ ನಿರ್ಣಯಗಳನ್ನು ಸಂಸತ್ತಿನಲ್ಲಿ ಮಂಡಿಸಲಾಗುತ್ತದೆ ಮತ್ತು ಅಂಗೀಕರಿಸಲಾಗುತ್ತದೆ.

1. ಅಧಿಸೂಚನೆಯ ಅನುಮೋದನೆಗಾಗಿ ಕೋರುವ ನಿರ್ಣಯ.
2. ತುರ್ತು ಪರಿಸ್ಥಿತಿಯನ್ನು ಉದ್ಘೋಷಿಸುವುದಕ್ಕೆ ಅನುಮೋದನೆ ಕೋರುವ ನಿರ್ಣಯ.
3. ಆಕ್ರಮಣಕಾರರನ್ನು ಹೊರತಳ್ಳಲು ಭಾರತೀಯರ ದೃಢ ಸಂಕಲ್ಪಕ್ಕೆ ಸಂಬಂಧಪಟ್ಟಂತೆ ನಿರ್ಣಯ.
4. "ರಾಜ್ಯ ಪಟ್ಟಿ"ಯ ಅಡಿಯಲ್ಲಿ ಬರುವ ವಿಷಯಗಳಿಗೆ ಸಂಬಂಧಪಟ್ಟಂತೆ ಕಾನೂನುಗಳನ್ನು ಮಾಡುವ ಸಂಸತ್ತಿನ ಅಧಿಕಾರಕ್ಕೆ ಸಂಬಂಧಿಸಿದ ನಿರ್ಣಯ.
5. ಕೆಲವು ಹೊಸ ಅಖಿಲ ಭಾರತ ಸೇವೆಗಳ ಸೃಜನೆಗೆ ಸಂಬಂಧಪಟ್ಟ ನಿರ್ಣಯ.
6. ಪಂಚವಾರ್ಷಿಕ ಯೋಜನೆಗೆ ಅನುಮೋದನೆ ಕೋರುವ ನಿರ್ಣಯ.
7. ರಾಜ್ಯದ ಎಲ್ಲಾ ಪ್ರಕಾರ್ಯಗಳನ್ನು ಸ್ವತಃ ತಾವೇ ಹೊಂದಲು 356ನೇ ಅನುಚ್ಛೇದದ ಅಡಿ ರಾಷ್ಟ್ರಪತಿಯವರು ಹೊರಡಿಸುವ ಘೋಷಣೆಗೆ ಸಂಬಂಧಪಟ್ಟ ನಿರ್ಣಯ.
8. ಈ ಮುಂಚಿನ ಉದ್ಘೋಷಣೆಯನ್ನು ವ್ಯತ್ಯಾಸಗೊಳಿಸುವ ಒಂದು ಉದ್ಘೋಷಣೆಯ ಅನುಮೋದನೆಗೆ ಸಂಬಂಧಪಟ್ಟ ನಿರ್ಣಯ.

***ನಿಯಮ 193ರ ಅಡಿ ಅಲ್ಪಾವಧಿ ಚರ್ಚೆ:***

ಲೋಕಸಭಾ ನಿಯಮಗಳ 193ನೇ ನಿಯಮದಡಿ ಅಲ್ಪಾವಧಿ ಚರ್ಚೆಯನ್ನು ನಡೆಸಲು ಸಂಬಂಧಪಟ್ಟ ನಿಯಮದಂತೆ, ತುರ್ತು ಸಾರ್ವಜನಿಕ ಪ್ರಾಮುಖ್ಯತೆಯ ವಿಷಯದ ಮೇಲೆ ಚರ್ಚೆ ಮಾಡಲು ಇಚ್ಛಿಸುವ ಯಾವೊಬ್ಬ ಸದಸ್ಯನು, ಆ ವಿಷಯದ ಬಗ್ಗೆ ಸ್ಪಷ್ಟ ಮತ್ತು ಖಚಿತವಾಗಿ ನಿರ್ದಿಷ್ಟಪಡಿಸಿ ಲಿಖಿತದಲ್ಲಿ ನೋಟೀಸನ್ನು ಪ್ರಧಾನ ಕಾರ್ಯದರ್ಶಿಯವರಿಗೆ ನೀಡಬಹುದು. ಕನಿಷ್ಟ ಇಬ್ಬರು ಇತರ ಸದಸ್ಯರ ಸಹಿ ಮಾಡಿರುವ ಅಂಥ

ನೋಟೀಸನ್ನು ಅದರೊಂದಿಗೆ ಪ್ರಶ್ನಿತ ವಿಷಯದ ಮೇಲೆ ಚರ್ಚೆ ನಡೆಸಲು ಕಾರಣಗಳನ್ನು ತೋರಿಸುವ ವಿವರವಾದ ಟಿಪ್ಪಣಿಯೊಂದನ್ನು ಒಳಗೊಂಡಿರತಕ್ಕದ್ದು.

ಸಭಾಧ್ಯಕ್ಷರು, ಕಲಾಪಗಳ ಪಟ್ಟಿಯಲ್ಲಿ ಈ ಬಾಬಿನ ಅಡಿಯಲ್ಲಿರುವ ಮೊದಲ ಸದಸ್ಯನ ಹೆಸರನ್ನು ಕರೆದಾಗ, ಅವನು ಚರ್ಚೆಯ ವಸ್ತು ವಿಷಯದ ಮೇಲೆ ಒಂದು ಸಂಕ್ಷಿಪ್ತ ಭಾಷಣವನ್ನು ಮಾಡತಕ್ಕದ್ದು. ನಂತರ ಈ ಬಾಬಿನ ಅಡಿಯಲ್ಲಿ ಯಾರ ಹೆಸರುಗಳನ್ನು ಸೂಚಿಸಲಾಗಿದೆಯೋ ಅವರನ್ನು ಅಥವಾ ಇತರ ಸದಸ್ಯರನ್ನು ಮಾತನಾಡುವಂತೆ ಸಭಾಧ್ಯಕ್ಷರು ಕರೆಯಬಹುದು. ಆಗ ಅವರು, ಸಂಕ್ಷಿಪ್ತವಾಗಿ ಮಾತನಾಡತಕ್ಕದ್ದು. ಕೊನೆಯದಾಗಿ ಸಂಬಂಧಪಟ್ಟ ಸಚಿವರು ಚರ್ಚೆಗೆ ಉತ್ತರಿಸುತ್ತಾರೆ.

ಪ್ರಸ್ತಾವವನ್ನು ಮಂಡಿಸಿದವನಿಗೆ ಉತ್ತರಿಸಲು ಅಧಿಕಾರವಿರುವುದಿಲ್ಲ. ಇದು ವಿದ್ಯುಕ್ತ ಪ್ರಸ್ತಾವವಾಗಿ ಇರುವುದಿಲ್ಲ. ಹಾಗೂ ಅದನ್ನು ಸದನದ ಮತಕ್ಕೆ ಹಾಕಲಾಗುವುದಿಲ್ಲ.

ಕಲಾಪಗಳ ಪಟ್ಟಿಯಲ್ಲಿ ಅದನ್ನು ಸೇರಿಸುವ ಕ್ರಮವನ್ನು ಈ ಮುಂದೆ ಸೂಚಿಸಲಾಗಿದೆ:-

193ನೇ ನಿಯಮದ ಅಡಿ ಅಲ್ಪಾವಧಿ ಚರ್ಚೆ ಅಥವಾ 193ನೇ ನಿಯಮದ ಅಡಿ ತುರ್ತು ಸಾರ್ವಜನಿಕ ಪ್ರಾಮುಖ್ಯತೆಯ ವಿಷಯಗಳ ಮೇಲೆ ಚರ್ಚೆ.

1. ಶ್ರೀ ........................

2. ಶ್ರೀ ........................

3. ಶ್ರೀ ........................

..................... ಈ ವಿಷಯದ ಮೇಲೆ ಚರ್ಚೆಯನ್ನು ನಡೆಸುವುದು.

ಮೇಲೆ ಹೇಳಿದ ನಿಯಮದ ಅಡಿ ಲೋಕಸಭೆಯಲ್ಲಿ ಚರ್ಚೆಯನ್ನು ನಡೆಸಲಾಗಿರುವ ಕೆಲವು ವಿಷಯಗಳನ್ನು ಈ ಮುಂದೆ ಸೂಚಿಸಲಾಗಿದೆ:-

1. ಬಜೆಟ್ ಮಂಡನೆಗೆ ಮೊದಲು ಪೆಟ್ರೋಲಿಯಂ, ಕಲ್ಲಿದ್ದಲು, ಅಂಚೆ ವಸ್ತುಗಳ ಆಡಳಿತ ಬೆಲೆಯನ್ನು ಹೆಚ್ಚಿಸಿರುವುದು;
2. ಅತ್ಯಾವಶ್ಯಕ ವಸ್ತುಗಳ ಬೆಲೆಯಲ್ಲಿ ಏರಿಕೆ ಅಥವಾ ಬೆಲೆ ಹೆಚ್ಚಳ;
3. ದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿ;
4. ದೇಶದಲ್ಲಿ ಮಹಿಳೆಯರ ಮೇಲೆ ನಡೆಸಲಾಗುತ್ತಿರುವ ದೌರ್ಜನ್ಯಗಳ ಪ್ರಕರಣದಲ್ಲಿನ ಹೆಚ್ಚಳ;
5. 23.3.1988 ರಂದು ಜಬ್ಬಲ್‌ಪುರದ ಕೇಂದ್ರ ಆಯುಧ ಡಿಪೋದಲ್ಲಿ ಉಂಟಾದ ಬೆಂಕಿ ಅಪಘಾತದ ಕಾರಣದಿಂದಾಗಿ ಉಂಟಾದ ಅಪಾರ ಪ್ರಮಾಣದ ಮದ್ದುಗುಂಡುಗಳ ಹಾನಿಯ ಬಗ್ಗೆ ಮತ್ತು ಅಂಥ ತಪ್ಪುಗಳು ಪುನಃ ನಡೆಯದಂತೆ ತಡೆಯಲು ಸರ್ಕಾರವು ಕೈಗೊಂಡ ಕ್ರಮಗಳ ಬಗ್ಗೆ.
6. ಪಶ್ಚಿಮ ದಂಡೆ ಮತ್ತು ಗಾಜಾ ಸ್ಟ್ರಿಪ್‌ಗಳ ಆಕ್ರಮಿತ ಅರಬ್ ಪ್ರದೇಶಗಳಲ್ಲಿ ಇಸ್‌ರೇಲ್ ಸೈನ್ಯದಿಂದ ಪ್ಯಾಲೆಸ್ಟೈನ್ ಜನತೆಯ ಅಮಾನುಷ ದಮನ.

***ಯುವ ಸಂಸತ್ ಸ್ಪರ್ಧೆಗಳಲ್ಲಿ ಭಾಗವಹಿಸುವವರು ಮಾಡಬೇಕಾದ ಮತ್ತು ಮಾಡಬಾರದ ಕಾರ್ಯಗಳು***

1. ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗವಹಿಸುವ ಸಂಸ್ಥೆಗಳು ಮತ್ತು ವಿದ್ಯಾರ್ಥಿಗಳು, ಈ ಯೋಜನೆಯು ಒಂದು ಅಪೂರ್ವ ಯೋಜನೆಯೆಂಬುದನ್ನು ತಿಳಿಯತಕ್ಕದ್ದು. ಸಂಸತ್ ಸದಸ್ಯರಿಗೆ ಈ ಯುವ ಸಂಸತ್ತು ಭಾವೀ ಪ್ರಾಥಮಿಕ ಹಂತದ ಶಿಕ್ಷಣ ನೀಡುವ ಗುರಿ ಹೊಂದಿದೆ. ಇದನ್ನು ಸರಿಯಾಗಿ ಕಾರ್ಯರೂಪಕ್ಕೆ ತಂದರೆ ಮತ್ತು ಇದರ ಸಂಘಟಕರು ಕರ್ತವ್ಯ ಮತ್ತು ಸಮರ್ಪಣಾ ಮನೋಭಾವವನ್ನು ಹೊಂದಿದ್ದರೆ, ಇದು ನಮ್ಮ ರಾಷ್ಟ್ರೀಯ ಚಾರಿತ್ರ್ಯ ಮತ್ತು ದೃಷ್ಟಿಕೋನದ ಸರ್ವತೋಮುಖ ಬೆಳವಣಿಗೆ ಸಾಧಿಸುವಲ್ಲಿ ಅತ್ಯಂತ ಪರಿಣಾಮಕಾರಿ ಸಾಧನವಾಗಬಹುದು. ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಂಸ್ಥೆಗಳು ಮುಂದೆ ಬರುವಾಗ ಈ ಅಂಶವನ್ನು ಯಾವಾಗಲೂ ಗಮನದಲ್ಲಿಟ್ಟಿರಬೇಕು.

2. ಸಮಾಜದ ಒಟ್ಟಾರೆ ಒಳಿತಿಗಾಗಿ ಏನು ಮಾಡಬೇಕು ಎನ್ನುವ ಒಂದು ಸ್ವಯಂಪ್ರೇರಿತ ಒಪ್ಪಂದಕ್ಕೆ ಬರುವ ಪ್ರಯತ್ನದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಚರ್ಚೆಗೂ ಮತ್ತು ವಿಚಾರವಿನಿಮಯದ ಮೂಲಕ ಭಾಗವಹಿಸುವ ಅವಕಾಶವನ್ನು ಪ್ರಜಾಪ್ರಭುತ್ವವು ರಾಜಕೀಯ ಪದ್ಧತಿಯ ಮೂಲಕ ಒದಗಿಸುತ್ತದೆ ಎಂಬುದನ್ನು ಮರೆಯಕೂಡದು.

ಇದು ಸಾಮಾಜಿಕ ಕಾರ್ಯ ನೀತಿಯ ಬಗ್ಗೆ ಬೀದಿಗಳಲ್ಲಿ ತೀರ್ಮಾನ ತೆಗೆದುಕೊಳ್ಳುವ ಪದ್ಧತಿಗೆ ಅವಕಾಶಕೊಡುವುದಿಲ್ಲ. ಏಕೆಂದರೆ, ಇವುಗಳು ಜನಜಂಗುಳಿ ಪ್ರಭುತ್ವದ ಮಾರ್ಗಗಳೇ ಹೊರತು ಪ್ರಜಾಪ್ರಭುತ್ವದವುಗಳಲ್ಲ. ಆದ್ದರಿಂದ ಯುವ ಸಂಸತ್ತಿನ ಯೋಜನೆಯು, ಮಕ್ಕಳು ತಮ್ಮ ಕಾರ್ಯಕ್ಷಮತೆಯನ್ನು ಆರೋಗ್ಯಕರ ಮತ್ತು ರಚನಾತ್ಮಕ ಚಟುವಟಿಕೆಗಳಿಗಾಗಿ ಕೇಂದ್ರೀಕರಿಸುವ ಆಂದೋಲನವನ್ನು ಪ್ರಾರಂಭಿಸಲು ಸಹಾಯವಾಗುತ್ತದೆ. ಇದರಿಂದ ಅವರು ನಾಳಿನ ಉಪಯುಕ್ತ ನಾಗರಿಕರಾಗಬಹುದು.

3. ಈ ಸಂಸತ್ತುಗಳಲ್ಲಿ ಸಾಧ್ಯವಾದಷ್ಟು ವಿವಾದಾತ್ಮಕವಲ್ಲದ ವಿಷಯಗಳನ್ನು ಚರ್ಚೆಗಾಗಿ ಆಯ್ಕೆ ಮಾಡಬೇಕು. ಅವು ಶಾಲೆಗಳು ಬಹುಮಟ್ಟಿಗೆ ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವುಗಳ ದಿನನಿತ್ಯದ ಸಮಸ್ಯೆಗಳಾಗಿರತಕ್ಕದ್ದು. ವಿಷಯವು ಕಲ್ಯಾಣ ಚಟುವಟಿಕೆಗಳು, ದೇಶದ ರಕ್ಷಣೆ, ಸಾಮಾಜಿಕ ನ್ಯಾಯ ಮತ್ತು ಸಾಮಾಜಿಕ ಸುಧಾರಣೆ, ಆರ್ಥಿಕ ಅಭಿವೃದ್ಧಿ, ಮತೀಯ ಸೌಹಾರ್ದತೆ, ವಿದ್ಯಾರ್ಥಿಗಳ ಶಿಸ್ತು ಮತ್ತು ಆರೋಗ್ಯ ಇವುಗಳಿಗೆ ಸಂಬಂಧಿಸಿದ್ದಕ್ಕಾಗಿರಬೇಕು.

4. ಯುವ ಸಂಸತ್ತಿನ ಕಲಾಪಗಳ ಪಟ್ಟಿಯ ಎರಡು ಅತ್ಯಂತ ಪ್ರಮುಖ ಭಾಗಗಳೆಂದರೆ, ಪ್ರಶ್ನೆಗಳು ಮತ್ತು ಚರ್ಚೆ ಅಥವಾ ವಿಚಾರವಿನಿಮಯ. ಪ್ರಶ್ನೆ ವೇಳೆಯಲ್ಲಿ ನ್ಯಾಯಾಧೀಶರು ಕೇಳುವ ಪ್ರಶ್ನೆಗಳ ಗುಣಮಟ್ಟ ಮತ್ತು ಸಚಿವರು ನೀಡುವ ಉತ್ತರಗಳ ಗುಣಮಟ್ಟ ಇವುಗಳಿಂದ ಪ್ರಭಾವಿತರಾಗುವ ಸಂಭವವಿದೆ. ಚರ್ಚೆ ಅಥವಾ ವಿಚಾರ ವಿನಿಮಯದ ಸಂದರ್ಭದಲ್ಲಿ ಅವರು ವಿಶೇಷವಾಗಿ ಚರ್ಚೆಯ ಗುಣಮಟ್ಟ ಮತ್ತು ಅಭಿವ್ಯಕ್ತಿಯ ಗುಣಲಕ್ಷಣ – ಇವುಗಳನ್ನು ಗಮನಿಸುತ್ತಾರೆ.

5. ಭಾಗವಹಿಸುವವರು ದೇಶದಲ್ಲಿ ಈಗಿರುವ ರಾಜಕೀಯ ಪಕ್ಷಗಳ ಮತ್ತು ರಾಜಕೀಯ ವ್ಯಕ್ತಿಗಳ ಹೆಸರುಗಳನ್ನು ಹೇಳುವುದನ್ನು ಕಟ್ಟುನಿಟ್ಟಾಗಿ ಬಿಡಬೇಕು. ಅವರು ತಮ್ಮ ಪಕ್ಷಗಳಿಗೆ ಮತ್ತು ವ್ಯಕ್ತಿಗಳಿಗೆ ಕಾಲ್ಪನಿಕ ಅಥವಾ ಊಹಾತ್ಮಕ ಹೆಸರುಗಳನ್ನು ಕೊಡಬೇಕು. ಅವರು ಯಾವುದೇ ರಾಜಕೀಯ ಪಕ್ಷಕ್ಕೆ ಅಥವಾ ತತ್ವಕ್ಕೆ ತಮ್ಮ ಒಲವು ಅಥವಾ ಪಕ್ಷಪಾತ ಇದೆ ಎಂಬ ಯಾವುದೇ ಭಾವನೆಯನ್ನುಂಟು ಮಾಡತಕ್ಕದ್ದಲ್ಲ.

6. ಭಾಗವಹಿಸುವ ಸಂಸ್ಥೆಗಳ ಹಿತದೃಷ್ಟಿಯಿಂದ ಅವುಗಳು ತಮ್ಮ ಸ್ವಂತದ "ಶಾಶ್ವತ ಸಂಸತ್ತುಗಳನ್ನು" ಹೊಂದಿರುವುದು ಒಳ್ಳೆಯದು, ಅವು "ಚರ್ಚಾಕೂಟವು" ಸಂಘಗಳಾಗಿ ಕಾರ್ಯನಿರ್ವಹಿಸಲು ಅಥವಾ ತಮ್ಮ ವಿದ್ಯಾರ್ಥಿಗಳಲ್ಲಿನ ಚರ್ಚಾ ಪ್ರತಿಭೆಯನ್ನು ಬಳಸಲು ನೆರವಾಗುತ್ತವೆ. ಭಾಗವಹಿಸುವುದಕ್ಕಾಗಿ ಹೆಸರುಗಳನ್ನು ಆಯ್ಕೆ ಮಾಡುವ ಸಮಯದಲ್ಲಿ ಅವರು ಈ "ಸಂಸದೀಯರ" ಪ್ರತಿಭೆಯನ್ನು ಗುರುತಿಸಬಹುದು.

7. ಭಾಗವಹಿಸುವವರು, ಅಧ್ಯಕ್ಷ ಪೀಠಕ್ಕೆ ಅತ್ಯಂತ ಗೌರವ ತೋರಿಸತಕ್ಕದ್ದು. ಅವರು ಅಧ್ಯಕ್ಷ ಪೀಠದ ತೀರ್ಮಾನಕ್ಕೆ ಬದ್ಧರಾಗಿರತಕ್ಕದ್ದು. ಮತ್ತು ಅವರ ನಿಷ್ಪಕ್ಷಪಾತ ಮನೋಭಾವದಲ್ಲಿ ಮತ್ತು ತೀರ್ಪಿನಲ್ಲಿ ವಿಶ್ವಾಸ ಇಟ್ಟಿರತಕ್ಕದ್ದು.

8. ಪ್ರತಿಯೊಬ್ಬ ಸದಸ್ಯನು, ಸದನಕ್ಕೆ ಅದರ ಉಪವೇಶನಕ್ಕಾಗಿ ಬರುವಾಗ ಅಧ್ಯಕ್ಷ ಪೀಠಕ್ಕೆ ಬಾಗಿ ನಮಸ್ಕರಿಸತಕ್ಕದ್ದು ಮತ್ತು ಸದನದಿಂದ ಹೋಗುವಾಗ ಅದರಂತೆಯೇ ಬಾಗಿ ವಂದಿಸತಕ್ಕದ್ದು.

9. ಸದಸ್ಯರು ಸದನದಲ್ಲಿರುವಾಗ ಪ್ರಕ್ರಿಯಾ ನಿಯಮಗಳ ಅಥವಾ ತೀರ್ಮಾನಗಳು ಅಥವಾ ಪೂರ್ವನಿದರ್ಶನಗಳು ಅಥವಾ ಅಂಗೀಕೃತವಾದ ಅಥವಾ ಸದನದ ಸಂಪ್ರದಾಯಗಳು ಅಥವಾ ಆಚರಣೆಗಳು ಸುಸ್ಥಾಪಿತವಾದ ಇವುಗಳು ಅನುಮತಿಸದಿರುವ ಯಾವುದನ್ನೂ ಹೇಳಕೂಡದು ಮತ್ತು ಮಾಡಕೂಡದು.

10. ನಮ್ಮ ದೇಶವು ವಿದೇಶದ ಮಿತ್ರ ಸರ್ಕಾರಗಳೊಂದಿಗೆ ಹೊಂದಿರುವ ಸಂಬಂಧಗಳಿಗೆ ಬಾಧಕವಾಗುವಂಥ ಅಥವಾ ದೇಶಕ್ಕೆ ಮತ್ತು ಅದರ ಇಂದಿನ ಸರ್ಕಾರಕ್ಕೆ ಬಿಕ್ಕಟ್ಟನ್ನುಂಟು ಮಾಡುವಂಥ ಯಾವುದೇ ಸೂಕ್ಷ್ಮವಾದ ಕಾರ್ಯ ನೀತಿ ವಿಚಾರಗಳ ಬಗ್ಗೆ ಚರ್ಚೆ ಮಾಡಬಾರದು.

11. ಸದನವು ಉಪವೇಶನದಲ್ಲಿರುವಾಗ, ಸದಸ್ಯನು ಸಭಾಂಗಣದಲ್ಲಿ ಅಡ್ಡ ಹಾಯತಕ್ಕದ್ದಲ್ಲ, ಅಂದರೆ, ಸಭಾಧ್ಯಕ್ಷರು, ಸಭಾಪತಿಯವರು ಮತ್ತು ಯಾರೇ ಮಾತಾಡುತ್ತಿರುವ ಸದಸ್ಯನ ನಡುವೆ ಹಾದು ಹೋಗತಕ್ಕದ್ದಲ್ಲ. ಈ ನಿಯಮದ ಉಲ್ಲಂಘನೆಯನ್ನು ಸಂಸತ್ತಿನ ಶಿಷ್ಟಾಚಾರದ ಉಲ್ಲಂಘನೆ ಎಂದು ಪರಿಗಣಿಸಲಾಗುವುದು.

12. ಸದಸ್ಯರು ಅಧ್ಯಕ್ಷ ಪೀಠಕ್ಕೆ ಬೆನ್ನು ಹಾಕಿ ಕುಳಿತುಕೊಳ್ಳಬಾರದು. ಮಾತಾಡಬಯಸುವ ಸದಸ್ಯನು ಅಧ್ಯಕ್ಷ ಪೀಠದ ಗಮನವನ್ನು ಸೆಳೆಯುವುದಕ್ಕಾಗಿ ತನ್ನ ಆಸನದಲ್ಲಿ ಎದ್ದುನಿಲ್ಲಬೇಕು. ಯಾವ ಸದಸ್ಯನೂ ಸಭಾಧ್ಯಕ್ಷರ/ಸಭಾಪತಿಯವರ ದೃಷ್ಟಿಗೆ ಬೀಳದ ಹೊರತು ಮತ್ತು ಸಭಾಧ್ಯಕ್ಷರು/ಸಭಾಪತಿಯವರ ಹೆಸರಿನಿಂದ ಅಥವಾ ಸಂಜ್ಞೆಯ ಮೂಲಕ ಮಾತಾಡಲು ಅನುಮತಿಸಿದ ಹೊರತು ಅವನು ಅಥವಾ ಅವಳು ಮಾತಾಡತಕ್ಕದ್ದಲ್ಲ.

13. ಸಭಾಧ್ಯಕ್ಷರು/ಸಭಾಪತಿಯವರು ಮಾತನಾಡುವುದಕ್ಕೆ ಅಥವಾ ಶಿಸ್ತನ್ನು ಆಜ್ಞಾಪಿಸಿದಾಗ ಎದ್ದು ನಿಂತಾಗ ಮತ್ತು ಇನ್ನೊಬ್ಬ ಸದಸ್ಯನು ಮಾತನಾಡುತ್ತಿರುವಾಗ ಪ್ರತಿಯೊಬ್ಬ ಸದಸ್ಯನು ತನ್ನ ಸ್ಥಾನದಲ್ಲಿ ಕುಳಿತಿರತಕ್ಕದ್ದು.

14. ಸಭಾಧ್ಯಕ್ಷರು/ಸಭಾಪತಿಯವರು, ಸದನವನ್ನು ಕುರಿತು ಮಾತನಾಡುತ್ತಿರುವಾಗ ಯಾವ ಸದಸ್ಯನೂ ಎದ್ದುನಿಲ್ಲತಕ್ಕದ್ದಲ್ಲ ಅಥವಾ ಸದನದಿಂದ ಹೊರ ಹೋಗತಕ್ಕದ್ದಲ್ಲ. “ಅಧ್ಯಕ್ಷ ಪೀಠದ ಭಾಷಣವನ್ನು ಯಾವಾಗಲೂ ಮೌನದಿಂದ ಆಲಿಸತಕ್ಕದ್ದು” ಯಾವ ಸದಸ್ಯನೂ ಲಿಖಿತ ಭಾಷಣವನ್ನು ಓದತಕ್ಕದ್ದಲ್ಲ.

15. ಸದಸ್ಯನು ತಾನು ತಯಾರಿಸಿಕೊಂಡಿರುವ ಭಾಷಣ ಅಥವಾ ಪಾಠದ ಜಾಡು ತಪ್ಪಿದಾಗ, ಅವನು ತನ್ನ ಟಿಪ್ಪಣಿಗಳನ್ನು ಬಳಸಲು ಸ್ವತಂತ್ರನಾಗಿರುತ್ತಾನೆ.

16. ಯಾವೊಬ್ಬ ಸದಸ್ಯನ ಪ್ರಾಮಾಣಿಕತೆಯ ವಿರುದ್ಧವಾಗಿ, ಆರೋಪಣೆಯ ಅಥವಾ ಪ್ರಶ್ನೆಯರೂಪದಲ್ಲಿ ವೈಯಕ್ತಿಕ ಉಲ್ಲೇಖಗಳನ್ನು ಮಾಡತಕ್ಕದ್ದಲ್ಲ. ಸದಸ್ಯನು ಸದನದ ಇತರ ಸದಸ್ಯರನ್ನು ವ್ಯಕ್ತಿಗತವಾಗಿ ಸಂಬೋಧಿಸತಕ್ಕದ್ದಲ್ಲ. ಅವನು ಯಾವಾಗಲೂ ಅಧ್ಯಕ್ಷ ಪೀಠವನ್ನೇ ಸಂಬೋಧಿಸತಕ್ಕದ್ದು ಮತ್ತು ಇತರ ಸದಸ್ಯರೊಂದಿಗೆ ಎಲ್ಲಾ ಟೀಕೆ ಟಿಪ್ಪಣಿಗಳನ್ನು ಸಭಾಧ್ಯಕ್ಷರ/ಸಭಾಪತಿಯವರ ಮುಖಾಂತರವೇ ಮಾಡತಕ್ಕದ್ದು.

17. ಏಕ ಸಮಯದಲ್ಲಿ ಇಬ್ಬರು ಸದಸ್ಯರು ಎದ್ದು ನಿಂತಿರತಕ್ಕದ್ದಲ್ಲ. ಸದನದ ಆವರಣದೊಳಗೆ ಅಥವಾ ವಿಧಾನ ಮಂಡಲದೊಳಗೆ ಸದನದ ಕಲಾಪಗಳಿಗೆ ಸಂಬಂಧವಿಲ್ಲದ ಯಾವುದೇ ಪ್ರಶ್ನಾವಳಿಗಳನ್ನು ಅಥವಾ ಕರಪತ್ರಗಳನ್ನು ಸದಸ್ಯರು ಹಂಚಬಾರದು.

18. ಸದಸ್ಯನು ಚರ್ಚೆಯಲ್ಲಿ ಭಾಗವಹಿಸುವಾಗ ಇಂಗ್ಲೀಷ್ ಅಥವಾ ಹಿಂದಿ ಭಾಷೆಯನ್ನು ಬಳಸಬಹುದು. ಆದಾಗ್ಯೂ ಸದಸ್ಯನು ಬೇರೆ ಯಾವುದೇ ಭಾಷೆಯಲ್ಲಿ ಮಾತನಾಡಬಯಸಿದರೆ, ಅವನು ಅಧ್ಯಕ್ಷ ಪೀಠದ ಅನುಮತಿ ಪಡೆದು ಹಾಗೆ ಮಾತನಾಡಬಹುದು, ಆದರೆ, ಮಾತನಾಡುವ ಮೊದಲು, ಈ ಭಾಷಣದ ಒಂದು ಅನುವಾದಿತ ಪ್ರತಿಯನ್ನು ಮುಂಚಿತವಾಗಿಯೇ ಒದಗಿಸಬೇಕು.

19. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಈ ಯುವ ಸಂಸತ್ತುಗಳಲ್ಲಿ ಭಾಗವಹಿಸುವವರೆಲ್ಲ, ಸಂಸತ್ತಿಗೆ ಮತ್ತು ಸಂಸದೀಯ ಸಂಸ್ಥೆಗಳಿಗೆ ಗೌರವ ಸಲ್ಲಿಸುವಂಥ ರೀತಿಯಲ್ಲಿ ನಡೆದುಕೊಳ್ಳಬೇಕು.

## ಅನುಬಂಧ – ಎ

## ಮಾದರಿ ಕಾರ್ಯಕ್ರಮಗಳು

| | | |
|---|---|---|
| ಪೂರ್ವಾಹ್ನ | 11.00 ರಿಂದ 11.30 ರವರೆಗೆ | ಕಲಾಪಗಳ ಪಟ್ಟಿಯನ್ವಯ ಆರಂಭ |
| | 11.30 ರಿಂದ 11.45 ರವರೆಗೆ | ಆಸನಗಳ ಜೋಡಣೆ ಇತ್ಯಾದಿ |
| | 11.45 ರಿಂದ ಅ. 1.00 ರವರೆಗೆ | ಮೊದಲನೇ ತಂಡದ ಪ್ರದರ್ಶನ |
| ಅಪರಾಹ್ನ | 1.00 ರಿಂದ 2.00 ರವರೆಗೆ | ಊಟದ ವಿರಾಮ |
| | 2.00 ರಿಂದ 3.15 ರವರೆಗೆ | ಎರಡನೇ ತಂಡದ ಪ್ರದರ್ಶನ |
| | 3.15 ರಿಂದ 3.45 ರವರೆಗೆ | ಫಲಿತಾಂಶ ನಿರ್ಣಯ |
| | 3.45 ರಿಂದ 4.14 ರವರೆಗೆ | ಮುಕ್ತಾಯ |

### *ಅನುಬಂಧ – ಬಿ*

### *ಭಾಗ – 1 – ಕಡ್ಡಾಯ ವಿಷಯಗಳ ಪಟ್ಟಿ*

1. ಸಭಾಧ್ಯಕ್ಷರ ಆಗಮನ
2. ಪ್ರಶ್ನೋತ್ತರ ವೇಳೆ
3. ಗಮನ ಸೆಳೆಯುವ ಸೂಚನೆಗಳು
4. ವಿಧೇಯಕಗಳ ಮಂಡನೆ
5. ಅಲ್ಪಕಾಲಾವಧಿ ಚರ್ಚೆ

### *ಭಾಗ –2 ಐಚ್ಛಿಕ ವಿಷಯಗಳ ಪಟ್ಟಿ*

1. ಸಂತಾಪ ಸೂಚನೆಗಳು
2. ಶೂನ್ಯವೇಳೆ
3. ವಿಧೇಯಕಗಳ ಪರಿಶೀಲನೆ / ಅಂಗೀಕಾರ
4. ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ
5. ಖಾಸಗೀ ಕಲಾಪಗಳು (ನಿರ್ಣಯ ಅಥವಾ ಖಾಸಗೀ ವಿಧೇಯಕದ ಮಂಡನೆ ಇತ್ಯಾದಿ)

ಸ್ಪರ್ಧೆಯ ಬಗ್ಗೆ ಸ್ಪಷ್ಟೀಕರಣ ಅಗತ್ಯತೆ ಇದ್ದಲ್ಲಿ ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು ದೂರವಾಣಿ ಸಂಖ್ಯೆ:080–23562033/23561944 ಅಥವಾ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಇಲಾಖೆ, ವಿಧಾನಸೌಧ, ಬೆಂಗಳೂರು ದೂರವಾಣಿ ಸಂಖ್ಯೆ:080–22254445 ಇವರನ್ನು ಸಂಪರ್ಕಿಸಬಹುದು.

***ಜಿಲ್ಲಾ ಮಟ್ಟದ ಮತ್ತು ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆಗಳಲ್ಲಿ***
***ಭಾಗವಹಿಸಿದ ಕಾಲೇಜುಗಳಿಗೆ ಹಾಗೂ ಬಹುಮಾನಿತರಿಗೆ ನೀಡುವ ಪ್ರಮಾಣ ಪತ್ರಗಳು***

***ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ***
***"ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ 2017–2018"***

(ಪದವಿಪೂರ್ವ ಕಾಲೇಜಿನ ಹೆಸರು) . . . . . . . . . . . . . . . . . . . . . . . . . .. ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಹಭಾಗಿತ್ವದಲ್ಲಿ 2017–2018ನೇ ಶೈಕ್ಷಣಿಕ ವರ್ಷದಲ್ಲಿ ನಡೆಸಿದ ***"ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯಲ್ಲಿ"*** ಭಾಗವಹಿಸಿದೆಯೆಂದು ಪ್ರಮಾಣೀಕರಿಸಲಾಗಿದೆ.

| | |
|---|---|
| ಉಪ ನಿರ್ದೇಶಕರು | ಸಕ್ಷಮ ಪ್ರಾಧಿಕಾರಿ |
| ಪದವಿ ಪೂರ್ವ ಶಿಕ್ಷಣ ಇಲಾಖೆ | ಸಂಸದೀಯ ವ್ಯವಹಾರಗಳ ಇಲಾಖೆ |
| . . . . . . . . . . . . . . . ಜಿಲ್ಲೆ | |

ಸ್ಥಳ:. . . . . . . . . . . . . . . .
ದಿನಾಂಕ: . . . . . . . . . . . . .

***ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ***

***“ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ” 2017–2018***

............................................ ಪದವಿಪೂರ್ವ ಕಾಲೇಜಿನ .............................. ಪ್ರಥಮ/ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿ/ವಿದ್ಯಾರ್ಥಿನಿಯಾದ .......................................... ಅವರಿಗೆ ***2017–2018***ನೇ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳ ಇಲಾಖೆ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಸಹಭಾಗಿತ್ವದಲ್ಲಿ ನಡೆಸಲಾದ ***“ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ”***ಯಲ್ಲಿ ಅತ್ಯುತ್ತಮ ಸಾಧನೆಗೆ . . . . . . . . . . . . ಬಹುಮಾನವನ್ನು ನೀಡಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.

ಉಪ ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ

. . . . . . . . . . . . . . . ಜಿಲ್ಲೆ

ಸಕ್ಷಮ ಪ್ರಾಧಿಕಾರಿ

ಸಂಸದೀಯ ವ್ಯವಹಾರಗಳ ಇಲಾಖೆ

ಸ್ಥಳ:. . . . . . . . . . . . . . . .

ದಿನಾಂಕ: . . . . . . . . . . . . .

***ಕರ್ನಾಟಕ ಸರ್ಕಾರ***

***ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ***

***"ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ" 2017-2018***

-------------------- ಈ ಪದವಿ ಪೂರ್ವ ಕಾಲೇಜಿನ ---------------------------- -- ಪ್ರಥಮ/ದ್ವಿತೀಯ ಪಿ.ಯು.ಸಿ.ಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ -------------------------- -------ಅವರಿಗೆ ***2017-2018***ನೇ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳ ಇಲಾಖೆ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಸಹಭಾಗಿತ್ವದಲ್ಲಿ ನಡೆಸಲಾದ "***ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ***"ಯಲ್ಲಿ ಅತ್ಯುತ್ತಮ ಸಾಧನೆಗೆ --------------------------------- ಮೆರಿಟ್ ಬಹುಮಾನವನ್ನು ನೀಡಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| ಬೆಂಗಳೂರು | ***ಸರ್ಕಾರದ ಪ್ರಧಾನ ಕಾರ್ಯದರ್ಶಿ*** | ***ಸರ್ಕಾರದ ಕಾರ್ಯದರ್ಶಿ*** |
| ದಿನಾಂಕ: | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | ಸಂಸದೀಯ ವ್ಯವಹಾರಗಳ ಇಲಾಖೆ |

***ಕರ್ನಾಟಕ ಸರ್ಕಾರ***

***ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ***

***"ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ" 2017–2018***

________________________________________ ಈ ಪದವಿ ಪೂರ್ವ ಶಿಕ್ಷಣ ಕಾಲೇಜು ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಹಭಾಗಿತ್ವದಲ್ಲಿ ***2017–2018***ನೇ ಶೈಕ್ಷಣಿಕ ವರ್ಷದಲ್ಲಿ ನಡೆಸಿದ ***"ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ"***ಯಲ್ಲಿ ಭಾಗವಹಿಸಿದೆಯೆಂದು ಪ್ರಮಾಣೀಕರಿಸಲಾಗಿದೆ.

ಬೆಂಗಳೂರು

ದಿನಾಂಕ:

ಸಕ್ಷಮ ಪ್ರಾಧಿಕಾರಿ

ಸಂಸದೀಯ ವ್ಯವಹಾರಗಳ ಇಲಾಖೆ/

ಪದವಿ ಪೂರ್ವ ಶಿಕ್ಷಣ ಇಲಾಖೆ

### *ಮಾದರಿ ಸಂತಾಪ ಸೂಚನೆ ಪ್ರಸ್ತಾವಗಳು*

**ಮಾನ್ಯ ಸಭಾಪತಿಯವರು:–**

ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್.ಧರ್ಮಸಿಂಗ್‌ರವರು ದಿನಾಂಕ: 27.07.2017ರಂದು ನಿಧನ ಹೊಂದಿರುತ್ತಾರೆ.

ಶ್ರೀಯುತರು ಕಲಬುರಗಿ ಜಿಲ್ಲೆ ಜೇವರ್ಗಿ ತಾಲ್ಲೂಕು ನೆಲೋಗಿಯಲ್ಲಿ 1936ರ ಡಿಸೆಂಬರ್ 23ರಂದು ಜನಿಸಿದ್ದು, ಎಂ.ಎ., ಎಲ್.ಎಲ್.ಬಿ. ಪದವೀಧರರಾಗಿದ್ದರು. ವೃತ್ತಿಯಲ್ಲಿ ವಕೀಲರಾಗಿದ್ದ ಶ್ರೀಯುತರು 1978 ರಿಂದ 2008ರವರೆಗೆ ಜೇವರ್ಗಿ ಕ್ಷೇತ್ರದಿಂದ ವಿಧಾನಸಭಾ ಸದಸ್ಯರಾಗಿ ಸತತವಾಗಿ ಆಯ್ಕೆಯಾಗಿದ್ದು, ಗೃಹ, ಲೋಕೋಪಯೋಗಿ, ನಗರಾಭಿವೃದ್ಧಿ, ಸಮಾಜ ಕಲ್ಯಾಣ, ಕಂದಾಯ ಹಾಗೂ ಇನ್ನೂ ಹಲವಾರು ಇಲಾಖೆಗಳ ಸಚಿವರಾಗಿ ಹಾಗೂ ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿ ಸಮರ್ಥವಾಗಿ ಕಾರ್ಯನಿರ್ವಹಿಸಿರುತ್ತಾರೆ. 2009 ರಿಂದ 2014ರವರೆಗೆ ಬೀದರ್ ಕ್ಷೇತ್ರದಿಂದ ಲೋಕಸಭಾ ಸದಸ್ಯರಾಗಿ ಆಯ್ಕೆಗೊಂಡು ಕಾರ್ಯನಿರ್ವಹಿಸಿದ್ದ ಶ್ರೀಯುತರು 2004 ರಿಂದ 2006ರ ಅವಧಿಯಲ್ಲಿ ಕಾಂಗ್ರೆಸ್ ಮತ್ತು ಜಾತ್ಯಾತೀತ ಜನತಾದಳ ಪಕ್ಷಗಳ ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸಿರುತ್ತಾರೆ. ಹಿರಿಯ ರಾಜಕೀಯ ಮುತ್ಸದ್ಧಿ ಹಾಗೂ ಜನಾನುರಾಗಿಯಾಗಿದ್ದ ಇವರು ಅಜಾತಶತ್ರು ಎಂದೇ ಹೆಸರಾಗಿದ್ದರು.

ದಿವಂಗತ ಶ್ರೀ ಧರ್ಮಸಿಂಗ್ ಅವರ ನಿಧನದಿಂದ ರಾಜ್ಯಕ್ಕೆ ಅಪಾರ ನಷ್ಟ ಉಂಟಾಗಿದ್ದು, ರಾಜ್ಯದ ಓರ್ವ ಹಿರಿಯ ರಾಜಕೀಯ ಮುತ್ಸದ್ಧಿಯನ್ನು ಕಳೆದುಕೊಂಡಂತಾಗಿದೆ. ಶ್ರೀಯುತರ ನಿಧನದಿಂದ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಮಾನ್ಯ ಸದಸ್ಯರು ಒಂದು ನಿಮಿಷ ಮೌನ ಆಚರಿಸಿದರು)

**ಸಭಾಪತಿಯವರು**
ಕರ್ನಾಟಕ ವಿಧಾನ ಪರಿಷತ್ತು

*ಶಾಸನ ರಚನೆ – ಮಾದರಿ ವಿಧೇಯಕ*

## ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಅರಣ್ಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ಹಾಗೂ ಸ್ಥಳನಿಯುಕ್ತಿಗಳ ನಿಯಂತ್ರಣ) ವಿಧೇಯಕ, 2016

ಅಪಾಯ ಸಂಭವವಿರುವ (critical) ಮತ್ತು ಇತರ ಪ್ರದೇಶಗಳಲ್ಲಿನ ಅರಣ್ಯ ಇಲಾಖೆಯ ಅರಣ್ಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಗಳ ವರ್ಗಾವಣೆ ಹಾಗೂ ಸ್ಥಳನಿಯುಕ್ತಿಯ ನಿಯಂತ್ರಣಕ್ಕಾಗಿ ಉಪಬಂಧವನ್ನು ಕಲ್ಪಿಸಲು ಒಂದು ವಿಧೇಯಕ.

ಅಪಾಯ ಸಂಭವವಿರುವ (critical) ಮತ್ತು ಇತರ ಪ್ರದೇಶಗಳಲ್ಲಿನ ಅರಣ್ಯ ಇಲಾಖೆಯ ಅರಣ್ಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಗಳ ವರ್ಗಾವಣೆಯ ನಿಯಂತ್ರಣಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಆನುಷಂಗಿಕವಾದ ವಿಷಯಗಳಿಗೆ ಉಪಬಂಧವನ್ನು ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಅರಣ್ಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ಹಾಗೂ ಸ್ಥಳನಿಯುಕ್ತಿಗಳ ನಿಯಂತ್ರಣ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) "ನೇಮಕಾತಿ" ಎಂದರೆ, ಅರಣ್ಯ ಅಧಿಕಾರಿಗಳು ಅಥವಾ ಇತರ ಸಿಬ್ಬಂದಿಗಳ ಸ್ಥಾನಪನ್ನದ ಆಧಾರದ ಮೇಲೆ ನೇರ ನೇಮಕಾತಿಯ ಅಥವಾ ಬಡ್ತಿಯ ಮೂಲಕ ಮಾಡಿದ ನೇಮಕಾತಿ;

(2) "ನೇಮಕಾತಿ ಪ್ರಾಧಿಕಾರ" ಎಂದರೆ, ಸಂಬಂಧಿಸಿದ ವೃಂದಗಳಿಗೆ ನೇಮಕಾತಿ ಮಾಡುವುದಕ್ಕೆ ಸಕ್ಷಮವಾದ ಪ್ರಾಧಿಕಾರ;

(3) "ಹುದ್ದೆಯ ಪ್ರವರ್ಗ" ಎಂದರೆ, ಈ ಕೆಳಗಿನಂತೆ ನಿರ್ದಿಷ್ಟಪಡಿಸಿದ ಹುದ್ದೆಗಳ ವರ್ಗ, ಎಂದರೆ:–

**ಅನುಸೂಚಿ–I ರಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳ ಪ್ರವರ್ಗೀಕರಣ–ಅಧಿಕಾರಿಗಳು ಮತ್ತು ಸಿಬ್ಬಂದಿಗಳು**

| | | |
|---|---|---|
| ಪ್ರವರ್ಗ "ಎ" | ಪ್ರಾಸಂಗಿಕ (collateral) ಹುದ್ದೆಗಳು | ಅರಣ್ಯ ಇಲಾಖೆಯ ವೃಂದದ ಆಧಾರದ ಮೇಲೆ ನಿರ್ದಿಷ್ಟಪಡಿಸಿದ ಬಿ ಮತ್ತು ಸಿ ಪ್ರವರ್ಗಕ್ಕೆ ಹೊರತಾದ ಹುದ್ದೆಗಳು |
| ಪ್ರವರ್ಗ "ಬಿ" | ವನ್ಯಜೀವಿ ಹುದ್ದೆಗಳು ಮತ್ತು ಅಂತರರಾಜ್ಯ ಗಡಿ (ಪ್ರಾದೇಶಿಕ) ಹುದ್ದೆಗಳು | ವನ್ಯಜೀವಿ ವಿಭಾಗ ಮತ್ತು ಅಂತರರಾಜ್ಯ ಗಡಿ (ಪ್ರಾದೇಶಿಕ) ಹುದ್ದೆಗಳು |
| ಪ್ರವರ್ಗ "ಸಿ" | ಪ್ರಾದೇಶಿಕ ಹುದ್ದೆಗಳು | ಕರ್ನಾಟಕ ಅರಣ್ಯ ಅಧಿನಿಯಮ, 1964 ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ಶಾಸನಬದ್ಧ ಅಧಿಕಾರಗಳನ್ನು ಹೊಂದಿರುವ ಹುದ್ದೆಗಳು. |

**ಅನುಸೂಚಿ–II ರಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳ ಪ್ರವರ್ಗೀಕರಣ–ಇತರ ಸಿಬ್ಬಂದಿಗಳು**

| | |
|---|---|
| ಪ್ರವರ್ಗ "ಎ" | ಪ್ರವರ್ಗ "ಬಿ" ಮತ್ತು "ಸಿ" ಸ್ಥಳಗಳಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳನ್ನು ಹೊರತುಪಡಿಸಿದ ಹುದ್ದೆಗಳು. |
| ಪ್ರವರ್ಗ "ಬಿ" | ತಾಲ್ಲೂಕು ಕೇಂದ್ರಸ್ಥಾನಗಳಲ್ಲಿರುವ ಹುದ್ದೆಗಳು. |
| ಪ್ರವರ್ಗ "ಸಿ" | ಜಿಲ್ಲೆ, ವಿಭಾಗ, ವೃತ್ತ ಅಥವಾ ರಾಜ್ಯದ ಕೇಂದ್ರಸ್ಥಾನಗಳಲ್ಲಿರುವ ಹುದ್ದೆಗಳು. |

(4) "ಪ್ರಾಸಂಗಿಕ ಹುದ್ದೆಗಳು" ಎಂದರೆ, ವನ್ಯಜೀವಿ, ಅಂತರರಾಜ್ಯ ಗಡಿ (ಪ್ರಾದೇಶಿಕ) ಮತ್ತು ಪ್ರಾದೇಶಿಕ ಹುದ್ದೆಗಳಿಗೆ ಹೊರತಾದ ಎಲ್ಲಾ ಹುದ್ದೆಗಳು.

(5) "ಸಕ್ಷಮ ಪ್ರಾಧಿಕಾರ" ಎಂದರೆ, ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಗಳನ್ನು ವರ್ಗಾವಣೆ ಮಾಡಲು ಸಕ್ಷಮವಾದ ಪ್ರಾಧಿಕಾರ;

(6) "ಕೌನ್ಸಿಲಿಂಗ್" ಎಂದರೆ, ಲಭ್ಯವಿರುವುದಾಗಿ ಅಧಿಸೂಚಿಸಿದ ಹುದ್ದೆಗಳಲ್ಲಿ ವರ್ಗಾವಣೆ ಅಥವಾ ಸ್ಥಳನಿಯುಕ್ತಿಯ ಮೇರೆಗೆ, ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ತನ್ನ ಆಯ್ಕೆಯ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ಸಮರ್ಥಗೊಳಿಸುವುದು ಮತ್ತು ಮಾರ್ಗದರ್ಶನ ನೀಡುವುದು;

(7) "ಇಲಾಖೆ" ಎಂದರೆ, ಕರ್ನಾಟಕ ಅರಣ್ಯ ಇಲಾಖೆ;

(8) "ಅರಣ್ಯ ಅಧಿಕಾರಿ" ಎಂದರೆ, ಅನುಸೂಚಿ-I ರಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಹುದ್ದೆಗಳಿಗೆ ನೇಮಕನಾದ ಒಬ್ಬ ಅಧಿಕಾರಿ;

(9) "ಸಾಮಾನ್ಯ ವರ್ಗಾವಣೆ" ಎಂದರೆ, ಅರಣ್ಯ ಅಧಿಕಾರಿಗಳು ಅಥವಾ ಇತರ ಸಿಬ್ಬಂದಿಯು, ತಮ್ಮ ಸಹಜ ಅಧಿಕಾರಾವಧಿಯನ್ನು ಪೂರ್ಣಗೊಳಿಸಿದ ಅಥವಾ ಖಾಲಿ ಹುದ್ದೆಗೆ ವರ್ಗಾವಣೆಗಾಗಿ ಅಥವಾ ಸ್ಥಳನಿಯುಕ್ತಿಗಾಗಿ ಸರ್ಕಾರವು ಅಧಿಸೂಚಿಸಿದ ಅವಧಿ;

(10) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(11) "ಸರ್ಕಾರಿ ಸಂಸ್ಥೆ"ಯು ಅರಣ್ಯ ಇಲಾಖೆಗೆ ಸೇರಿರುವ ಯಾವುದೇ ಹೆಸರಿನಿಂದ ಕರೆಯಲಾಗುವ ಮತ್ತು ಸರ್ಕಾರವು ಸ್ಥಾಪಿಸಿರುವ ತರಬೇತಿ ಕೇಂದ್ರ, ಆಡಳಿತ ಕಛೇರಿ ಅಥವಾ ಯಾವುವೇ ಇತರ ಸಂಸ್ಥೆಗಳನ್ನು ಒಳಗೊಳ್ಳುತ್ತದೆ;

(12) "ಅಂತರರಾಜ್ಯ ಗಡಿ" ಎಂದರೆ, ನೆರೆ ರಾಜ್ಯಗಳೊಂದಿಗೆ ಇರುವ ಕರ್ನಾಟಕ ರಾಜ್ಯದ ಗಡಿ;

(13) "ಇತರ ಸಿಬ್ಬಂದಿಗಳು" ಎಂದರೆ, ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಹುದ್ದೆಗಳಿಗೆ ನೇಮಕವಾದ ಸಿಬ್ಬಂದಿಗಳು;

(14) "ಹುದ್ದೆ" ಎಂದರೆ, ಕೆಲವು ಸಾರ್ವಜನಿಕ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದಕ್ಕೆ ಇಲಾಖೆಯ ಅಧೀನದಲ್ಲಿ ಸರ್ಕಾರವು ಯುಕ್ತವಾಗಿ ಸೃಜಿಸಿರುವ ಹುದ್ದೆ ಅಥವಾ ಅಧಿಕೃತ ಸ್ಥಾನ;

(15) "ನಿಯಮಿಸಲಾದುದು" ಎಂದರೆ, ಸರ್ಕಾರವು ನಿಯಮಗಳ ಮೂಲಕ ನಿಯಮಿಸಲಾದುದು;

(16) "ಅನುಸೂಚಿ" ಎಂದರೆ, ಈ ಅಧಿನಿಯಮದೊಂದಿಗೆ ಲಗತ್ತಾದ ಅನುಸೂಚಿ;

(17) "ಅಧಿಕಾರಾವಧಿ" ಎಂದರೆ, ನಿಯಮಗಳ ಮೂಲಕ ನಿಯಮಿಸಬಹುದಾದಂತೆ ಒಂದು ಸ್ಥಳ ಅಥವಾ ಹುದ್ದೆಯಲ್ಲಿ ಕೆಲಸ ಮಾಡುವುದಕ್ಕೆ ಅಗತ್ಯವಿರುವ ಕನಿಷ್ಠ ಅವಧಿ;

(18) "ಪ್ರಾದೇಶಿಕ ಹುದ್ದೆ" ಎಂದರೆ, ಕರ್ನಾಟಕ ಅರಣ್ಯ ಅಧಿನಿಯಮ, 1963ರ ಮತ್ತು ಕರ್ನಾಟಕ ಅರಣ್ಯ ನಿಯಮಗಳು, 1967ರ ಅಡಿಯಲ್ಲಿ ಶಾಸನಬದ್ಧ ಅಧಿಕಾರಗಳನ್ನು ಹೊಂದಿರುವ ಒಂದು ಹುದ್ದೆ;

(19) "ವರ್ಗಾವಣೆ" ಎಂದರೆ, ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ಒಂದು ಸ್ಥಳ ಅಥವಾ ಹುದ್ದೆಯಿಂದ ಇನ್ನೊಂದು ಸ್ಥಳ ಅಥವಾ ಹುದ್ದೆಗೆ ಮಾಡುವ ವರ್ಗಾವಣೆ;

(20) "ವನ್ಯಜೀವಿ ಹುದ್ದೆ" ಎಂದರೆ, ವನ್ಯಜೀವಿ (ಸಂರಕ್ಷಣಾ) ಅಧಿನಿಯಮ, 1972ರ (1972ರ ಕೇಂದ್ರ ಅಧಿನಿಯಮ 53) ಅಡಿಯಲ್ಲಿ ವನ್ಯಜೀವಿ ವಿಭಾಗವೆಂದು ಅಧಿಸೂಚಿಸಿದ ಪ್ರದೇಶದಲ್ಲಿನ ಹುದ್ದೆ;

**3. ಎಲ್ಲಾ ಪ್ರಾರಂಭಿಕ ನೇಮಕಾತಿಗಳು, ವರ್ಗಾವಣೆಗಳು ಮತ್ತು ಸ್ಥಳನಿಯುಕ್ತಿಗಳನ್ನು ಕೌನ್ಸಿಲಿಂಗ್ ಮೂಲಕ ಮಾಡತಕ್ಕದ್ದು.-** (1) ಎಲ್ಲಾ ಅರಣ್ಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಗಳ ಪ್ರಾರಂಭಿಕ ನೇಮಕಾತಿಗಳು ಮತ್ತು

ನಂತರದ ವರ್ಗಾವಣೆಗಳು ಮತ್ತು ಸ್ಥಳ ನಿಯುಕ್ತಿಗಳನ್ನು ನಿಯಮಿಸಲಾದ ವಿಧಾನದಲ್ಲಿ ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ ನಡೆಸತಕ್ಕದ್ದು.

(2) ಯಾವೊಬ್ಬ ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ಪ್ರಾರಂಭಿಕ ನೇಮಕಾತಿ ಅಥವಾ ಬಡ್ತಿಯ ಮೇಲೆ ಪ್ರವರ್ಗ "ಎ" ಹುದ್ದೆಗಳಿಗೆ ಕಡ್ಡಾಯವಾಗಿ ಸ್ಥಳನಿಯುಕ್ತಿಗೊಳಿಸತಕ್ಕದ್ದು.

(3) ಪ್ರವರ್ಗ "ಎ" ಯಲ್ಲಿಯ ಹುದ್ದೆಗಳಲ್ಲಿ ಕನಿಷ್ಠ ಅಧಿಕಾರಾವಧಿಯನ್ನು ಪೂರ್ಣಗೊಳಿಸಿರುವ ಪ್ರತಿಯೊಬ್ಬ ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯು ಪ್ರವರ್ಗ "ಬಿ" ಯಲ್ಲಿಯ ಹುದ್ದೆಗೆ ವರ್ಗಾವಣೆ ಅಥವಾ ಸ್ಥಳನಿಯುಕ್ತಿ ಹೊಂದಲು ಅರ್ಹನಾಗಿರತಕ್ಕದ್ದು. ಪ್ರವರ್ಗ "ಬಿ" ಯಲ್ಲಿಯ ಹುದ್ದೆಗಳಲ್ಲಿ ಕನಿಷ್ಠ ಅಧಿಕಾರಾವಧಿಯನ್ನು ಪೂರ್ಣಗೊಳಿಸಿರುವ ಪ್ರತಿಯೊಬ್ಬ ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯು ಪ್ರವರ್ಗ "ಸಿ" ಯಲ್ಲಿಯ ಹುದ್ದೆಗಳಿಗೆ ವರ್ಗಾವಣೆ ಅಥವಾ ಸ್ಥಳನಿಯುಕ್ತಿ ಹೊಂದಲು ಅರ್ಹನಾಗಿರತಕ್ಕದ್ದು ಮತ್ತು ಪ್ರವರ್ಗ "ಸಿ" ಯಲ್ಲಿಯ ಹುದ್ದೆಗಳಲ್ಲಿ ಕನಿಷ್ಠ ಅಧಿಕಾರಾವಧಿಯನ್ನು ಪೂರ್ಣಗೊಳಿಸಿರುವ ಪ್ರತಿಯೊಬ್ಬ ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯು ಸರದಿಯ ಮೂಲಕ ಪ್ರವರ್ಗ "ಎ" ಯಲ್ಲಿಯ ಹುದ್ದೆಗಳಿಗೆ ವರ್ಗಾವಣೆ ಅಥವಾ ಸ್ಥಳನಿಯುಕ್ತಿ ಹೊಂದಲು ಅರ್ಹನಾಗಿರತಕ್ಕದ್ದು.

(4) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಯಾವೊಬ್ಬ ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯು ಹತ್ತು ವರ್ಷಗಳಿಗೂ ಮೀರಿದ ಸೇವೆಯಲ್ಲಿದ್ದು, ಆದರೆ ಪ್ರವರ್ಗ "ಎ" ಯ ಯಾವುದೇ ಹುದ್ದೆಯಲ್ಲಿ ಸೇವೆ ಸಲ್ಲಿಸಿರದಿದ್ದರೆ, ಕೂಡಲೇ ಆತನನ್ನು ಆದ್ಯತೆಯ ಮೇರೆಗೆ ಪ್ರವರ್ಗ "ಎ" ಹುದ್ದೆಗೆ ವರ್ಗಾಯಿಸತಕ್ಕದ್ದು ಮತ್ತು ಸ್ಥಳನಿಯುಕ್ತಿಗೊಳಿಸತಕ್ಕದ್ದು.

(5) 55 ವರ್ಷಗಳ ವಯಸ್ಸನ್ನು ತಲುಪಿದ ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯು ಪ್ರವರ್ಗ "ಬಿ" ಮತ್ತು "ಸಿ" ಯಲ್ಲಿನ ಹುದ್ದೆಗಳಲ್ಲಿನ ಸ್ಥಳನಿಯುಕ್ತಿಗೆ ಅಥವಾ ಹುದ್ದೆಗೆ ಅರ್ಹನಾಗಿರತಕ್ಕದ್ದಲ್ಲ:

ಪರಂತು, ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯು, ಯಾವುದೇ ವೃಂದದಲ್ಲಿ ಆತನ ಪೂರ್ಣ ಸೇವಾವಧಿಯಲ್ಲಿ ಜಾಗೃತಿ ಅಥವಾ ಸಂಚಾರಿ ಅರಣ್ಯ ದಳ ಅಥವಾ ಚೆಕ್‌ಪೋಸ್ಟ್‌ಗೆ ಎರಡು ವರ್ಷಗಳನ್ನು ಮೀರಿದ ಅವಧಿಗಾಗಿ ಸ್ಥಳನಿಯುಕ್ತಿ ಹೊಂದತಕ್ಕದ್ದಲ್ಲ ಮತ್ತು ಈ ಹುದ್ದೆಗಳಿಗೆ ಅವರ ಸ್ವಂತ ಜಿಲ್ಲೆಗಳಲ್ಲಿ ಸ್ಥಳ ನಿಯುಕ್ತಿಗೊಳಿಸತಕ್ಕದ್ದಲ್ಲ.

(6) ಸಕ್ಷಮ ಪ್ರಾಧಿಕಾರವು, 6ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಇರುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ (3)ನೇ ಉಪಪ್ರಕರಣವನ್ನು ಸಡಿಲಿಸಬಹುದು.

**4. ಸಾರ್ವಜನಿಕ ಹಿತಾಸಕ್ತಿಯಲ್ಲಿ ಅರಣ್ಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ.–** ಸಾಮಾನ್ಯವಾಗಿ, ವರ್ಗಾವಣೆಗಳನ್ನು ಸಾಮಾನ್ಯ ವರ್ಗಾವಣೆ ಅವಧಿಯಲ್ಲಿ ಮಾಡತಕ್ಕದ್ದು. ಯಾವುದೇ ನಿರ್ದಿಷ್ಟ ಅರಣ್ಯ ಪ್ರದೇಶ ಅಥವಾ ನಿರ್ದಿಷ್ಟ ಕಛೇರಿಯ ನಿರ್ವಹಣೆಗಾಗಿ ಸಕ್ಷಮ ಪ್ರಾಧಿಕಾರವು ಅಧಿಸೂಚಿಸಬಹುದಾದ, ಇಲಾಖೆಯಲ್ಲಿನ ಯಾವುದೇ ಹುದ್ದೆಯನ್ನು ಅಪಾಯ ಸಂಭವವಿರುವ (critical) ಹುದ್ದೆಯೆಂಬುದಾಗಿ ಪರಿಗಣಿಸಿದ್ದಲ್ಲಿ ಮತ್ತು ಸಾಮಾನ್ಯ ವರ್ಗಾವಣೆ ಅವಧಿಯಲ್ಲಿ ಯಾವೊಬ್ಬ ಸೂಕ್ತ ವ್ಯಕ್ತಿಯು ಆ ಹುದ್ದೆಯನ್ನು ಆಯ್ಕೆಮಾಡಿಕೊಳ್ಳದಿದ್ದಲ್ಲಿ, ಅರ್ಹ ಅರಣ್ಯ ಅಧಿಕಾರಿಗಳು ಅಥವಾ ಸಂದರ್ಭಾನುಸಾರವಾಗಿ ಇತರ ಸಿಬ್ಬಂದಿಗಳಲ್ಲಿ ಯಾವೊಬ್ಬ ಸೂಕ್ತ ವ್ಯಕ್ತಿಯನ್ನು ಆ ಹುದ್ದೆಗೆ ಸಾರ್ವಜನಿಕ ಹಿತಾಸಕ್ತಿಯಲ್ಲಿ ಸಕ್ಷಮ ಪ್ರಾಧಿಕಾರವು ಸ್ವಪ್ರೇರಣೆಯಿಂದ ನೇಮಕ ಮಾಡಬಹುದು.

**5. ಹುದ್ದೆಗಳ ಕೆಲವು ಪ್ರವರ್ಗದಲ್ಲಿ ಕ್ರಮಾನುಗತ ಸ್ಥಳನಿಯುಕ್ತಿ ಮಾಡುವುದರ ಮೇಲೆ ನಿಷೇಧ.–**ಯಾವೊಬ್ಬ ಅಧಿಕಾರಿ ಅಥವಾ ಸಿಬ್ಬಂದಿಯನ್ನು ಕ್ರಮಾನುಗತವಾಗಿ ಒಂದಕ್ಕಿಂತ ಹೆಚ್ಚು ಸಲ ಯಾವುದೇ ಪ್ರವರ್ಗ "ಬಿ" ಅಥವಾ ಪ್ರವರ್ಗ "ಸಿ" ಹುದ್ದೆಗೆ ಸ್ಥಳನಿಯುಕ್ತಿಗೊಳಿಸತಕ್ಕದ್ದಲ್ಲ.

**6. ಪ್ರತಿಯೊಂದು ಸ್ಥಳನಿಯುಕ್ತಿಯ ಅಧಿಕಾರಾವಧಿ ಮತ್ತು ಕೆಲವು ಇತರ ವಿನಾಯಿತಿಗಳು.–**

(1) ಹುದ್ದೆಗಳ ಪ್ರತಿಯೊಂದು ಪ್ರವರ್ಗಕ್ಕಾಗಿನ ಅಧಿಕಾರಾವಧಿಯು ನಿಯಮಗಳ ಮೂಲಕ ನಿಯಮಿಸಲಾದಂತೆ ಇರತಕ್ಕದ್ದು. ಪ್ರತಿಯೊಬ್ಬ ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಗೆ, ಆತನ ವಿರುದ್ಧ ಶಿಸ್ತು ನಡವಳಿಗಳನ್ನು ಉದ್ದೇಶಿಸಿದ ಅಥವಾ ಆರಂಭಿಸಿದ ಪ್ರಕರಣಗಳನ್ನು ಹೊರತುಪಡಿಸಿ, ಆತನ ಅಧಿಕಾರಾವಧಿಯನ್ನು ಪೂರ್ಣಗೊಳಿಸುವ ಅವಕಾಶವನ್ನು ನೀಡತಕ್ಕದ್ದು.

(2) ಈ ಮುಂದಿನ ಸಂದರ್ಭಗಳಲ್ಲಿ ಎಂದರೆ:–

(i) ಪತಿ ಮತ್ತು ಪತ್ನಿಯರಿಬ್ಬರು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ನೌಕರರಾಗಿರುವ ಸಂದರ್ಭದಲ್ಲಿ ಮತ್ತು ದಂಪತಿಗಳಲ್ಲಿ ಒಬ್ಬರು ಬೇರೆ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದರೆ, ಆಗ ಇನ್ನೊಬ್ಬರನ್ನು ಸ್ಪಷ್ಟ ಖಾಲಿ ಹುದ್ದೆಯ ಲಭ್ಯತೆಗೆ ಒಳಪಟ್ಟು, ಆತನು ಅದೇ ಸ್ಥಳದಲ್ಲಿದ್ದರೆ, ಅದೇ ಸ್ಥಳಕ್ಕೆ ಅಥವಾ ಹತ್ತಿರದ ಸ್ಥಳಕ್ಕೆ ವರ್ಗಾಯಿಸಬಹುದಾದ ಪ್ರಕರಣಕ್ಕೆ;

(ii) ಆಕೆಯು ವಿಧವೆಯಾಗಿದ್ದರೆ ಆ ನೌಕರಳಿಗೆ;

(iii) ಅವರು ವಿಕಲಚೇತನರಾಗಿದ್ದರೆ ಆ ನೌಕರರಿಗೆ;

(iv) ನೌಕರನ ಪತ್ನಿ ಅಥವಾ ಮಕ್ಕಳು ಗಂಭೀರ ಖಾಯಿಲೆಯಿಂದ ನರಳುತ್ತಿದ್ದು, ಅದಕ್ಕಾಗಿ ಆತನು ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ವೈದ್ಯಕೀಯ ಚಿಕಿತ್ಸೆ ಲಭ್ಯವಿರದಿರುವ ಮತ್ತು ಅಗತ್ಯ ವೈದ್ಯಕೀಯ ಚಿಕಿತ್ಸೆ ಒದಗಿಸುವ ಸಲುವಾಗಿ ಅಂಥ ಚಿಕಿತ್ಸೆ ಲಭ್ಯವಿರುವ ಸ್ಥಳಕ್ಕೆ ವರ್ಗಾವಣೆ ಮಾಡುವುದು ಅವಶ್ಯಕವಾಗಿರುವ ನೌಕರನಿಗೆ,

–ನಿಯಮಗಳಲ್ಲಿ ರಚಿಸಲಾದ ಉಪಬಂಧಗಳಿಗೆ ಅನುಸಾರವಾಗಿ ಅಧಿಕಾರವಧಿಯ ಅಗತ್ಯತೆಯನ್ನು ಬಿಟ್ಟುಕೊಡಬಹುದು ಅಥವಾ ಸಡಿಲಗೊಳಿಸಬಹುದು:

ಪರಂತು, ಖಾಯಿಲೆಯ ಸ್ವರೂಪವನ್ನು ನಿರ್ದಿಷ್ಟಪಡಿಸಿ, ಆತನು ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಅಗತ್ಯ ಚಿಕಿತ್ಸೆ ಲಭ್ಯವಿಲ್ಲವೆಂಬ ಪ್ರಮಾಣೀಕರಿಸಿ ಹೇಳಿ, ಯಾವ ಹತ್ತಿರದ ಸ್ಥಳದಲ್ಲಿ ಅಗತ್ಯ ಚಿಕಿತ್ಸೆ ಲಭ್ಯವಿಯೆಂದು ನಿರ್ದಿಷ್ಟಪಡಿಸಿ ಮತ್ತು ಅಗತ್ಯ ವೈದ್ಯಕೀಯ ಚಿಕಿತ್ಸೆಯನ್ನು ಆತನಿಗೆ ಒದಗಿಸುವ ಅಂಥ ಸ್ಥಳಕ್ಕೆ ಆತನನ್ನು ವರ್ಗಾವಣೆ ಮಾಡುವುದು ಅವಶ್ಯಕವೆಂದು ಪ್ರಮಾಣಿಕರಿಸಿ, ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ನೌಕರನು ಹಾಜರುಪಡಿಸಿದ ಹೊರತು ಯಾವುದೇ ವರ್ಗಾವಣೆಗಳನ್ನು ಪರಿಗಣಿಸತಕ್ಕದಲ್ಲ.

(3) ಯಾವೊಬ್ಬ ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯು, ವಯೋನಿವೃತ್ತಿಗೆ ಮೊದಲು ಕೊನೆಯ ಎರಡು ವರ್ಷಗಳ ಅವಧಿಯ ಹೊರತು ತನ್ನ ಸ್ವಂತ ತಾಲ್ಲೂಕಿನಲ್ಲಿ ನಿಯೋಜನೆಗೆ ಹಕ್ಕುಳ್ಳವರಾಗಿರತಕ್ಕದಲ್ಲ.

(4) ಯಾವುದೇ ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ಆತನು ಅಮಾನತುಗೊಂಡು ಪುನರ್‌ಸ್ಥಾಪಿತವಾದ ತರುವಾಯ ಅದೇ ಹುದ್ದೆಗೆ ಅಥವಾ ಯಾವುದೇ ಪ್ರವರ್ಗ "ಬಿ" ಮತ್ತು "ಸಿ" ಹುದ್ದೆಗೆ ಸ್ಥಳನಿಯುಕ್ತಿಗೊಳಿಸತಕ್ಕದ್ದಲ್ಲ.

**7. ಪ್ರತಿನಿಯೋಜನೆಯ ನಿಯಂತ್ರಣ.–** ಒಂದು ಕಛೇರಿಯಿಂದ ಇನ್ನೊಂದು ಕಛೇರಿಗೆ ಪ್ರತಿನಿಯೋಜನೆಯು ಅತ್ಯಾವಶ್ಯಕವಾಗಿರುವ ತಪ್ಪಿಸಲಾಗದ ಸಂದರ್ಭಗಳಿರುವಲ್ಲಿ, ಆಗ ಅಧಿಕಾರಿಗಳ ಅಥವಾ ಸಿಬ್ಬಂದಿಗಳ ಅಂಥ ನಿಯೋಜನೆಯನ್ನು ಹುದ್ದೆಗಳ ಅದೇ ಪ್ರವರ್ಗದಲ್ಲಿ ಮಾಡತಕ್ಕದ್ದು.

**8. ಸಕ್ಷಮ ಪ್ರಾಧಿಕಾರದ ಅಧಿಕಾರಗಳು.–** ಸಕ್ಷಮ ಪ್ರಾಧಿಕಾರವು, ಈ ಮುಂದಿನ ಸಂದರ್ಭಗಳಲ್ಲಿ, ಎಂದರೆ:–

(ಎ) ಶಿಸ್ತು ಕ್ರಮದ ಅಥವಾ ವ್ಯವಹರಣೆಗಳ ಸಂದರ್ಭದಲ್ಲಿ; ಅಥವಾ

(ಬಿ) ಮರು–ನಿಯೋಜನೆಯ ಕಾರಣದ ಪರಿಣಾಮವಾಗಿ ಹೆಚ್ಚುವರಿ ಸಿಬ್ಬಂದಿ ಅಥವಾ ಹುದ್ದೆಗಳು ಯಾವುವಾದರೂ ಇದ್ದರೆ,

– ಮಾತ್ರ ಸ್ಪಷ್ಟ ಖಾಲಿ ಹುದ್ದೆಗಳಿಗೆ ಸಾಮಾನ್ಯ ವರ್ಗಾವಣೆ ಹೊರತುಪಡಿಸಿದ ಕಾಲಾವಧಿಯಲ್ಲಿ ಅರಣ್ಯ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ಅಥವಾ ನಿಯೋಜನೆಯನ್ನು ಜಾರಿಗೆ ತರಲು ಅಧಿಕಾರವನ್ನು ಹೊಂದಿರುತ್ತದೆ.

**9. ದಂಡಗಳು.–** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಸ್ಥಳನಿಯುಕ್ತಿ ಅಥವಾ ನೇಮಕಾತಿ ಅಥವಾ ವರ್ಗಾವಣೆಯ ಆದೇಶವನ್ನು

ಯಾವೊಬ್ಬ ಸಕ್ಷಮ ಪ್ರಾಧಿಕಾರವು ಅಥವಾ ಯಾವೊಬ್ಬ ಸರ್ಕಾರಿ ನೌಕರನು ಮಾಡಿದರೆ, ಅಂಥ ಸಕ್ಷಮ ಪ್ರಾಧಿಕಾರವು ಅಥವಾ ಸಂದರ್ಭಾನುಸಾರವಾಗಿ ಸರ್ಕಾರಿ ನೌಕರನು ಅಂಥ ಸಿವಿಲ್ ನೌಕರನಿಗೆ ಅನ್ವಯವಾಗುವ ಸಂಬಂಧಪಟ್ಟ ಶಿಸ್ತು ನಿಯಮಗಳ ಅಡಿಯಲ್ಲಿ ಶಿಸ್ತು ಕ್ರಮಕ್ಕೆ ಗುರಿಯಾಗತಕ್ಕದ್ದು.

**10. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಮತ್ತು ತೊಂದರೆಗಳನ್ನು ನಿವಾರಿಸಲು ತನಗೆ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವ ಅಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಅಂಥ ಯಾವುದೇ ಆದೇಶವನ್ನು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯಗೊಂಡ ತರುವಾಯ ಮಾಡತಕ್ಕದ್ದಲ್ಲ.

**11. ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ.–** ಸರ್ಕಾರವು, ಅಧಿಸೂಚನೆಯ ಮೂಲಕ ಅನುಸೂಚಿ–I ಮತ್ತು IIರಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ನಮೂದುಗಳನ್ನು ಸೇರಿಸಬಹುದು ಅಥವಾ ಮಾರ್ಪಡಿಸಬಹುದು.

**12. ಸದ್ಭಾವನೆಯಲ್ಲಿ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಯಾವುದೇ ಕ್ರಮದ ಬಗ್ಗೆ ಸರ್ಕಾರದ ಯಾವೊಬ್ಬ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ.

**13. ನಿಯಮಗಳ ರಚನಾಧಿಕಾರ.–** (1) ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ, ಅಧಿಸೂಚನೆಯ ಮೂಲಕ ಮತ್ತು ಪೂರ್ವಪ್ರಕಟಣೆಯನ್ನು ನೀಡಿದ ತರುವಾಯ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಎಲ್ಲ ನಿಯಮಗಳನ್ನು ಅವುಗಳನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಮುಂದೆ ಅದು ಅಧಿವೇಶನದಲ್ಲಿದ್ದರೆ ಮಂಡಿಸತಕ್ಕದ್ದು ಮತ್ತು ಅದು ಅಧಿವೇಶನದಲ್ಲಿಲ್ಲದಿದ್ದರೆ, ಆಗ ಒಂದು ಅಧಿವೇಶನ ಅಥವಾ ಎರಡು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಹದಿನಾಲ್ಕು ದಿವಸಗಳ ಅವಧಿಯವರೆಗಿನ ತಕ್ಷಣದ ಅಧಿವೇಶನದಲ್ಲಿ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಇಡಲಾದ ಅಥವಾ ನಿಕಟಪೂರ್ವದ ಅಧಿವೇಶನ ಕೊನೆಗೊಳ್ಳುವ ಮೊದಲು ರಾಜ್ಯ ವಿಧಾನ ಮಂಡಲವು ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಲು ಅಥವಾ ನಿಯಮದ ರದ್ದತಿಗೆ ಒಪ್ಪಿದರೆ, ನಿಯಮವು, ಮಾರ್ಪಾಡನ್ನು ಅಥವಾ ರದ್ಧತಿಯನ್ನು ಅಧಿಸೂಚಿಸಿದ ದಿನಾಂಕದಿಂದ, ಅಂಥ ಮಾರ್ಪಾಡಾದ ರೂಪದಲ್ಲಿ ಮಾತ್ರ ಜಾರಿಗೆ ಬರತಕ್ಕದ್ದು ಅಥವಾ ಸಂದರ್ಭಾನುಸಾರ ರದ್ದಾಗತಕ್ಕದ್ದು. ಆದಾಗ್ಯೂ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ದತಿಯು, ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದರ ಸಿಂಧುತ್ವಕ್ಕೂ ಬಾಧಕವಾಗತಕ್ಕದ್ದಲ್ಲ.

**14. ಇತರ ಕಾನೂನುಗಳ ಮೇಲೆ ಅಧ್ಯಾರೋಹಿ ಪರಿಣಾಮ.–** ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ರಾಜ್ಯದ ಯಾವುದೇ ಇತರ ಕಾನೂನಿನಲ್ಲಿ ಅದಕ್ಕೆ ಅಸಂಗತವಾಗಿರುವುದು ಏನೇ ಇದ್ದರೂ, ಪರಿಣಾಮಕಾರಿಯಾಗಿರತಕ್ಕದ್ದು.

## ಅನುಸೂಚಿ–I

(2(8)ನೇ ಪ್ರಕರಣವನ್ನು ಮತ್ತು 11ನೇ ಪ್ರಕರಣವನ್ನು ನೋಡಿ)

### ಅರಣ್ಯ ಅಧಿಕಾರಿಗಳ ಪಟ್ಟಿ

| ಕ್ರಮ ಸಂಖ್ಯೆ | ಹುದ್ದೆಗಳ ಪ್ರವರ್ಗ |
|---|---|
| 1. | ಉಪವಲಯ ಅರಣ್ಯ ಅಧಿಕಾರಿಗಳು |
| 2. | ಅರಣ್ಯ ರಕ್ಷಕರು |
| 3. | ಅರಣ್ಯ ಕಾವಲುಗಾರರು |

## ಅನುಸೂಚಿ-II

(2(13)ನೇ ಪ್ರಕರಣವನ್ನು ಮತ್ತು 11ನೇ ಪ್ರಕರಣವನ್ನು ನೋಡಿ)

**ಇತರ ಸಿಬ್ಬಂದಿಗಳ ಪಟ್ಟಿ**

| ಕ್ರಮ ಸಂಖ್ಯೆ | ಹುದ್ದೆಗಳ ಪ್ರವರ್ಗ |
|---|---|
| 1 | ಸರ್ಕಾರವು ಅಧಿಸೂಚಿಸಬಹುದಾದ ಅಂಥ ವರ್ಗದ ಹುದ್ದೆಗಳು. |

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

ಈ ಮುಂದಿನ ಉದ್ದೇಶಗಳನ್ನು ಸಾಧಿಸಲು, ಎಂದರೆ:–

(ಎ) ವರ್ಗಾವಣೆಗಳ ಸಮಯದಲ್ಲಿ ಕೆಳ ಹಂತದ ಸಿಬ್ಬಂದಿಗಳಿಗೆ ಅವರುಗಳ ಆಯ್ಕೆಯ ಸ್ಥಳವನ್ನು ಆರಿಸಿಕೊಳ್ಳುವಲ್ಲಿ ಸಮಾನ ಅವಕಾಶವನ್ನು ಕಲ್ಪಿಸಲು; ಮತ್ತು

(ಬಿ) ಸಿಬ್ಬಂದಿಯಲ್ಲಿ ಕಾರ್ಯಕ್ಷಮತೆ ಮತ್ತು ಶಿಸ್ತನ್ನು ವೃದ್ಧಿಸಲು,

– ಅರಣ್ಯ ಇಲಾಖೆಯ ಉಪವಲಯ ಅರಣ್ಯ ಅಧಿಕಾರಿಗಳು, ಅರಣ್ಯ ರಕ್ಷಕರು ಮತ್ತು ಅರಣ್ಯ ಕಾವಲುಗಾರರ ವರ್ಗಾವಣೆ ಮತ್ತು ಸ್ಥಳನಿಯುಕ್ತಿಯನ್ನು ನಿಯಂತ್ರಿಸುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ, ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಪ್ರತ್ಯಾಯೋಜಿತ ಶಾಸನ ರಚನೆಗೆ ಸಂಬಂಧಿಸಿದ ಜ್ಞಾಪನಪತ್ರ**

| | |
|---|---|
| ಖಂಡ 2: | 2ನೇ ಖಂಡದ (17)ನೇ ಉಪಖಂಡವು, ಒಂದು ಸ್ಥಳ ಅಥವಾ ಹುದ್ದೆಯಲ್ಲಿ ಕೆಲಸ ಮಾಡುವುದಕ್ಕೆ ಅಗತ್ಯವಿರುವ ಕನಿಷ್ಠ ಅವಧಿಯ ಕುರಿತಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ 3: | (1)ನೇ ಉಪಖಂಡವು ಕೌನ್ಸಿಲಿಂಗ್ ಪ್ರಕ್ರಿಯೆಯ ವಿಧಾನದ ಕುರಿತಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ 6: | (1)ನೇ ಉಪಖಂಡವು ಪ್ರತಿಯೊಂದು ಪ್ರವರ್ಗದ ಹುದ್ದೆಗಳ ಅಧಿಕಾರಾವಧಿಯ ಕುರಿತಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ 13: | (1)ನೇ ಉಪಖಂಡವು ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಪೂರ್ವ ಪ್ರಕಟಣೆಯ ತರುವಾಯ, ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**

***ತೀರ್ಪುಗಾರರ ಮಾದರಿ ಅಂಕ ಪಟ್ಟಿ***

***ದಿನಾಂಕ . . . 20. . .ರ ಜಿಲ್ಲಾ/ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆಯ ಅಂಕಪಟ್ಟಿ***

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ವಿದ್ಯಾರ್ಥಿ ಹಾಗೂ ಪದವಿ ಪೂರ್ವ ಕಾಲೇಜಿನ ಹೆಸರು ಹಾಗೂ ಪ್ರಥಮ/ ದ್ವಿತೀಯ ಪಿಯುಸಿ | ಶಿಸ್ತು ಮತ್ತು ಸಭ್ಯತೆ (ಗರಿಷ್ಠ 10 ಅಂಕಗಳು) | ಸಂಸದೀಯ ಕಾರ್ಯ ವಿಧಾನದ ಪಾಲನೆ (ಗರಿಷ್ಠ 20 ಅಂಕಗಳು) | ಪ್ರಶ್ನೆಗಳಿಗಾಗಿ ವಿಷಯಗಳ ಆಯ್ಕೆ ಹಾಗೂ ಅವುಗಳಿಗೆ ನೀಡಿದ ಉತ್ತರಗಳ ಗುಣಮಟ್ಟ (ಗರಿಷ್ಠ 20 ಅಂಕಗಳು) | ಚರ್ಚೆಗಳಿಗೆ ವಿಷಯಗಳ ಆಯ್ಕೆ (ಗರಿಷ್ಠ 10 ಅಂಕಗಳು) | ಮಾಡಿದ ಭಾಷಣದ ಶೈಲಿ ಅಥವಾ ಮೌಲ್ಯ ಚರ್ಚೆಗಳ ಗುಣಮಟ್ಟ (ಗರಿಷ್ಠ30 ಅಂಕಗಳು) | ಒಟ್ಟಾರೆ ಸಾಧನೆಯ ಸಾಮಾನ್ಯ ಮೌಲ್ಯ ಮಾಪನ (ಗರಿಷ್ಠ 10 ಅಂಕಗಳು) | ಒಟ್ಟು 100 ಅಂಕಗಳು |
|---|---|---|---|---|---|---|---|---|---|
| 1 | | | | | | | | | |
| 2 | | | | | | | | | |

***ಜಿಲ್ಲಾ /ರಾಜ್ಯ ಮಟ್ಟದಲ್ಲಿ ಭಾಗವಹಿಸಿದ ಸ್ಪರ್ಧೆಗಳ ಪಟ್ಟಿ (ಶಾಲೆಯ ಹೆಸರು, ಸ್ಪರ್ಧಾರ್ಥಿಗಳ ಹೆಸರು)***

***ಜಿಲ್ಲಾ /ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆಗಳ ವಿವರಗಳು 20 –***

| ಕ್ರಮ ಸಂಖ್ಯೆ | ಭಾಗವಹಿಸಿದ ಸ್ಪರ್ಧಾರ್ಥಿಗಳ ಹೆಸರು ಸ್ಥಳ/ಜಿಲ್ಲೆ | ಪದವಿಪೂರ್ವ ಕಾಲೇಜಿನ ಹೆಸರು ಸ್ಥಳ/ಜಿಲ್ಲೆ |
|---|---|---|
| 1 | | |
| 2 | | |
| 3 | | |
| 4 | | |
| 5 | | |
| ಪದವಿಪೂರ್ವ ಕಾಲೇಜುಗಳ ಒಟ್ಟು ಸಂಖ್ಯೆ | | ವಿದ್ಯಾರ್ಥಿಗಳ ಒಟ್ಟು ಸಂಖ್ಯೆ |
| | | |

***ಜಿಲ್ಲೆಗಳ ವಿವರ***

| ಸ್ಪರ್ಧೆಯಲ್ಲಿ ವೈಯಕ್ತಿಕ ಬಹುಮಾನ ಪಡೆದವರ ಸಂಖ್ಯೆ | ಸ್ಪರ್ಧೆಯಲ್ಲಿ ಮೊದಲ ಐದು ಸ್ಥಾನ ಗಳಿಸಿದ ವಿದ್ಯಾರ್ಥಿಗಳ ಹೆಸರು ಮತ್ತು ಜಿಲ್ಲೆ | ಪಡೆದ ಅಂಕಗಳು | ಪದವಿಪೂರ್ವ ಕಾಲೇಜಿನ ಹೆಸರು |
|---|---|---|---|
| | | | |
| | | | |
| | | | |
| | | | |

* * * * *

ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಕಾ.ಸೂ. ಪಿಬ್ಲ್ಯೂಎಸ್ 526 –ಪ್ರತಿಗಳು 300–ಪಿ6